ಪುಸ್ತಕ ಪ್ರಪಂಚ

ಅಕ್ಟೋಬರ್-೧೯೯೭

50



ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ಮೈಸೂರು-೫೭೦ ೦೦೬

ಪುಸ್ತಕ ಪ್ರಪಂಚ

ಮಾಸಿಕ

ಸಂಪುಟ ೪೮ ಸಂಚಿಕೆ-೧

ಅಕ್ಟೋಬರ್-೧೯೯೭

ಮುಖ ಚಿತ್ರ

ಚಿಂತನೆಯಲ್ಲಿ ಸಂತ : ಗಾಂಧೀಜಿ

ಪರಿವಿಡಿ

PUSTAKA PRAPANCHA : Monthly

Published and printed by Karnataka State Adult Education Council, Mysore-6. Price : Rupees Six

ಬಿಡಿಪ್ರತಿ : ರೂ. ೬

ವಾರ್ಷಿಕ ಚಂದಾ : ರೂ. ೬೦

ಅಜೀವ ಸದಸ್ಯತ್ವ ಚಂದಾ :

ವ್ಯಕ್ತಿಗೆ : ರೂ. ೪೦೦

ಸಂಸ್ಥೆಗೆ : ರೂ. ೬೦೦

ಪ್ರಕಟಣೆ

ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ

ಮೈಸೂರು–೫೭೦ ೦೦೬

ಸಮಾಜವಾದ—ಗಾಂಧಿ ದೃಷ್ಟಿ

ಪ್ರೊ॥ ಕೆ. ಬಿ. ಪ್ರಭುಪ್ರಸಾದ್
೧೧, ದೇವಸ್ಥಾನ ರಸ್ತೆ, ಜಯಲಕ್ಷ್ಮೀಪುರಂ
ಮೈಸೂರು-೫೭೦ ೧೧೩

ರಾಜಕಾರಣವನ್ನು ಪ್ರವೇಶಿಸುತ್ತಿದ್ದ ಹಾಗೆ ಗಾಂಧೀಜಿ ಮೊದಲು ಯೋಚಿಸ ತೊಡಗಿದುದು ಆಸೆ-ಆಮಿಷಗಳ ಬಲೆಗೆ ಬೀಳ ದಿರಲು ಯಾವ ಉಪಾಯ, ಎಚ್ಚರ ಒಳಿತು ಎಂದು. ಅಂತಹ ನಿರ್ಮೋಹವನ್ನು ಬೆಳೆಸಿ ಕೊಳ್ಳಲು ಮಾಡಿದ ಅವರ ಪ್ರಯತ್ನಗಳು ಸ್ವಾರಸ್ಯವಾಗಿವೆ. ಅದೊಂದು ಕಠೋರವಾದ ಹೋರಾಟ. ಕೆಲವು ಸಲ ಹೆಂಡತಿ-ಮಕ್ಕ ಳೊಡನೆ ಜಗಳ ಸಹ ಮಾಡಬೇಕಾಯಿತು. ಜನತಾ ಸೇವೆ ಎಂದರೆ ನೂರಾರು ಕಷ್ಟ ಕಾರ್ಪಣ್ಯಗಳಲ್ಲಿ ಮುಳುಗಿರುವವರ ಸೇವೆ. ಅವರ ಸ್ಥಿತಿಯನ್ನು ಕಣ್ಣಾರೆ ನೋಡಿಯೂ ಅವರಿಗಿಲ್ಲದ ಸುಖ-ಸಂಪದವನ್ನು ತಾನು ಆಶಿಸುವುದು ಹೇಗೆ? ಸೇವಾದೀಕ್ಷೆಯನ್ನು ಕೈಕೊಂಡ ಮೇಲೆ ಗಾಂಧೀಜಿ ತನ್ನದಾಗಿ ಆಸ್ತಿಪಾಸ್ತಿ ಮಾತಿರಲಿ ಯಾವುದನ್ನೂ ಇಟ್ಟುಕೊಳ್ಳಕೂಡದೆಂಬ "ಅಪರಿಗ್ರಹ" ವ್ರತ ಹಿಡಿದರು. ಒಂದೊಂದಾಗಿ ಸ್ವಾರ್ಥ ಪೋಷಕವಾದ ವಸ್ತುಗಳನ್ನು ತೊರೆಯುತ್ತ ಬಂದರು. ಅದೇನು ಸುಲಭದ ಮಾತಾಗಿರ ಲಿಲ್ಲ. ಆ ಸಾಧನೆಯಲ್ಲಿ ಅವರು ಬಹು ಕಷ್ಟ ದಿಂದ ಹೆಣಗಿದರು. ದಿನ ಕಳೆದ ಹಾಗೆ ಅಚಲ ನಿರ್ಧಾರದಿಂದ ತನ್ನಲ್ಲಿದ್ದ ಅನೇಕ ವಸ್ತು ಗಳನ್ನು ತ್ಯಜಿಸಿದರು. ತ್ಯಜಿಸುವುದೆಷ್ಟು ಕಷ್ಟ ಎನ್ನುತ್ತಿದ್ದವರು ಕ್ರಮೇಣ, ತ್ಯಜಿಸು ವುದರಲ್ಲಿ ಎಂಥಾ ಸುಖ ಇದೆ ಎಂದು ಕಂಡು ಕೊಂಡರು. ಮೊದಲು ಒಂದನ್ನು ತ್ಯಜಿಸಿ ದವರು ನಂತರ ಎರಡನ್ನು, ಬಳಿಕ ನಾಲ್ಕು, ಎಂಟು ಈ ಲೆಕ್ಕದಲ್ಲಿ ಹಲವಾರು ಅಗತ್ಯ ಎಂದು ತಾವು ಮೊದಲು ಭ್ರಮಿಸಿದ್ದ ವಸ್ತು ಗಳನ್ನು ತೊರೆದರು.

"ನನ್ನ ಹೆಗಲ ಮೇಲಿಂದ ಒಂದು ದೊಡ್ಡ ಭಾರವನ್ನೇ ಇಳಿಸಿದಂತಾಯಿತು. ನಾನು ನಿರಾತಂಕವಾಗಿ ನೆಮ್ಮದಿಯಿಂದ ಓಡಾಡು ವಂತಾಯಿತು. ಜನತಾ ಸೇವೆಯನ್ನು ಸುಸೂತ್ರವಾಗಿ ಮಾತ್ರವಲ್ಲ ಮೊದಲಿಗಿಂತ ಹೆಚ್ಚು ಹರ್ಷೋತ್ಸಾಹಗಳಿಂದ ಮಾಡ ಬಹುದು ಎಂದೆನಿಸಿತು. ಇಂಥ ಭಾವಸ್ಥಿತಿ ಯಲ್ಲಿ ಏನನ್ನಾದರೂ ನನ್ನದು ಎಂದು ಭಾವಿಸುವುದೂ ಮನಸ್ಸಿಗೆ ಅಪ್ರಿಯವಾಗಿ ಕಾಣತೊಡಗಿತು" ಎಂದು ಗಾಂಧೀಜಿ ಆಗಿನ ಅನುಭವವನ್ನು ಬರೆಯುತ್ತಾರೆ.

ಪರಿತ್ಯಾಗದಿಂದ ಬರುವ ಸಂತೋಷದ ಗುಟ್ಟು ಏನಿರಬಹುದು ಎಂದು ಯೋಚಿಸ ತೊಡಗಿದಾಗ ಅವರಿಗೆ ಅನೇಕ ವಿಚಾರಗಳು ಹೊಳೆದವು. ಏನಾದರೊಂದನ್ನು ತಮ್ಮ ದೆಂದು ಸಂಪಾದಿಸಿ ಇಟ್ಟುಕೊಂಡಾಗ ಲೋಕ ವೆಲ್ಲದರ ಕೈಯಿಂದ ಅದನ್ನು ರಕ್ಷಿಸಿಕೊಳ್ಳ

ಬೇಕಾಗುತ್ತದೆ. ಜಗತ್ತಿನಲ್ಲಿ ಬಹುಜನರಿಗೆ ಅದು ಬೇಕು ಎಂದರೂ ಲಭಿಸಿರುವುದಿಲ್ಲ. "ಅಭಾವಕ್ಕೊಳಗಾದ ಹಸಿದ ಜನ ತಮ್ಮಲ್ಲಿ ಇಲ್ಲದ ಪದಾರ್ಥ ನನ್ನಲ್ಲಿರುವುದನ್ನು ಕಂಡು ಅಪಹರಿಸಲು ಇಲ್ಲವೆ ಅದರಲ್ಲಿ ಕೊಂಚ ಪಾಲು ಪಡೆಯಲು ಯತ್ನಿಸುತ್ತಾರೆ. ಅದು ಸಹಜ. ಆಗ ನಾನು ಪೊಲೀಸರ ರಕ್ಷಣೆ ಬೇಡ ಬೇಕಾಗುತ್ತದೆ. ಅಲ್ಲದೆ ಅವರಿಗೆ ನನಗಿಂತಲೂ ಹೆಚ್ಚು ಅಗತ್ಯವಾಗಿರುವ ವಸ್ತುವನ್ನು ನಾನು ಕಾನೂನಿನ ಹೆಸರಲ್ಲೇ ಆಗಲಿ ನನ್ನ ದೆಂದು ಇಟ್ಟುಕೊಳ್ಳುವುದು ಅಧರ್ಮ ಎನಿಸಿತು. ಅವರು ಅದನ್ನು ನನ್ನಿಂದ ಬಲಾತ್ಕಾರವಾಗಿಯಾದರೂ ಕಸಿದುಕೊಳ್ಳು ವುದರಲ್ಲಿ ತಪ್ಪೇನೂ ಇಲ್ಲ. ಯಾವುದು ಎಲ್ಲರಿಗೂ ಬೇಕು ಎಂದಕೂಡಲೆ ದೊರೆಯು ವುದೊ ಅದು ಮಾತ್ರ ನನಗೂ ದೊರೆಯಲಿ." ಹೀಗೆ ಅವರ ವಿಚಾರಲಹರಿ ಹರಿಯಿತು. ಆದರೆ ಲೋಕದಲ್ಲಿ ಎಲ್ಲರಿಗೂ ಬೇಕಾದ ಜೀವನದ ಅಗತ್ಯವಸ್ತುಗಳೆಲ್ಲವೂ ದೊರೆಯು ವುದು ಅಸಂಭವವಾಗಿಯೆ ಇದುವರೆಗಿನ ಅನುಭವದಲ್ಲಿ ಕಂಡಿದೆ. ಯಾವುದೂ ತನ್ನ ದಲ್ಲ. ಆದ್ದರಿಂದ ಯಾವುದನ್ನೂ ತಾನು ಕೂಡಿಟ್ಟುಕೊಳ್ಳಬಾರದು ಎಂಬ ಭಾವನೆ ಯನ್ನಿಟ್ಟುಕೊಳ್ಳುವುದೊಂದೇ ಸಾಧ್ಯವಾದ ಪರಿಹಾರ. ಯಾವ ಪದಾರ್ಥವನ್ನೂ ತನಗೆ ಸೇರಿದುದು ಎಂದು ಭಾವಿಸಬಾರದು. ಯಾರಿಗೆ ಅದರ ಅಗತ್ಯವಿದೆಯೊ ಅವರಿಗೆ ಅದು ಸೇರಬೇಕು. ಲೋಭ ಸಹಜವಾಗಿ ಎಲ್ಲರಲ್ಲೂ ಇರಬಹುದು. ಆದರೆ ಎಲ್ಲರೂ ಸಮಾನವಾಗಿ ಶ್ರೀಮಂತರಾಗುವುದು ಅಸಂಭವನೀಯ. ಆದ್ದರಿಂದ ಸಾಧ್ಯವಾಗ ಬಹುದಾದುದು ಎಲ್ಲರೂ ಬಡತನವನ್ನು ಒಂದು ವ್ರತ ಎಂಬ ಹಾಗೆ ಅದನ್ನು ಸ್ವಯಂ-ವಿಚ್ಛೆಯಿಂದ ಸ್ವೀಕರಿಸುವುದು. ಸ್ವೀಕರಿಸಿ ಸಂಕಲ್ಪ ಮಾಡಿದ ಮೇಲೆ ನಮ್ಮ ಕೈಲಾದ ಮಟ್ಟಿಗೆ(ಪರಿಪೂರ್ಣತೆ ಎಂಬುದು ಯಾವುದ ರಲ್ಲೂ ಸಾಧ್ಯವಿಲ್ಲದ ಕಾರಣ) ಆಚರಣೆಗೆ ತರುವುದು. ಲೋಭವನ್ನು ತೊರೆದರೆ ಇದು ಕಷ್ಟವಲ್ಲ. ಆಗ ಒಂದು ಸಂಗತಿ ಅನುಭವಕ್ಕೆ ಬರುತ್ತದೆ. ಯಾವುದೂ ನಮ್ಮ ಸ್ವಂತದ್ದಲ್ಲ ಎಂದು ಅರಿತರೆ ಇಡೀ ಜಗತ್ತಿನ ಸಂಪತ್ತೆಲ್ಲವೂ ಒಂದು ಅರ್ಥದಲ್ಲಿ ಎಲ್ಲರದೂ (ಆದ್ದರಿಂದ ನಮ್ಮದೂ) ಹೌದು ಎಂಬ ಭಾವ ಬೆಳೆಯು ತ್ತದೆ. ಅದರಲ್ಲಿ ನಮ್ಮ ಅಗತ್ಯಕ್ಕೆ ಬೇಕಾ ದಷ್ಟನ್ನು ತೆಗೆದುಕೊಂಡು ಉಳಿದುದನ್ನು ಇತರರ ಉಪಯೋಗಕ್ಕೆ ಬಿಡುವುದು ಸ್ವಭಾವವಾಗುತ್ತದೆ.

> ಈಶಾವಾಸ್ಯಮಿದಂ ಸರ್ವಂ,
> ಯತ್ಕಿಂಚ ಜಗತ್ಯಾಂ ಜಗತ್
> ತೇನ ತ್ಯಕ್ತೇನ ಭುಂಜೀಥಾ
> ಮಾ ಗೃಧಃ ಕಸ್ಯಸ್ವಿದ್ಧನಂ ॥

(ಈ ಜಗತ್ತೆಲ್ಲವೂ ಈಶ್ವರನ ಮನೆ ಅದರ ಸಂಪದವೆಲ್ಲವೂ ಅವನದೇ. ಅದರಲ್ಲಿ ನಮಗೆಷ್ಟು ಬೇಕೋ ಅಷ್ಟನ್ನು ಮಾತ್ರ ಬಳಸಬೇಕು. ಲೋಭ-ದುರಾಸೆ ಬೇಡ. ಸಂಪತ್ತು ಯಾರದ್ದೆಂದು ತಿಳಿದಿರುವೆ!)

ಹೀಗೆ ತಿಳಿದು ನಡೆಯುವುದೇ ಶ್ರೇಷ್ಠ ವಾದುದು. ಹೀಗೆ ಗಾಂಧೀಜಿ ಹೇಳುವ ಬಡತನದವ್ರತ ಭಾರತೀಯರಿಗೆ ಉಪನಿಷತ್ ದ್ರಷ್ಟಾರರಿಂದ ದೀಕ್ಷೆಯಾಗಿ ಬಂದ ಸನಾತನ ಧರ್ಮ. ಪಾಶ್ಚಾತ್ಯ ವಿಚಾರವಂತರಿಗೆ ಇದು ಅಚ್ಚ ಹೊಸ ಬೆಳಕಾಗಿ ಕಾಣಬಹುದು. ಯೇಸುವು, "ಬಡತನ ಎಂಬುದು ನಿಜಕ್ಕೂ

ದೇವರ ಕೃಪೆ ಬಡತನದಲ್ಲೇ ಶ್ರೇಷ್ಠ ಗುಣಗಳು ಬೆಳೆಯುತ್ತವೆ. ಸಿರಿವಂತರು ಸ್ವರ್ಗಕ್ಕೆ ಹೋಗುವುದು ಆನೆಅಂಬಾರಿಯ ಮೇಲೆ ಕುಳಿತ ಸವಾರ ಸೂಜಿಯ ಕಣ್ಣಿನಲ್ಲಿ ತೂರಿ ಹೋಗುವುದು ಸಾಧ್ಯವಾದಾಗಲೇ" ಎಂದು ಹೇಳಿರುವನಾದರೂ ಬಡತನವನ್ನು ಒಂದು ಧರ್ಮವಾಗಿ, ವ್ರತವಾಗಿ ಸ್ವೀಕರಿಸಬೇಕು ಎಂದು ಹೇಳಲಿಲ್ಲ. ಬಡತನದಲ್ಲಿ ಹುಟ್ಟಿದವರು, ಬಡವರಾಗಿರುವವರು ಏಸುವಿನ ಮಾತಿನಿಂದ ಸಮಾಧಾನಪಟ್ಟುಕೊಳ್ಳಬಹುದಷ್ಟೆ. ಸಿರಿವಂತರು ಲೋಭವನ್ನು ಬಿಡಬೇಕು ಎಂದು ಇದರ ಇಂಗಿತಾರ್ಥವಿರಬಹುದು. ಭಾರತದಲ್ಲಿ ಸಹ ಉಪನಿಷತ್ತಿನ ಈ ಅಮೂಲ್ಯವಾಣಿ ಕೇವಲ ಮಾತುಗಳಲ್ಲಿ ಉನ್ನತ ತತ್ವವಾಗಿ ಮಾತ್ರ ಉಳಿಯಿತೇವಿನಹ ಆಚರಣೆಯಲ್ಲಿ ಬರಲಿಲ್ಲ.

ಬಸವಣ್ಣನವರು ಮಾತ್ರ ಈ ತತ್ವವನ್ನು ತಮ್ಮ ಬದುಕಿನಲ್ಲಿ ನಡೆದು ಎತ್ತಿಹಿಡಿದರು.

"ಹೊನ್ನಿನೊಳಗೊಂದೊರೆಯ,
ಸೀರೆಯೊಳಗೊಂದೆಳೆಯ
ಇಂದಿಂಗೆ ನಾಳಿಂಗೆ ಬೇಕೆಂದೆನಾದರೆ,
ನಿಮ್ಮಾಣೆ, ನಿಮ್ಮ ಪುರಾತನರಾಣೆ,
ನಿಮ್ಮ ಶರಣರಿಗಲ್ಲದೆ ಮತ್ತೊಂದನರಿಯೆ
ಕೂಡಲಸಂಗಮದೇವಾ"

ಎಂಬ ವಚನ ಅವರ ನಡೆಯ ನುಡಿ. ಸ್ವಾರ್ಥಕ್ಕಾಗಿ ಆಸ್ತಿ, ಹಣ ಸಂಗ್ರಹ ಮಾಡುವುದು ಸರಿಯಲ್ಲ ಎಂಬುದು ಅವರ ದೃಢವಾದ ನಿಲುವು. ತನಗೆ ಎಷ್ಟು ಅಗತ್ಯವೊ ಅಷ್ಟು ಹಣವನ್ನು ಮಾತ್ರ ಸಂಪಾದಿಸಿದರೆ ಸಾಕು ಎಂಬುದಾದರೆ ಇಷ್ಟೆಲ್ಲ ಶ್ರಮ ಏಕೆ ಎಂದು ಹಲವರು ಆಸಕ್ತಿ-ಉತ್ಸಾಹ ಕಳೆದುಕೊಳ್ಳಬಹುದು. ಈ ಕಾರಣಕ್ಕಾಗಲಿ, ಎಲ್ಲವನ್ನೂ ದೇವರೇ ಒದಗಿಸುವನೆಂಬ ನಂಬಿಕೆಯ ನೆಪದಿಂದಾಗಲಿ, ಸೋಮಾರಿಗಳಾಗುವುದಲ್ಲ. ಅಪಾರವಾದ ಸಂಪತ್ತು-ಆಸ್ತಿ ಮಾಡುವ ಆಸೆ ಪ್ರೇರಣಾಶಕ್ತಿಯಾದಾಗ ಅತಿಶಯವಾದ ಆಸಕ್ತಿ, ಉತ್ಸಾಹ, ಕಾರ್ಯಶ್ರದ್ಧೆ ಉಂಟಾಗುವುದೇನೊ ಸಹಜ. ಆದರೆ ಆ ಬಗೆಯ ಸ್ವಾರ್ಥ, ಲೋಭಗಳ ಪರಿಣಾಮ ಏನಾಗಬಹುದೆಂಬುದನ್ನು ಈಗಿನ ಸಮಾಜದ ದುಸ್ಥಿತಿ, ನಮ್ಮ ನಿತ್ಯದ ಅನುಭವಗಳೇ ತೋರುತ್ತಿವೆ.

ಭಗವತ್ಕೃಪೆಯಲ್ಲಿ ನಂಬಿಕೆ ಇದ್ದ ಮಾತ್ರಕ್ಕೆ ಕುಳಿತಲ್ಲೇ ಬೇಡಿದ ಅನ್ನ ಬಂದುಬಿಡುವುದಿಲ್ಲ. ಬಂದರೂ ದುಡಿಯದೆ ಉಣ್ಣುವುದು ಸಾಮಾಜಿಕ ಅಪರಾಧ. ಭಕ್ತಿ, ವೈರಾಗ್ಯ ಸೋಮಾರಿತನಕ್ಕೆ ನೆಪಗಳಾಗಬಾರದು. ಮನವೊಪ್ಪುವ ಯಾವುದಾದರೊಂದು ವೃತ್ತಿಯನ್ನು ಕೈಕೊಂಡು ತನಗಾಗಿ ಮತ್ತು ಶರಣರ ಸೇವೆಗಾಗಿ ಶ್ರಮಪಟ್ಟು ದುಡಿದು ಸಂಪಾದಿಸಬೇಕು. "ಕಾಯಕವೇ ಕೈಲಾಸ". "ಶಿವಶರಣನ ದೇಹ ವೃಥಾ ಸವೆಸಲಾಗದು" (ಉಂಡಾಡಿ ಬದುಕಿನಲ್ಲಿ, ಸೋಮಾರಿತನದಲ್ಲಿ) ಎಂಬ ಮಾತುಗಳು ಸೂಚಿಸುವ ಮನೋಧರ್ಮವನ್ನೇ ಗಾಂಧೀಜಿ ಎತ್ತಿಹಿಡಿಯುತ್ತಾರೆ.

ಸ್ವಯಂ ಸಂತೋಷದಿಂದ ಸ್ವೀಕರಿಸುವ ಬಡತನ ಒಂದು ಅಭೂತಪೂರ್ವವಾದ ಉನ್ನತ ತತ್ವ. ಆದರೆ ಯಾವುದೇ ತತ್ವವನ್ನು ಪಾಲಿಸುವಾಗ ಅದರ ಅಂತರಾರ್ಥಕ್ಕೆ ಉದ್ದೇಶಕ್ಕೆ ಮೊದಲು ಗಮನಕೊಡಬೇಕು. ಅಕ್ಷರಶಃ ಪಾಲಿಸಹೋಗಿ ತತ್ವವನ್ನು ಬಹಿರಾಡಂಬರದ 'ಅತಿ'ಗೆ ಎಳೆಯಬಾರದು.

ಬಾಪೂಜಿ ಈ ಬಗೆಗೆ ಸಮರ್ಪಕವಾದ ವಿವರಣೆ ಕೊಡುತ್ತಾರೆ. ದೇಹ ಎನ್ನುವುದೊಂದಿದ್ದ ಮೇಲೆ ಅದರ ರಕ್ಷಣೆಗೆ, ಮರ್ಯಾದೆಗೆ, ಬಟ್ಟೆ ಹಾಕಿಕೊಳ್ಳುವುದು ಒಂದು ಅವಶ್ಯಕತೆ. ಬಟ್ಟೆ ಎಂದರೆ ಆಸೆಯಾಗುವುದೆಲ್ಲವನ್ನು, ಕೊಂಡುಕೊಳ್ಳಬಹುದಾದ್ದನ್ನೆಲ್ಲ ಹಾಕಿಕೊಂಡು ಉಡುಪಿನ ಪ್ರದರ್ಶನಮಾಡಬೇಕು ಎಂದಲ್ಲ. ಎಷ್ಟು ಅಗತ್ಯವೊ ಅಷ್ಟುಮಾತ್ರ ಇಟ್ಟುಕೊಳ್ಳುವುದು. ಅದಕ್ಕಿಂತ ಕಡಿಮೆ ಆಗುವುದೇ ಇಲ್ಲ ಎಂಬಷ್ಟು ಸ್ವಲ್ಪ. ಹಾಗೆಯೆ ಇರಲು ಒಂದು ಮನೆಬೇಕು. ಎಷ್ಟು ದೊಡ್ಡ ಮನೆ? ಎಂಥಾಮನೆ? ಭಾರಿ ಬಂಗಲೆಯೊ, ಅರಮನೆಯೊ ಅಲ್ಲ. ಮಧ್ಯಮವರ್ಗದ ಮನೆ ಎಂದರೂ ನಾಗರಿಕ ಪ್ರತಿಷ್ಠೆಗಾಗಿ ಕುರ್ಚಿ, ಸೋಫಾ, ಇತ್ಯಾದಿ ಪೀಠೋಪಕರಣ, ಕಾರ್ಪೆಟ್ಟು, ಇತರ ಅಲಂಕಾರದ ವಸ್ತುಗಳು ಎಲ್ಲಾ ಬೇಕುತಾನೆ? ಎಲ್ಲಕೊಠಡಿಗಳೂ ಅಂದವಾಗಿರಬೇಕು. ಅಲಂಕೃತವಾಗಿರಬೇಕು. ಈ ಬೇಕುಗಳ ಪಟ್ಟಿಗೆ ಕೊನೆಎಲ್ಲಿ? ಸಾಮಾನು ಹೆಚ್ಚಾಗಿದ್ದಷ್ಟೂ. ಉತ್ತಮವರ್ಗದವರು, ಸುಸಂಸ್ಕೃತರು ಎನ್ನುತ್ತಾರೆ. ಈ ಬಗೆಯ ಸಭ್ಯಸಮಾಜದ ಪ್ರತಿಪಾದಕರಿಗೆ ಬಾಪೂಜಿಯ ಮಾತು ಹಿಡಿಸುವುದಿಲ್ಲ. ಅಷ್ಟೇ ಅಲ್ಲ ಬಾಪೂಜಿ ಕಂಡು ನೊಂದ ವಾಸ್ತವ ಜೀವನವೂ ಕಣ್ಣಿಗೆ ಕಾಣಿಸುವುದಿಲ್ಲ.

ಬಾಪೂಜಿ ಬಹುಸಂಖ್ಯಾತರಾದ ಬಡಜನರ ನಿತ್ಯಜೀವನವನ್ನು ನೋಡಿಯೆ ಸಮಾಜವಾದದ ಹೊಸ ಮನೋಧರ್ಮವನ್ನು ರೂಪಿಸಿದರು. ಇದೇನು ಅತಿ ಆದರ್ಶದ, ಪೂರ್ಣ ನಿಸ್ವಾರ್ಥ ಅಲ್ಲ. ಪ್ರಯೋಗ ಸಾಧ್ಯವಾದುದು. ಸ್ವಾರ್ಥವೇ ಇಲ್ಲದ ಜನ ಎಲ್ಲೂಸಿಕ್ಕುವುದಿಲ್ಲ. ಆದರೆ ಸ್ವಾರ್ಥವೇ ಸರ್ವಸ್ವವಲ್ಲ. ಸ್ವಾರ್ಥವನ್ನು ಮಿತಿಗೊಳಿಸಿಕೊಂಡು ಪರಾರ್ಥ ಹಿತಸಾಧನೆಯಲ್ಲಿ ದೊರೆಯುವ ಸುಖದೊಡ್ಡದು. ಅದರ ರುಚಿ ಒಮ್ಮೆ ಕಂಡರೆ ಸ್ವಾರ್ಥಸುಖ ಅಷ್ಟು ರುಚಿಸುವುದಿಲ್ಲ. ನಮಗಾಗಿ ಎಂದು ಎಷ್ಟು ಕಡಿಮೆ ವಸ್ತುಗಳನ್ನಿಟ್ಟುಕೊಳ್ಳುತ್ತೇವೆಯೊ ಅಷ್ಟಕ್ಕಷ್ಟು ಅಪೇಕ್ಷೆಗಳು ಕಡಿಮೆಯಾಗುತ್ತ ಹೋಗುತ್ತವೆ. ಆಸೆ ಕಡಿಮೆಯಾದಷ್ಟೂಸುಖ-ಶಾಂತಿ ಹೆಚ್ಚಾಗುತ್ತವೆ, ಭೌತಿಕ ಸುಖಅಲ್ಲ, ತೃಪ್ತಿಯ ಸುಖ.

"ನಿಜದಲ್ಲಿ ಈ ಕಾಯವೂ ನಮ್ಮದಲ್ಲ. ಇದೊಂದು ಬಾಡಿಗೆಮನೆ. ದೇವರು ತಾತ್ಕಾಲಿಕ ಉಪಯೋಗಕ್ಕೆಂದು ಇದನ್ನು ಕೊಟ್ಟಿದ್ದಾನೆ. ಎಂದಾದರೊಂದು ದಿನ ಅವನೇ ಇದನ್ನು ವಾಪಾಸು ತೆಗೆದುಕೊಂಡು ಬಿಡುತ್ತಾನೆ. ಈ ಭಾವನೆಯಲ್ಲಿ ನನಗೆ ಸಂಪೂರ್ಣ ಶ್ರದ್ಧೆ ಇರುವುದರಿಂದಲೆ ಈ ದೇಹವನ್ನು ದೇವರ ಇಚ್ಛೆಗೆ ಒಪ್ಪಿಸಿಬಿಡುವುದೇ ನನ್ನ ಸದಾಕಾಲದ ಆಸೆ. ಈ ಕಾಯ ನನ್ನದಾಗಿರುವವರೆಗೂ ಇದನ್ನು ವಿಷಯೋಪಭೋಗಗಳಲ್ಲಿ ಸವೆಸಿ ಹಾಳುಮಾಡದೆ ನಿದ್ರಿಸುವ ಸಮಯದ ಹೊರತು ಉಳಿದೆಲ್ಲ ಕಾಲದಲ್ಲೂ ಅದು ಲೋಕಸೇವೆಗೆ ವಿನಿಯೋಗವಾಗಿರಬೇಕು. ದೇಹವನ್ನೇ ನಾವು ಇಷ್ಟು ಎಚ್ಚರದಿಂದ ಸದುಪಯೋಗಪಡಿಸಬೇಕು ಎಂದಾದರೆ ಇನ್ನು ಉಡುಗೆತೊಡಿಗೆ ಮುಂತಾದ ವಸ್ತುಗಳ ಬಗ್ಗೆ ಹೇಳಬೇಕಾಗಿಯೆ ಇಲ್ಲ. ನಮಗೆ ಎಷ್ಟುಬೇಕೊ ಅಷ್ಟನ್ನು ಮಾತ್ರ ನಾವಿರಿಸಿಕೊಂಡು ಇತರರ ಅಗತ್ಯಗಳಿಗೆ ಅವು ದೊರಕುವಂತೆ ಅವಕಾಶಮಾಡಿಕೊಡಬೇಕು. ಸಮಾಜದಲ್ಲಿ

ಎಲ್ಲರ ಅಗತ್ಯಗಳಿಗೂ ಅವರವರ ನಿಲುಕಿನಲ್ಲಿ ಸುಲಭವಾಗಿ ವಸ್ತುಗಳು ದೊರೆಯುವಂತಾಗಬೇಕು."—ಇದು ಗಾಂಧೀಜಿಯ ವಿಚಾರಧಾರೆ. ಆಳವಾಗಿ ಆಲೋಚಿಸುತ್ತ ಹೋದರೆ ಈಗ ಆಸೆಗಳಿಗೆ ಕಡಿವಾಣ ಹಾಕದೆ, ಅಮಾನವೀಯ ಪೈಪೋಟಿ, ನೀತಿರಹಿತ ಸಂಪಾದನೆಯ ಗೀಳು—ಇತ್ಯಾದಿಗಳಿಂದ ಆಗುತ್ತಿರುವ ನೈಸರ್ಗಿಕ ಸಂಪನ್ಮೂಲಗಳ ದುಂದು ಬಳಕೆ, ಅದರಿಂದ ಅಭಾವ, ಉಳ್ಳವರ ದುರಾಸೆ—ಅತಿಸಂಗ್ರಹ, ಇಲ್ಲದವರ ಶೋಚನೀಯಸ್ಥಿತಿ ಎಲ್ಲವೂ ಬಯಲಿಗೆ ಬರುತ್ತವೆ.

ಶ್ರೀಮಂತರಾಗಬೇಕು ಎಂಬ ಲೋಭಕ್ಕೆ ಮಿತಿಯೇ ಇಲ್ಲ. ಅಗತ್ಯಗಳಿಗೆ ಮಿತಿಯುಂಟು. "ದೇರ್ ಈಸ್ ಎನಫ್ ವೆಲ್ತ್ ಇನ್ ದಿಸ್ ವರ್ಲ್ಡ್ ಫಾರ್ ಎವ್ವೆರಿಬಾಡೀಸ್ ನೀಡ್ಸ್, ಬಟ್ ನಾಟ್ ಫಾರ್ ಎವ್ವೆರಿಬಾಡೀಸ್ ಗ್ರೀಡ್." (ಎಲ್ಲರ ಅಗತ್ಯಗಳನ್ನೂ ಪೂರೈಸಲು ಲೋಕದ ಸಂಪತ್ತು ಬೇಕಾದಷ್ಟಿದೆ ಆದರೆ ಲೋಭವನ್ನು ತೃಪ್ತಿಗೊಳಿಸುವಷ್ಟಿಲ್ಲ) ಎನ್ನುತ್ತಾರೆ ಗಾಂಧೀಜಿ. ನಮ್ಮ ಮನೋಧೋರಣೆ ಬದಲಾಗಬೇಕು. ಸಂಪತ್ತೆಲ್ಲವನ್ನೂ ಸಮಾನವಾಗಿ ಹಂಚಿಕೊಳ್ಳುವುದು ಅನುಷ್ಠಾನ ಸಾಧ್ಯವಲ್ಲದ ಮಾತು. ಜೀವನಾವಶ್ಯಕ ವಸ್ತುಗಳನ್ನು ಮಾತ್ರ ಸಮಾನವಾಗಿ ಹಂಚಿಕೊಳ್ಳಬಹುದು. ಅದಕ್ಕೆ ಪ್ರತಿಯೊಬ್ಬರೂ ಇತರರ ಬಗ್ಗೆ ಕಾಳಜಿ ತೋರಿಸಬೇಕು. ಸಮಾಜ ಹಾಗೂ ಸಹಮಾನವರ ಹಿತದ ಹೊಣೆಗಾರಿಕೆ ತಮ್ಮ ಮೇಲಿದೆಯೆಂದು ತಿಳಿದುಕೊಳ್ಳಬೇಕು. ಸ್ವಯಂಪ್ರೇರಿತ ಸರಳ ಜೀವನ (ಪ್ರತಿಷ್ಠಿತ ಶ್ರೀಮಂತವರ್ಗದವರ ದೃಷ್ಟಿಯಲ್ಲಿ "ಬಡತನ"ದ ಜೀವನ)ದ ದೀಕ್ಷೆಯೊಂದೇ ಗಾಂಧೀಜಿ ದಾರಿದ್ರ್ಯನಿರ್ಮೂಲನ ಸಮಸ್ಯೆಗೆ ಪರಿಹಾರ. ಇದೇ ಅವರ ದೃಷ್ಟಿಯಲ್ಲಿ ಸರ್ವಸಮತಾ ಶೈಲಿಯ ಸಮಾಜವಾದ. ಎಲ್ಲರ ಅಗತ್ಯಗಳೂ ತೃಪ್ತಿಕರವಾಗಿ ಪೂರೈಸಿದ ಮೇಲೆ, ಬದುಕಿಗೆ ಬೇಕಾದ ಸೌಕರ್ಯಗಳು ಎಲ್ಲರಿಗೂ ಸಮಾನವಾಗಿ ದೊರಕುವಂತಹ ಸಹಬಾಳ್ವೆಯ ವ್ಯವಸ್ಥೆ ಆಗಬೇಕು. ಕೆಲವರ ಅದ್ಧೂರಿಯ ವಿಲಾಸ ಜೀವನ–ಉಳಿದ ಹಲವರ ಹೊಟ್ಟೆಬಟ್ಟೆಗೂ ಸಾಕಾಗದಿರುವ ದಾರಿದ್ರ್ಯಸ್ಥಿತಿ—ಈ ವೈಪರೀತ್ಯ ಸಾಮಾಜಿಕ ವ್ಯವಸ್ಥೆಯ ದೊಡ್ಡ ಕಳಂಕ. ಅದಕ್ಕೆ ಕಾರಣರಾದವರ ಅಕ್ಷಮ್ಯ ಅಪರಾಧ. ಈ ಹಿನ್ನೆಲೆಯಲ್ಲಿ ಗಾಂಧೀಜಿಯ ಈ ಮಾನವೀಯ ಮಾರ್ಗ, ಗಂಭೀರವಾದ ಚಿಂತನೆ, ಪರಿಗಣನೆ ಮತ್ತು ಆಚರಣೆಗೆ ಯೋಗ್ಯವಾದುದು.

ತಿರಸ್ಕರಣೆ, ಹಿಂದುಳಿದಿರುವಿಕೆ
ಶೋಷಣೆಯ ಗುರುತು

—ಗಾಂಧೀಜಿ

ಅಸಾಮಾನ್ಯ ವ್ಯಕ್ತಿ—ಗಾಂಧೀಜಿ

ಜಿ. ವೈದೇಹಿ

೩೫೮, ಪುನರ್ವಸು, ನವಿಲು ಮುಖ್ಯ ರಸ್ತೆ,
ಕುವೆಂಪುನಗರ, ಮೈಸೂರು-೫೭೦ ೦೨೩

ಸತ್ಯ ಒಂದು ಆದರ್ಶ: ಸೌಂದರ್ಯವನ್ನು ಸತ್ಯದ ಪರಿವೇಷವೆಂದೂ ಮುಖ ವನ್ನು ಸತ್ಯದ ಜಂಗಮ ಮುಖವೆಂದೂ ಹೇಳುವುದುಂಟು. ಮುಖ ನಮಗೆ ಗೋಚರ, ಸತ್ಯ ಈ ಗೋಚರತೆಯಲ್ಲಿ ಅಂತರ್ಗತವಾಗಿರುವ ಶಾಶ್ವತತೆ ಎಂದೇ ಸತ್ಯಶೋಧನೆ ಎಂದರೆ ಆದರ್ಶದೆಡೆಗಿನ ಸುಂದರ ಪ್ರಯಾಣ. ಈ ಪಯಣಿಗನಿಗೆ ತಿಳಿಯುತ್ತದೆ; ದೈನಂದಿನ ವಿವಿಧ ಘಟನೆಗಳಲ್ಲಿಯೂ ಸತ್ಯದ ಪರಿವೇಶ ಸ್ಫುರಣ ವಾಗುತ್ತಲೇ ಇರುವುದು. ಇಂಥ ಸ್ಫುರಣಗಳನ್ನು ಗುರುತಿಸಿ ಅರ್ಥವಿಸಿ ಅನುಷ್ಠಾನಿಸುವಾತ ಜಗದ್ವಂದ್ಯನಾಗುತ್ತಾನೆ. ಉತ್ಕೃಷ್ಟ ನಿದರ್ಶನ ಮಹಾತ್ಮ ಗಾಂಧಿ (೧೮೬೯–೧೯೪೮).

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದು ಐವತ್ತು ವರ್ಷಗಳಾಗಿ ಸುವರ್ಣ ಮಹೋತ್ಸವವನ್ನು ದೇಶ ಆಚರಿಸುತ್ತಿದೆ. ಸ್ವಾತಂತ್ರ್ಯಕ್ಕಾಗಿ ಸಾವಿರಾರು ಜನರು ಹೋರಾಡಿ ಪ್ರಾಣತ್ಯಾಗ ಮಾಡಿದ್ದಾರೆ. ಆ ಹುತಾತ್ಮರಿಗೆ ನಾವು ಸದಾ ಆಭಾರಿಗಳಾಗಿ ಅವರನ್ನು ನೆನಸಿಕೊಳ್ಳುವುದು ಆದ್ಯ ಕರ್ತವ್ಯ. ಅದರಲ್ಲಿ ಮೊದಲಿಗರು ಮಹಾತ್ಮಾ ಗಾಂಧೀಜಿ.

ಗಾಂಧೀಜಿ ನಮ್ಮ ದೇಶಕ್ಕಷ್ಟೇ ಸ್ವಾತಂತ್ರ್ಯ ತಂದು ಕೊಡಲಿಲ್ಲ. ಇಡೀ ಜಗತ್ತಿನ ಮಾನವಕುಲದ ಶಾಂತಿಗಾಗಿ ಹೋರಾಡಿದ ಧೀಮಂತ ಪುರುಷ. ಅವರ ಆದರ್ಶಗಳು ನಮಗೆ ದಾರಿದೀಪವಾಗಬೇಕು.

ಆ ಆದರ್ಶಗಳನ್ನು ಗಾಂಧೀಜಿ ಹೇಗೆ ಮೈಗೂಡಿಸಿಕೊಂಡರು ಎಂಬುದನ್ನು ಅವರ ಮಾತಿನಲ್ಲೇ ಕೇಳಬೇಕು. ಅವರು ತಮ್ಮ ಅನುಭವಗಳನ್ನು ಬರೆದಿದ್ದಾರೆ. ಆದರೆ ಅವನ್ನು ತಮ್ಮ ಆತ್ಮ ಕಥೆಯೆಂದು ಹೇಳಿಕೊಳ್ಳಲಿಲ್ಲ. ಕೇವಲ ಸತ್ಯಶೋಧನೆಗಾಗಿ ಮಾಡಿದ ಪ್ರಯೋಗಗಳ ಸಂಕಲನ ಎಂದರು. ತಮ್ಮ ಜೀವನದ ಅತಿ ಸಣ್ಣ ಸಣ್ಣ ಘಟನೆಗಳಿಂದಲೂ ದೊಡ್ಡ ದೊಡ್ಡ ಪಾಠವನ್ನೇ ಕಲಿತು ಮಾನವಕೋಟಿಗೆ ಆದರ್ಶಪ್ರಾಯರಾದರು. ಮಾನವೀಯ ಮೌಲ್ಯಗಳೇ ಧರ್ಮದ ಸಾರವೆಂದು ತಿಳಿದು ಅನುಷ್ಠಾನಿಸಿದವರು. ಈ ಮೌಲ್ಯಗಳ ಬೀಜಗಳನ್ನು ಪ್ರತಿ ಮಗುವಿನಲ್ಲೂ ಬಿತ್ತಬೇಕೆಂಬ ಉದ್ದೇಶದಿಂದಲೇ ಗಾಂಧೀಜಿ ತಮ್ಮ ಜೀವನದ ಅನುಭವಗಳನ್ನು ಬರೆದರು. ಅವುಗಳಲ್ಲಿ ಅತ್ಯಂತ ಮಾರ್ಮಿಕವೆನಿಸಿದ ಕೆಲವು ಘಟನೆಗಳನ್ನು ಅವರ ಮಾತಿನಲ್ಲೇ ಇಲ್ಲಿ ಪ್ರಸ್ತುತಪಡಿಸಿದೆ.

ಕದಿಯುವುದು

ಮಾಂಸ ತಿಂದು ಬ್ರಿಟಿಷರಷ್ಟೇ ಬಲಶಾಲಿಗಳಾಗಿ ಅವರನ್ನು ಭಾರತದಿಂದ ಹೊಡೆದೋಡಿಸಬಹುದೆಂದು ನನ್ನ ಮಿತ್ರ ಹೇಳಿದ ಒಂದೇ ಮಾತಿನಿಂದ ನಾನು ಅದನ್ನು ತಿನ್ನಲು ಪ್ರಾರಂಭಿಸಿದೆ. ಆಗಿನ್ನೂ ನನಗೆ ಹನ್ನೆರಡು ವಯಸ್ಸು.

ನನ್ನ ಬಂಧು ಒಬ್ಬನ ಜೊತೆ ಸಿಗರೇಟ್ ಸೇದತೊಡಗಿದೆ. ಧೂಮಪಾನದಲ್ಲಿ ಯಾವ ಒಳ್ಳೆಯದನ್ನೂ ಕಂಡು ಸೇದಲಿಲ್ಲ. ಅದರ ವಾಸನೆಯ ಇಷ್ಟದಿಂದಲೂ ಅಲ್ಲ. ಬಾಯಿಂದ ದಟ್ಟವಾದ ಹೊಗೆಯನ್ನು ಹೊರಬಿಡುವ ಅನುಭವವೇ ಒಂದು ರೀತಿಯ ಸಂತೋಷ ತರುತ್ತಿತ್ತು. ನನ್ನ ಚಿಕ್ಕಪ್ಪನಿಗೆ ಆ ಚಟವಿತ್ತು. ನಾವು ಅವರನ್ನೇ ಉದಾಹರಣೆಯಾಗಿ ತೆಗೆದುಕೊಂಡೆವು. ಆದರೆ ನಮ್ಮಲ್ಲಿ ಹಣವಿರಲಿಲ್ಲ. ನಮ್ಮ ಚಿಕ್ಕಪ್ಪ ಸೇದಿ ಬಿಸಾಡಿದ ಸಿಗರೇಟಿನ ತುಂಡುಗಳನ್ನು ಕದಿಯತೊಡಗಿದೆವು.

ಈ ತುಂಡುಗಳು ನಮಗೆ ಯಾವಾಗಲೂ ಸಿಗುತ್ತಿರಲಿಲ್ಲ. ಅವುಗಳಿಂದ ಹೊಗೆಯೂ ಅಷ್ಟಾಗಿ ಬರುತ್ತಿರಲಿಲ್ಲ. ಆದ್ದರಿಂದ ನಮ್ಮ ನೌಕರನ ಖರ್ಚಿಗೆಂದು ಕೊಡುತ್ತಿದ್ದ ಹಣದಿಂದ ನಾಣ್ಯಗಳನ್ನು ಕದ್ದು ಬೀಡಿಗಳನ್ನು ತೆಗೆದುಕೊಳ್ಳಲಾರಂಭಿಸಿದೆವು. ಆ ಬೀಡಿಗಳನ್ನು ಎಲ್ಲಿಟ್ಟುಕೊಳ್ಳುವುದೆಂದು ಸಮಸ್ಯೆಯಾಯಿತು. ಹಿರಿಯರ ಎದುರಿನಲ್ಲಿ ನಾವು ಸೇದುವಂತಿರಲಿಲ್ಲ. ನಾವು ಕಳುವು ಮಾಡಿದ ತಾಮ್ರದ ನಾಣ್ಯಗಳು ಕೆಲವು ದಿನಗಳವರೆಗೆ ಸಾಕಾಯಿತು. ಒಂದು ರೀತಿಯ ಗಿಡದ ಕಾಂಡದ ತುಂಡುಗಳನ್ನು ಸಿಗರೇಟಿನಂತೆಯೇ ಸೇದಬಹುದೆಂದು ತಿಳಿದು ಬಂತು. ಅವನ್ನು ಉಪಯೋಗಿಸಲಾರಂಭಿಸಿದೆವು.

ಆದರೆ ಅವುಗಳಿಂದ ನಮಗೆ ತೃಪ್ತಿ ಸಿಗಲಿಲ್ಲ. ನಮ್ಮ ಇಷ್ಟವನ್ನು ಪೂರೈಸಿಕೊಳ್ಳುವಷ್ಟೂ ನಮಗೆ ಸ್ವಾತಂತ್ರ್ಯವಿಲ್ಲವಲ್ಲ ಎಂಬ ಕೊರಗು ಬಾಧಿಸಿತು. ಯಾವುದನ್ನೂ ನಾವು ಹಿರಿಯರ ಅಪ್ಪಣೆ ಇಲ್ಲದೆ ಮಾಡುವಂತಿರಲಿಲ್ಲ. ಹೀಗಿರುವುದಕ್ಕಿಂತ ಸಾಯುವುದೇ ಲೇಸೆಂದು ನಾವು ತೀರ್ಮಾನಿಸಿದೆವು.

ಹೇಗೆ ಆತ್ಮಹತ್ಯೆ ಮಾಡಿಕೊಳ್ಳುವುದು? ವಿಷವನ್ನು ಎಲ್ಲಿಂದ ತರುವುದು? ದತ್ತೂರಿ ಬೀಜಗಳು ಪರಿಣಾಮಕಾರಿ ವಿಷವೆಂದು ತಿಳಿದು ಬಂತು. ಸಂಜೆಯ ವೇಳೆ ಯುಕ್ತವೆನಿಸಿತು. ಕೇದಾರೇಶ್ವರ ದೇವಸ್ಥಾನಕ್ಕೆ ಹೋಗಿ ದೇವರ ದೀಪಕ್ಕೆ ತುಪ್ಪ ಸುರಿದು ದರ್ಶನ ಪಡೆದೆವು. ಯಾರೂ ಇಲ್ಲದ ಸ್ಥಳಕ್ಕೆ ಹೋದೆವು. ಕ್ರಮೇಣ ನಮ್ಮ ಧೈರ್ಯ ಕುಸಿಯುತ್ತಾ ಬಂತು. ಒಂದು ವೇಳೆ ನಾವು ತತ್‌ಕ್ಷಣವೇ ಸಾಯದಿದ್ದರೆ? ನಮ್ಮನ್ನು ನಾವೇ ಸಾಯಿಸಿಕೊಳ್ಳುವುದರಿಂದ ಪ್ರಯೋಜನವಾದರೂ ಏನು? ಆದರೂ ಎರಡು ಮೂರು ಬೀಜಗಳನ್ನು ನುಂಗಿದೆವು. ಮತ್ತಷ್ಟು ನುಂಗಲು ಮನಸ್ಸು ಬರಲಿಲ್ಲ. ನಮ್ಮಿಬ್ಬರಿಗೂ ಸಾಯಲು ಇಷ್ಟವಾಗಲಿಲ್ಲ. ರಾಮನ ದೇವಸ್ಥಾನಕ್ಕೆ ಹೋಗಿ ಮನಸ್ಸನ್ನು ಶಾಂತಗೊಳಿಸಿಕೊಂಡು ಆತ್ಮಹತ್ಯೆಯ ಯೋಚನೆಯನ್ನು ಕೈಬಿಡುವ ನಿರ್ಧಾರಕ್ಕೆ ಬಂದೆವು.

ಆತ್ಮಹತ್ಯೆ ಮಾಡಿಕೊಳ್ಳುವುದು ಸುಲಭವಲ್ಲವೆಂದು ಅಂದು ತಿಳಿದುಕೊಂಡೆ.

ತತ್ಪರಿಣಾಮವಾಗಿ ಕೊನೆಗೆ ಧೂಮ-ಪಾನ ಮಾಡುವುದನ್ನೂ ನೌಕರನ ಹಣ ಕದಿಯುವುದನ್ನೂ ನಿಲ್ಲಿಸಿಬಿಟ್ಟೆವು.

ಅಂದಿನಿಂದ ನನಗೆ ಧೂಮ ಪಾನ ಮಾಡುವ ಅಭಿಲಾಷೆಯೇ ನಿಂತು ಹೋಯಿತು. ಧೂಮಪಾನ ಮಾಡುವುದು ಅಸಭ್ಯ, ಕೊಳಕು ಮತ್ತು ಅಪಾಯಕಾರಿ ಚಟವೆಂದು ಪರಿಗಣಿಸಿದ್ದೇನೆ. ಹೀಗಿದ್ದರೂ ಪ್ರಪಂಚಾದ್ಯಂತ ಹೊಗೆ ಎಳೆಯುವ ಅಭಿಲಾಷೆ ಏಕಿದೆಯೋ ತಿಳಿಯುತ್ತಿಲ್ಲ. ಹೆಚ್ಚು ಪ್ರಯಾಣಿಕರು ಹೊಗೆಸೇದುತ್ತಿರುವ ರೈಲು ಬೋಗಿಯಲ್ಲಿ ಕುಳಿತು ಕೊಳ್ಳುವುದು ನನಗಿಷ್ಟವಿರಲಿಲ್ಲ. ಉಸಿರು ಕಟ್ಟಿದಂತಾಗುತ್ತಿತ್ತು.

ಕಳವು ಮಾಡಿದ ಆ ಅಪರಾಧ ನನ್ನನ್ನು ಕಾಡಿದ್ದಕ್ಕಿಂತಲೂ ಹೆಚ್ಚು ಇನ್ನೊಂದು ಘಟನೆ ನನ್ನಲ್ಲಿ ಅಪರಾಧೀ ಪ್ರಜ್ಞೆಯನ್ನು ಮೂಡಿಸಿತು. ನಾನು ನಾಣ್ಯಗಳನ್ನು ಕದಿಯಲು ಪ್ರಾರಂಭಿಸಿದಾಗ ನನಗೆ ಹನ್ನೆರಡು ಅಥವಾ ಹದಿಮೂರು ವಯಸ್ಸಿರಬಹುದು. ನಾನು ಹದಿನೈದನೇ ವಯಸ್ಸಿನಲ್ಲಿ ಮತ್ತೊಂದು ಸಲ ಚೌರ್ಯ ಮಾಡಿದೆ. ಈ ಸಲ ಮಾಂಸ ತಿನ್ನಲು ನನ್ನ ಸಹೋದರನ ಚಿನ್ನದ ಕೈ ಕಡಗದಿಂದ ಒಂದು ಚೂರು ಚಿನ್ನ ಕದ್ದೆ. ಈ ಸಹೋದರನಿಗೆ ಇಪ್ಪತ್ತೈದು ರೂಪಾಯಿಗಳಷ್ಟು ಸಾಲವಿತ್ತು. ಅವನ ಕೈಯಲ್ಲಿದ್ದ ಕಡಗದಿಂದ ಒಂದು ಚೂರು ಚಿನ್ನವನ್ನು ತೆಗೆಯುವುದು ಕಷ್ಟವಾಗಲಿಲ್ಲ.

ಸಾಲವನ್ನಂತೂ ತೀರಿಸಿದ್ದಾಯಿತು. ಆದರೆ ಈ ಕೃತ್ಯ ಮಾಡಿದ್ದು ನನಗೆ ಸ್ವಲ್ಪವೂ ಸರಿಬರಲಿಲ್ಲ. ನಾನು ಮತ್ತೆ ಕಳವು ಮಾಡುವುದಿಲ್ಲವೆಂದು ಶಪಥಮಾಡಿಕೊಂಡೆ. ನನ್ನ ತಂದೆಯ ಬಳಿ ನನ್ನ ತಪ್ಪಿನ ನಿವೇದನೆ ಮಾಡಿಕೊಳ್ಳಬೇಕೆಂದು ನಿಶ್ಚಯಿಸಿದೆ. ಆದರೆ ಎದುರು ನಿಂತು ಹೇಳುವಷ್ಟು ಧೈರ್ಯವಿರಲಿಲ್ಲ. ನನ್ನನ್ನು ನನ್ನ ತಂದೆ ಹೊಡೆಯುವರೆಂಬ ಭಯದಿಂದಲ್ಲ. ನಮ್ಮಲ್ಲಿ ಯಾರನ್ನೂ ಅವರು ಹೊಡೆದ ನೆನಪೇ ನನಗಿಲ್ಲ. ಈ ವಿಷಯ ತಿಳಿದು ಅವರಿಗೆ ಆಗುವ ನೋವು ನೆನೆದು ಭಯಗೊಂಡಿದ್ದೆ. ಆತ್ಮ ನಿವೇದನೆ ಇಲ್ಲದೆ ನಾನು ಪರಿಶುದ್ಧನಾಗುವುದು ಸಾಧ್ಯವಿಲ್ಲವಾದ್ದರಿಂದ ಈ ಪರಿಸ್ಥಿತಿಯನ್ನು ಎದುರಿಸಲೇಬೇಕೆಂದು ನಿಶ್ಚಯಿಸಿದೆ.

ತಂದೆಯವರಿಗೆ ಪತ್ರದ ಮೂಲಕ ತಿಳಿಸಿ ಅವರ ಕ್ಷಮಾಪಣೆ ಕೇಳುವುದೆಂದು ತೀರ್ಮಾನಿಸಿದೆ. ಅದರಂತೆಯೇ ಒಂದು ಪತ್ರ ಬರೆದು ಅವರ ಕೈಗೆ ಕೊಟ್ಟೆ. ಪತ್ರದಲ್ಲಿ ನನ್ನ ಅಪರಾಧವನ್ನೇ ಅಲ್ಲದೆ ಅದಕ್ಕೆ ತಕ್ಕ ಶಿಕ್ಷೆಯನ್ನು ಕೊಡಬೇಕೆಂದು ಕೇಳಿಕೊಂಡಿದ್ದೆ. ನನ್ನ ಈ ತಪ್ಪಿಗೆ ತಮ್ಮನ್ನೇ ಶಿಕ್ಷಿಸಿಕೊಳ್ಳಬಾರದೆಂದೂ ವಿನಂತಿಸಿಕೊಂಡಿದ್ದೆ. ಇನ್ನು ಮುಂದೆ ಕದಿಯುವುದಿಲ್ಲವೆಂದು ಮಾತು ಕೊಟ್ಟಿದ್ದೆ.

ನನ್ನ ತಂದೆಯವರಿಗೆ ಈ ಪತ್ರ ಕೊಡುವಾಗ ನನ್ನ ಇಡೀ ದೇಹ ನಡುಗುತ್ತಿತ್ತು. ಆಗ ಅವರು ಹುಷಾರಿಲ್ಲದೆ ಹಾಸಿಗೆ ಹಿಡಿದಿದ್ದರು. ಅವರ ಕೈಗೆ ಪತ್ರ ಕೊಟ್ಟು ಅವರ ಎದುರು, ಮಂಚದ ತುದಿಯಲ್ಲಿ ಕುಳಿತೆ.

ಅವರು ಎದ್ದು ಕುಳಿತು ಅದನ್ನು ಓದುತ್ತಿದ್ದಂತೆಯೇ ಕಣ್ಣಲ್ಲಿ ನೀರು ತುಂಬಿ ಕೆನ್ನೆಯ ಮೇಲೆ ಹರಿದು ಪತ್ರವನ್ನು ನೆನೆಸಿತು. ಒಂದು ಕ್ಷಣ ಕಣ್ಣುಮುಚ್ಚಿ

ಅನಂತರ ಅದನ್ನು ಹರಿದು ಹಾಕಿದರು. ಮತ್ತೆ ಮಲಗಿಕೊಂಡರು. ನನಗೂ ಅಳು ಉಕ್ಕಿ ಬಂತು. ಅವರು ಪಟ್ಟ ವ್ಯಥೆ ನೋಡ ಲಾಗಲಿಲ್ಲ. ನಾನೊಬ್ಬ ಚಿತ್ರಗಾರನಾಗಿದ್ದರೆ ಈ ದಿನ ಆ ದೃಶ್ಯವನ್ನು ಪೂರ್ತಿಯಾಗಿ ಚಿತ್ರಿಸುತ್ತಿದ್ದೆ. ಈಗಲೂ ಆ ಘಟನೆ ಮನಸ್ಸಿನಲ್ಲಿ ಅಷ್ಟು ಸ್ಫುಟವಾಗಿದೆ.

ಪ್ರೀತಿ ತುಂಬಿದ ತಂದೆಯವರ ಕಣ್ಣೀರು ನನ್ನ ಹೃದಯವನ್ನು ತೊಯ್ದು ಪರಿಶುದ್ಧವಾಗಿಸಿತು ಮತ್ತು ನನ್ನ ಪಾಪ ವನ್ನು ತೊಳೆಯಿತು. ಅವರು ಕುಪಿತ ರಾಗುವರೆಂದೂ ನನ್ನನ್ನು ಬೈಯ್ಯುವ ರೆಂದೂ ತಮ್ಮ ಹಣೆಯನ್ನು ಚಚ್ಚಿ ಕೊಳ್ಳುವರೆಂದೂ ನಾನು ಯೋಚಿಸಿದ್ದೆ. ಆದರೆ ಅವರ ಮುಖದಲ್ಲಿ ಅತ್ಯದ್ಭುತವಾದ ಶಾಂತತೆ ಇತ್ತು. ಬಹುಶಃ ಅದಕ್ಕೆ ನನ್ನ ಪರಿಶುದ್ಧ ಆತ್ಮ ನಿವೇದನೆಯೇ ಕಾರಣವಿರ ಬಹುದು. ಇಂತಹ ಆತ್ಮ ನಿವೇದನೆಯ ಜೊತೆಗೆ ಮತ್ತೆಂದೂ ಆ ಪಾಪ ಮಾಡು ವುದಿಲ್ಲವೆಂಬ ವಚನವನ್ನೂ ಒಬ್ಬ ಅರ್ಹ ವ್ಯಕ್ತಿಗೆ ಸಮರ್ಪಿಸುವುದೇ ಪಶ್ಚಾತ್ತಾಪದ ಅತ್ಯಂತ ಶುದ್ಧ ರೂಪ. ಈ ಆತ್ಮ ನಿವೇದನೆ ತಂದೆಗೆ ನನ್ನ ಮೇಲೆ ಪೂರ್ತಿ ವಿಶ್ವಾಸವಿಡು ವಂತೆ ಮಾಡಿತು. ನನ್ನ ಮೇಲಿನ ಪ್ರೀತಿ ಇನ್ನೂ ಹೆಚ್ಚಾಯಿತು.

ಮೊದಲ ಆಘಾತ

ನನ್ನ ಸಹೋದರ ತನ್ನ ಈಗಿನ ಅಧಿಕಾರ ವನ್ನು ವಹಿಸಿಕೊಳ್ಳುವ ಮೊದಲು ಪೋರ್ ಬಂದರಿನ ದಿವಂಗತ ರಾಣಾಸಾಹೆಬ್‌ರವರಲ್ಲಿ ಕಾರ್ಯದರ್ಶಿಯಾಗಿಯೂ ಸಲಹೆಗಾರ ನಾಗಿಯೂ ಕೆಲಸ ಮಾಡುತ್ತಿದ್ದ. ಇದೇ ಸಂದರ್ಭದಲ್ಲಿ ಒಂದು ಸಲ ಅವನು ಕೊಟ್ಟ ಸಲಹೆ ತಪ್ಪಾಗಿ ಅಪವಾದಕ್ಕೆ ಗುರಿ ಯಾಗಿದ್ದ. ಆತನ ಬಗ್ಗೆ ಪೂರ್ವಗ್ರಹ ಪೀಡಿತನಾಗಿದ್ದ ಒಬ್ಬ ಬ್ರಿಟಿಷ್ ರಾಜಕೀಯ ಅಧಿಕಾರಿಯವರೆಗೆ ಈ ವಿಷಯ ಹೋಗಿತ್ತು. ನನಗೆ ಈ ಅಧಿಕಾರಿಯ ಪರಿಚಯ ನಾನು ಇಂಗ್ಲೆಂಡಿ ನಲ್ಲಿದ್ದಾಗಲೇ ಆಗಿತ್ತು. ಈತ ನನಗೆ ಒಳ್ಳೆಯ ಗೆಳೆಯನೇ ಆಗಿದ್ದ. ಈ ಗೆಳೆತನ ವನ್ನು ಉಪಯೋಗಿಸಿಕೊಂಡು ಆತನಿಗೆ ಒಂದು ಮಾತು ಹೇಳುವುದರಿಂದ ಆ ಅಧಿ ಕಾರಿಗೆ ತನ್ನ ಮೇಲಿದ್ದ ಪೂರ್ವಗ್ರಹವನ್ನು ಅಳಿಸಿಹಾಕಬಹುದೆಂದು ನನ್ನ ಸಹೋದರ ಯೋಚಿಸಿದ. ನನಗೆ ಈ ಅಭಿಪ್ರಾಯ ಸ್ವಲ್ಪವೂ ಸರಿಬೀಳಲಿಲ್ಲ. ಇಂಗ್ಲೆಂಡಿನಲ್ಲಾದ ಈ ಪರಿಚಯದ ದುರುಪಯೋಗ ಮಾಡಿ ಕೊಳ್ಳುವುದು ಯುಕ್ತವಲ್ಲವೆಂದು ಯೋಚಿಸಿದೆ. ನಿಜವಾಗಲೂ ನನ್ನ ಸಹೋ- ದರ ತಪ್ಪಿತಸ್ಥನಾಗಿದ್ದರೆ ನನ್ನ ಶಿಫಾರಸಿನ ಪ್ರಯೋಜನವಾದರೂ ಏನು? ಅವನು ನಿರ್ದೋಷಿಯಾಗಿದ್ದರೆ ಯುಕ್ತ ರೀತಿಯಲ್ಲಿ ಫಿರ್ಯಾದು ಸಲ್ಲಿಸಿ ಪರಿಣಾಮ ಎದುರಿಸುವ ವಿಶ್ವಾಸವಿರಬೇಕು. ಈ ಸಲಹೆ ನನ್ನ ಸಹೋದರನಿಗೆ ಸರಿಬೀಳಲಿಲ್ಲ. "ನಿನಗೆ ಕಾಠಿಯಾವಾಡ ಸರಿಯಾಗಿ ತಿಳಿದಿಲ್ಲ. ನಿನ ಗಿನ್ನೂ ಪ್ರಪಂಚದ ಪರಿಚಯವಾಗಿಲ್ಲ. ಇಲ್ಲಿ ಶಿಫಾರಸು ಮಾತ್ರ ನಡೆಯುತ್ತದೆ. ನಿನಗೆ ಪರಿಚಯವಿರುವ ಅಧಿಕಾರಿಗೆ ಒಂದು ಮಾತು ಹೇಳುವ ಅವಕಾಶವಿರುವಾಗ ನನ್ನ ಸಹೋದರನಾಗಿ ಈ ರೀತಿ ಕರ್ತವ್ಯವಿಮುಖ ನಾಗುವುದು ಯುಕ್ತವಲ್ಲ" ಎಂದು ನನ್ನ ಸಹೋದರನು ಹೇಳಿದನು.

ಅವನ ಮಾತನ್ನು ತಿರಸ್ಕರಿಸಲಾಗಲಿಲ್ಲ. ನನ್ನ ಇಷ್ಟಕ್ಕೆ ವಿರುದ್ಧವಾಗಿ ಆ ಅಧಿಕಾರಿಯ ಬಳಿ ಹೋದೆ. ಈ ರೀತಿ ಹೋಗಲು ನನಗೆ ಹಕ್ಕಿಲ್ಲವೆಂದೂ ಇದಕ್ಕಾಗಿ ನನ್ನ ಸ್ವಾಭಿಮಾನವನ್ನು ಒತ್ತೆ ಇಡುತ್ತಿರುವೆನೆಂದೂ ನನಗೆ ಚೆನ್ನಾಗಿ ತಿಳಿದಿತ್ತು. ಆದರೂ ಸಂದರ್ಶನದ ವೇಳೆ ನಿಗದಿಪಡಿಸಿಕೊಂಡೆ. ನನ್ನ ಮತ್ತು ಆತನ ಇಂಗ್ಲೆಂಡಿನ ಪರಿಚಯ ಜ್ಞಾಪಿಸಿದೆ. ಕಾಥಿಯಾವಾಡ ಇಂಗ್ಲೆಂಡ್‌ಗಿಂತ ಭಿನ್ನವಾಗಿದೆಯೆಂದು ತತ್‌ಕ್ಷಣವೇ ತಿಳಿಯಿತು. ಆ ಅಧಿಕಾರಿ ನಮ್ಮ ಗೆಳೆತನವನ್ನು ಮರೆತಿರಲಿಲ್ಲ. ಅದರೆ ನಾನು ಆ ರೀತಿ ಜ್ಞಾಪಿಸಿದ್ದು ಆತನಿಗೆ ಸರಿಬೀಳಲಿಲ್ಲ. ಹುಬ್ಬು ಗಂಟಿಕ್ಕಿದ. ನೀನು ಈ ಗೆಳೆತನ ದುರುಪಯೋಗಪಡಿಸಿಕೊಳ್ಳಲು ಬಂದಿಲ್ಲವಷ್ಟೆ? ಎಂಬಂತಿತ್ತು ಆತನ ಹುಬ್ಬು. ಆದರೂ ನಾನು ಬಂದ ಉದ್ದೇಶ ಹೇಳತೊಡಗಿದೆ. ಆತ ತಾಳ್ಮೆಗೆಡುತ್ತಿದ್ದ. "ನಿನ್ನ ಸಹೋದರ ಒಬ್ಬ ಕಪಟಿ. ನಿನ್ನಿಂದ ನಾನೇನನ್ನೂ ಕೇಳಬಯಸುವುದಿಲ್ಲ. ಆತ ಏನಾದರೂ ಹೇಳಬೇಕೆಂದಿದ್ದರೆ–ಸರಿಯಾದ ರೀತಿಯಲ್ಲಿ ಅರ್ಜಿಹಾಕಲಿ" ಈ ಉತ್ತರವಷ್ಟೇ ಸಾಕಿತ್ತು. ಆದರೆ ಸ್ವಾರ್ಥ ಕುರುಡು. ನಾನು ಹೇಳುವುದನ್ನು ಮುಂದುವರಿಸುತ್ತಲೇ ಇದ್ದೆ. ಅಧಿಕಾರಿ ಎದ್ದು ನಿಂತು ಹೇಳಿದ, "ನೀನಿನ್ನು ಹೋಗಬಹುದು."

"ದಯವಿಟ್ಟು ನನ್ನ ಮಾತನ್ನು ಕೇಳಿಸಿಕೊಳ್ಳಿ" ಎಂದು ನಾನು ಮುಂದುವರಿಸಿದ ಕೂಡಲೇ ಆತನಿಗೆ ಬಹಳ ಕೋಪ ಬಂತು. ತನ್ನ ನೌಕರನನ್ನು ಕರೆದು ನನಗೆ ಹೊರಗೆ ಹೋಗಲು ಬಾಗಿಲನ್ನು ತೋರಿಸುವಂತೆ ಅಪ್ಪಣೆ ಮಾಡಿದನು. ನಾನಿನ್ನು ಹಾಗೆಯೇ ಅನುಮಾನಿಸುತ್ತಿರುವಾಗಲೇ ನೌಕರನು ತನ್ನ ಕೈಗಳನ್ನು ನನ್ನ ಭುಜದ ಮೇಲಿಟ್ಟು ಕೋಣೆಯಿಂದ ಹೊರಗೆ ಹಾಕಿದ.

ಅಧಿಕಾರಿ ಮತ್ತು ನೌಕರ ಹೊರಟು ಹೋದರು. ಕೋಪದಿಂದ ಬುಸುಗುಟ್ಟುತ್ತ ನಾನೂ ಹೊರಟೆ. ತತ್‌ಕ್ಷಣವೇ ನಾನು ಆ ಅಧಿಕಾರಿಗೆ ಒಂದು ಪತ್ರ ಬರೆದೆ: "ನೀವು ನನ್ನನ್ನು ಅವಮಾನ ಮಾಡಿರುವಿರಿ. ನಿಮ್ಮ ನೌಕರನ ಮೂಲಕ ನನ್ನ ಮೇಲೆ ಕೈ ಮಾಡಿದಿರಿ. ನಿಮ್ಮಿಂದ ಇದಕ್ಕೆ ಪ್ರತ್ಯುತ್ತರ ಬರದಿದ್ದರೆ ನಾನು ಇದನ್ನು ಕೋರ್ಟಿನಲ್ಲಿ ಮುಂದುವರಿಸಬೇಕಾಗುತ್ತದೆ."

ತತ್‌ಕ್ಷಣವೇ ಇದಕ್ಕೆ ಉತ್ತರ ಬಂತು: "ನಿನ್ನ ವರ್ತನೆ ಬಹಳ ಒರಟಾಗಿತ್ತು. ನಾನು ಹೊರಗೆ ಹೋಗೆಂದು ಹೇಳಿದರೂ ನೀನು ಹೋಗಲಿಲ್ಲ. ಆದ್ದರಿಂದ ನೀನು ಕೋಣೆಯಿಂದ ಹೊರ ಹೋಗಲು ಎಷ್ಟು ಬಲ ಬೇಕಿತ್ತೋ ಅಷ್ಟನ್ನು ಮಾತ್ರ ಆತ ನಿನ್ನ ಮೇಲೆ ಪ್ರಯೋಗ ಮಾಡಬೇಕಾಯಿತು. ನಿನ್ನ ಇಷ್ಟದಂತೆ ನೀನು ಕೋರ್ಟಿನಲ್ಲಿ ಮುಂದುವರಿಸಬಹುದು."

ಈ ಪತ್ರವನ್ನು ಜೇಬಿನಲ್ಲಿಟ್ಟುಕೊಂಡು ಅವಮಾನಿತನಾಗಿ ಮನೆಗೆ ಹಿಂತಿರುಗಿದೆ. ನಡೆದುದೆಲ್ಲವನ್ನೂ ನನ್ನ ಸಹೋದರನಿಗೆ ಹೇಳಿದೆ. ಅವನಿಗೂ ಬಹಳ ಬೇಸರವಾಯಿತು. ನನ್ನನ್ನು ಹೇಗೆ ಸಮಾಧಾನಪಡಿಸಬೇಕೆಂದು ಅವನಿಗೆ ತಿಳಿಯಲಿಲ್ಲ. ಅಧಿಕಾರಿಯ ವಿರುದ್ಧ ಹೇಗೆ ಮುಂದುವರಿಯಬಹುದೆಂದು ತನ್ನ ವಕೀಲಿ ಗೆಳೆಯರನ್ನು ಕೇಳಿದ. ಯಾವುದೋ ಕೇಸಿನ ಸಂಬಂಧವಾಗಿ ಮುಂಬಯಿಂದ ರಾಜಕೋಟೆಗೆ ಸರ್ ಫಿರೋಜ್ ಷಾ ಮೆಹ್ತಾ

ಆಗ ಬಂದಿದ್ದರು. ಕಿರಿಯ ವಕೀಲನಾದ ನಾನು ಅವರನ್ನು ಹೇಗೆ ಕಾಣುವುದು? ಅವರನ್ನು ಗೊತ್ತುಮಾಡಿದ್ದ ವಕೀಲರ ಮೂಲಕ ನನ್ನ ಕೇಸಿನ ಕಾಗದ ಪತ್ರಗಳನ್ನು ಕೊಟ್ಟು ಕಳುಹಿಸಿದೆ.

"ಗಾಂಧಿಗೆ ಹೇಳಿ. ಇಂಥ ಅನುಭವಗಳು ಅನೇಕ ವಕೀಲರಿಗೂ ಬ್ಯಾರಿಸ್ಟರ್‌ಗಳಿಗೂ ಸರ್ವೇಸಾಮಾನ್ಯವಾಗಿ ಆಗುತ್ತವೆ. ಇವನು ಇಂಗ್ಲೆಂಡ್‌ನಿಂದ ಇದೇ ತಾನೇ ಬಂದಿರುವ ಉತ್ಸಾಹೀ ತರುಣ ಮತ್ತು ಬಿಸಿರಕ್ತದವ. ಬ್ರಿಟಿಷ್ ಅಧಿಕಾರಿಗಳ ಬಗ್ಗೆ ಅವನಿಗಿನ್ನೂ ಗೊತ್ತಿಲ್ಲ. ಏನಾದರೂ ಸಂಪಾದನೆ ಮಾಡಿಕೊಂಡು ಏನೂ ತೊಂದರೆ ಇಲ್ಲದೆ ಇರಬೇಕೆಂದರೆ ಈ ಪತ್ರವನ್ನು ಹರಿದು ಹಾಕಿ ಅವಮಾನವನ್ನು ಜೇಬಿಗೆ ಹಾಕಿಕೊಳ್ಳಲಿ. ಆ ಅಧಿಕಾರಿಯ ವಿರುದ್ಧ ಹೋಗುವುದರಿಂದ ಇವನಿಗೇನೂ ಲಾಭವಿಲ್ಲ. ಬದಲಾಗಿ ತನ್ನನ್ನು ತಾನೇ ನಾಶಮಾಡಿಕೊಳ್ಳುತ್ತಾನೆ. ಇನ್ನೂ ಪ್ರಪಂಚವನ್ನು ಅರಿಯಬೇಕಾಗಿದೆಯೆಂದು ಅವನಿಗೆ ತಿಳಿಸಿ" ಎಂದು ಹೇಳಿ ಕಳುಹಿಸಿದರು.

ಅವರ ಸಲಹೆ ವಿಷದಷ್ಟೇ ಕಹಿ ಎನಿಸಿತು. ಆದರೂ ಅದನ್ನು ನುಂಗಬೇಕಾಯಿತು. ಅವಮಾನವನ್ನು ಜೇಬಿಗಿಳಿಸಿದೆನು. ಆದರೆ ಅದರಿಂದ ಲಾಭವೇ ಆಯಿತು. "ಎಂದಿಗೂ ಇಂಥ ಭ್ರಮನಿರಸನ ಸ್ಥಿತಿಗೆ ನನ್ನನ್ನು ನಾನು ತಂದುಕೊಳ್ಳುವುದಿಲ್ಲ—ಎಂದಿಗೂ ಈ ರೀತಿ ಗೆಳೆತನವನ್ನು ದುರುಪಯೋಗಪಡಿಸಿಕೊಳ್ಳುವುದಿಲ್ಲ" ಎಂದು ನನಗೆ ನಾನೇ ಹೇಳಿಕೊಂಡೆ. ಅಂದಿನಿಂದ ಈ ದೃಢ ನಿರ್ಧಾರವನ್ನು ಮೀರಿದ ಅಪರಾಧ ಪ್ರಜ್ಞೆ ನನ್ನನ್ನು ಕಾಡಿಲ್ಲ. ಈ ಆಘಾತ ನನ್ನ ಜೀವನದ ದಿಕ್ಕನ್ನೇ ಬದಲಾಯಿಸಿತು.

ದುಬಾರಿ ಉಡುಗೊರೆಗಳು

ದಕ್ಷಿಣ ಆಫ್ರಿಕಾದಲ್ಲಿ ನನ್ನ ಕೆಲಸ ಮುಗಿಯಿತು. ಇನ್ನು ನನ್ನ ದೇಶದಲ್ಲಿ ಮಾಡಬೇಕಾದ ಕೆಲಸ ಬಹಳವಿತ್ತು. ಭಾರತದ ನನ್ನ ಸ್ನೇಹಿತರು ಬೇಗ ಹಿಂತಿರುಗುವಂತೆ ಒತ್ತಾಯ ಮಾಡುತ್ತಿದ್ದರು. ನನ್ನನ್ನು ಬಿಟ್ಟುಕೊಡುವಂತೆ ನನ್ನ ಸಹೋದ್ಯೋಗಿಗಳನ್ನು ಕೇಳಿಕೊಂಡೆ. ಬಹಳ ಕಷ್ಟಪಟ್ಟು ಅವರನ್ನು ಒಪ್ಪಿಸಿದ್ದಾಯಿತು. ಆದರೆ ಒಂದು ಕರಾರಿನ ಮೇಲೆ ಒಪ್ಪಿಕೊಳ್ಳಲಾಯಿತು. ಈಗ ಭಾರತಕ್ಕೆ ಹೋದರೂ ನನ್ನ ಆವಶ್ಯಕತೆ ಬಿದ್ದಲ್ಲಿ ತತ್‌ಕ್ಷಣ ದಕ್ಷಿಣ ಆಫ್ರಿಕಾಕ್ಕೆ ಬರಬೇಕೆಂಬುದೇ ಆ ಕರಾರು. ಅನೇಕ ಕಡೆಗಳಲ್ಲಿ ಬೀಳ್ಕೊಡುಗೆ ಸಮಾರಂಭಗಳು ನಡೆದುವು. ದುಬಾರಿ ಉಡುಗೊರೆಗಳನ್ನು ನನಗೆ ಕೊಡಲಾಯಿತು. ಚಿನ್ನ, ಬೆಳ್ಳಿ ಅಲ್ಲದೆ ವಜ್ರಗಳಿಂದ ಕೂಡಿದ ಒಡವೆಗಳೂ ಸಾಮಾನುಗಳೂ ಸೇರಿದ್ದುವು.

ಈ ಉಡುಗೊರೆಗಳು ಬಂದ ದಿನ ಇಡೀ ರಾತ್ರಿ ನನಗೆ ನಿದ್ದೆ ಬರಲಿಲ್ಲ. ಮನಸ್ಸು ಬಹಳ ಅಸ್ತವ್ಯಸ್ತವಾಗಿ ಕೊಠಡಿಯಲ್ಲಿ ಒಂದೇ ಸಮನೆ ತಿರುಗಾಡತೊಡಗಿದೆ. ಪರಿಹಾರವೇ ಕಾಣಲಿಲ್ಲ. ನೂರಾರು ರೂಪಾಯಿಗಳ ಬೆಲೆ ಬಾಳುವ ಉಡುಗೊರೆಗಳನ್ನು ಬಿಟ್ಟುಕೊಡಲೂ ಆಗಲಿಲ್ಲ. ಅದಕ್ಕಿಂತ ಅವನ್ನು ಇಟ್ಟುಕೊಳ್ಳುವುದು ಇನ್ನೂ ಕಷ್ಟದ ಕೆಲಸವಾಗಿತ್ತು.

ನಾನು ಅವನ್ನ ಇಟ್ಟುಕೊಂಡರೂ ನನ್ನ ಮಕ್ಕಳು ಮತ್ತು ನನ್ನ ಹೆಂಡತಿ ನನ್ನ ಬಗ್ಗೆ ಏನು ತಿಳಿದುಕೊಳ್ಳಬಹುದು? ಅವರು ನನ್ನಿಂದ ಸೇವಾಜೀವನದ ಬಗ್ಗೆ ಕಲಿಯಬೇಕಿ

ಹೊಂದಿದ್ದರು. ಸೇವೆಯೇ ಒಂದು ಪುರಸ್ಕಾರ ಎಂಬ ಅರಿವನ್ನು ಮೂಡಿಸಿದ್ದೆನು.

ದುಬಾರಿ ಒಡವೆಗಳು ನನ್ನ ಮನೆಯಲ್ಲಿ ಇರಲಿಲ್ಲ. ನಾವು ನಮ್ಮ ಜೀವನವನ್ನು ತ್ವರಿತವಾಗಿ ಸರಳೀಕರಣ ಮಾಡಿಕೊಳ್ಳುತ್ತಿದ್ದೆವು. ಹೀಗಿರಬೇಕಾದರೆ ಚಿನ್ನದ ಗಡಿಯಾರವನ್ನಾಗಲೀ ವಜ್ರದ ಉಂಗುರವನ್ನಾಗಲಿ ಹೇಗೆ ಇಟ್ಟುಕೊಳ್ಳಲಿ? ಒಡವೆಗಳ ಮೇಲಿನ ವ್ಯಾಮೋಹ ಬೇಡವೆಂದು ಜನಗಳಲ್ಲಿ ಅರಿಕೆ ಮಾಡಿಕೊಳ್ಳುತ್ತಲೇ ಇದ್ದೆ. ಈಗ ತಾನಾಗಿಯೇ ನನ್ನ ಬಳಿ ಬಂದಿರುವ ಈ ಒಡವೆಗಳನ್ನೇನು ಮಾಡಲಿ?

ಇವನ್ನು ಇಟ್ಟುಕೊಳ್ಳಬಾರದೆಂದು ನಾನು ನಿರ್ಧರಿಸಿದೆ. ಈ ಒಡವೆಗಳನ್ನು ದಕ್ಷಿಣ ಆಫ್ರಿಕಾದ ಭಾರತ ಜನಾಂಗದವರಿಗೆ ವಿನಾಸಲಾಗಿಡುವ ಒಂದು ಕರಾರು ಪತ್ರ ಬರೆದೆ. ಇದಕ್ಕೆ ವಿಶ್ವಸ್ಥ ಸದಸ್ಯರಾಗಿ ಪಾರ್ಸಿ ರುಸ್ತುಮ್‌ಜೀ ಮುತ್ತಿತರನ್ನು ಹೆಸರಿಸಿದೆ.

ಮರುದಿನ ಬೆಳಗ್ಗೆ ನನ್ನ ಮಕ್ಕಳ ಮತ್ತು ನನ್ನ ಹೆಂಡತಿಯ ಸಲಹೆ ಪಡೆದು ಕೊನೆಗೂ ಈ ಭಾರದಿಂದ ಬಿಡುಗಡೆ ಹೊಂದಿದೆ. ನನ್ನ ಹೆಂಡತಿಯನ್ನು ಈ ಬಗ್ಗೆ ಸಮಾಧಾನಪಡಿಸುವುದು ಸ್ವಲ್ಪ ಕಷ್ಟವೆಂದು ತಿಳಿದರೂ ನನ್ನ ಮಕ್ಕಳ ಬಗ್ಗೆ ನನಗೆ ಪೂರ್ತಿ ವಿಶ್ವಾಸವಿತ್ತು.

ನನ್ನ ಸಲಹೆಯನ್ನು ನನ್ನ ಮಕ್ಕಳು ಮರುಮಾತಿಲ್ಲದೆ ಒಪ್ಪಿದರು. "ನಮಗೆ ಈ ದುಬಾರಿ ಉಡುಗೊರೆಗಳ ಆವಶ್ಯಕತೆ ಇಲ್ಲ. ಜನತೆಗೇ ಇದನ್ನು ಒಪ್ಪಿಸೋಣ. ಮುಂದೆ ನಮಗೆ "ಇದರ ಆವಶ್ಯಕತೆ ಬಿದ್ದಾಗ ನಾವು ಖರೀದಿಸಿದರಾಯಿತು" ಎಂದು ನನ್ನ ಮಕ್ಕಳು ಹೇಳಿದರು.

ಇದರಿಂದ ನನಗೆ ಬಹಳ ಸಂತೋಷವಾಯಿತು. ಹಾಗಾದರೆ ನಿಮ್ಮ ತಾಯಿಯನ್ನು ಒಪ್ಪಿಸುವಿರಲ್ಲವೇ?"

"ಖಂಡಿತವಾಗಿ, ಅದು ನಮ್ಮ ಕರ್ತವ್ಯ. ಈ ಒಡವೆಗಳನ್ನು ಅಕೆ ಹಾಕಿಕೊಳ್ಳಬೇಕಾಗಿಲ್ಲ. ನಮಗಾಗಿ ಅವಳು ಅದನ್ನು ಇಟ್ಟುಕೊಳ್ಳಬಯಸಬಹುದು. ಅವು ನಮಗೇ ಬೇಕಿಲ್ಲವಾದಲ್ಲಿ ಅವಳು ಇಟ್ಟುಕೊಂಡಾದರೂ ಏನು ಉಪಯೋಗ?" ಎಂದು ಹೇಳಿದರು.


"ನಿಮಗೆ ಅವು ಬೇಕಿಲ್ಲದಿರಬಹುದು. ನಿಮ್ಮ ಮಕ್ಕಳಿಗೂ ಬೇಡವಾಗಿರಬಹುದು. ನೀವು ಹಾಕಿದ ತಾಳಕ್ಕೆ ಕುಣಿಯುವವರು ನಿಮ್ಮ ಮಕ್ಕಳು. ನೀವು ನನ್ನನ್ನು ಒಡವೆ ಹಾಕಿಕೊಳ್ಳಬೇಡವೆಂದು ಹೇಳುವುದು ಸರಿಯೆನಿಸಿದರೂ ಮುಂದೆ ನನ್ನ ಸೊಸೆಯಾಗುವವರ ಇಷ್ಟವೇನಿದೆಯೋ? ಖಂಡಿತ ಅವರಿಗೆ ಒಡವೆಗಳು ಬೇಕೆನಿಸಬಹುದು. ನಾಳೆ ಏನಾಗುವುದೆಂದು ಈಗಲೇ ಏನು ಹೇಳಲು ಸಾಧ್ಯ? ಅಷ್ಟು ಪ್ರೀತಿಯಿಂದ ಕೊಟ್ಟ ಉಡುಗೊರೆಗಳನ್ನು ಬಿಟ್ಟುಕೊಡಲು ನನಗೆ ಮನಸ್ಸಿಲ್ಲ" ಕಸ್ತೂರಿ ಬಾ ಹೇಳಿದಳು.

ವಾಗ್ವಾದ ಹೀಗೆಯೇ ಮುಂದುವರಿದು ಅವಳ ಕಣ್ಣೀರಿನಲ್ಲಿ ಕೊನೆಗೊಂಡಿತು. ಆದರೆ ಒಡವೆಗಳನ್ನು ಹಿಂತಿರುಗಿಸುವ ನನ್ನ ನಿರ್ಧಾರ ಅಚಲವಾಗಿತ್ತು. ಕೊನೆಗೂ ನಾನು ಅವಳನ್ನು ಒಪ್ಪಿಸುವಲ್ಲಿ ಯಶಸ್ವಿ

ಯಾದೆ. ೧೮೯೬ ಮತ್ತು ೧೯೦೧ರಲ್ಲಿ ಬಂದ ಉಡುಗೊರೆಗಳೆಲ್ಲವನ್ನೂ ಹಿಂತಿರುಗಿಸಿದೆ. ಒಂದು ವಿಶ್ವಸ್ಥ ಮಂಡಳಿಯ ರಚನೆಯಾಯಿತು. ಒಡವೆಗಳನ್ನು ಬ್ಯಾಂಕಿನಲ್ಲಿ ಇಡಲಾಯಿತು. ನನ್ನ ಅಥವಾ ವಿಶ್ವಸ್ಥರ ಇಷ್ಟದಂತೆ ಅದನ್ನು ಜನಸೇವೆಗೆ ಉಪಯೋಗಿಸುವುದೆಂದು ತೀರ್ಮಾನಿಸಲಾಯಿತು.

ಈ ನಿರ್ಧಾರ ಕೈಗೊಂಡಿದ್ದಕ್ಕೆ ಮುಂದೆ ನಾನೆಂದೂ ಪಶ್ಚಾತ್ತಾಪ ಪಡಲಿಲ್ಲ. ದಿನ ಕಳೆದಂತೆ ನನ್ನ ಹೆಂಡತಿಗೂ ಇದರ ಅರಿವಾಯಿತು. ಈ ದಿನ ನಾವು ಎಲ್ಲ ಪ್ರಲೋಭನೆಗಳಿಂದಲೂ ದೂರವಾಗಿದ್ದೇವೆ.

ಸಮಾಜ ಸೇವೆ ಮಾಡುವವರು ದುಬಾರಿ ಉಡುಗೊರೆಗಳನ್ನು ಸ್ವೀಕರಿಸಬಾರದೆಂಬುದೇ ನನ್ನ ಅಚಲ ಅಭಿಪ್ರಾಯ.



ಸಾಕ್ಷರತೆ ಶಿಕ್ಷಣದ ಆರಂಭವೂ ಅಲ್ಲ ಅಂತ್ಯವೂ ಅಲ್ಲ; ಸ್ತ್ರೀ ಪುರುಷರನ್ನು ಸುಶಿಕ್ಷಿತರನ್ನಾಗಿ ಮಾಡುವ ಸಾಧನೆಗಳಲ್ಲಿ ಒಂದು.

ನಮಗೆ ಅತಿಮುಖ್ಯವಾಗಿ ಬೇಕಾದ ಕೈಗಾರಿಕೆ ಮತ್ತು ಬೇಸಾಯಗಳು ಸಾಕಷ್ಟು ಬೆಳೆಯಬೇಕಾದರೆ ಜನತಾ ಶಿಕ್ಷಣದ ಹಿನ್ನೆಲೆ ಇರಬೇಕಾಗುತ್ತದೆ.

—ಗಾಂಧೀಜಿ

ಮಹಾತ್ಮ—ಮದರ್: ಎರಡು ಅಪೂರ್ವ ಚೇತನಗಳು

ಚಂದ್ರಶೇಖರಾರಾಧ್ಯ
೧೪೫, 'ಇಂಚರ', ಎಂ. ಬ್ಲಾಕ್,
೨ನೆಯ ಹಂತ, ಕುವೆಂಪುನಗರ,
ಮೈಸೂರು-೫೭೦೦೨೩

"ಬಡತನದ ವಿರುದ್ಧ ಹೋರಾಡುವ ದಾರಿ ತೋರಲು ಈ ಶತಮಾನದ ಮೊದಲ ಅರ್ಧ ಭಾಗದಲ್ಲಿ ಮಹಾತ್ಮ ಗಾಂಧೀಜಿ; ಕೊನೆಯ ಅರ್ಧದಲ್ಲಿ ಮದರ್ ತೆರೆಸಾ ಇದ್ದರು" ಎಂದು ಮದರ್ ತೆರೆಸಾ ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತಾ ಪ್ರಧಾನಿ ಐ. ಕೆ. ಗುಜ್ರಾಲ್ ಅವರು ಅರ್ಥಪೂರ್ಣವಾಗಿ ಹೇಳಿದ್ದಾರೆ. ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಹಾಗೂ ಮಾತೆ ತೆರೆಸಾ ಇಪ್ಪತ್ತನೆಯ ಶತಮಾನ ಭಾರತ ಕಂಡ ಎರಡು ಮಹಾನ್ ಚೇತನಗಳು. ಗಾಂಧಿ ಈ ಮಣ್ಣಿನಲ್ಲಿ ಹುಟ್ಟಿ, ವಿದೇಶದಲ್ಲಿ ಶಿಕ್ಷಣ ಪಡೆದು ದೀನದಲಿತರ ದನಿಯಾಗಿ, ರಾಷ್ಟ್ರದ ದಾಸ್ಯವಿಮೋಚನೆಗೆ ಸಾಮ್ರಾಜ್ಯಶಾಹಿ ವಿರುದ್ಧ ಹೋರಾಡಿದರು; ತೆರೆಸಾ ಆದರೋ ವಿದೇಶದಲ್ಲಿ ಹುಟ್ಟಿ ಭಾರತಕ್ಕೆ ಬಂದು ನೊಂದುಬೆಂದವರನ್ನು ಕಷ್ಟ ಕಾರ್ಪಣ್ಯಗಳಿಂದ ವಿಮುಕ್ತಿಗೊಳಿಸಲು ಶ್ರಮಿಸಿದರು. ಸಮಾಜದಿಂದ ಬಹಿಷ್ಕೃತರಾದವರ, ತನ್ನವರಿಂದ ಪರಿತ್ಯಕ್ತಗೊಂಡವರ ಕಣ್ಣೀರು ಒರೆಸುವ ಕಾಯಕದಲ್ಲಿ ಇಬ್ಬರೂ ಕೈಲಾಸ ಕಂಡವರು. ೨೦ನೆಯ ಶತಮಾನದ ಆದಿಯಿಂದ ಮಧ್ಯಭಾಗದವರೆಗೆ ಸೇವೆಯಲ್ಲಿ ತೊಡಗಿಕೊಂಡ ಗಾಂಧೀಜಿ ೧೯೪೮ರಲ್ಲಿ ಇಹಲೋಕಯಾತ್ರೆ ಮುಗಿಸಿದರು. ಇಲ್ಲಿಂದ ಮುಂದಕ್ಕೆ ಮದರ್ ತೆರೆಸಾ ತಮ್ಮ ಸೇವೆಯನ್ನು ಪ್ರಾರಂಭಿಸಿ, ಈ ಶತಮಾನ ಪೂರ್ಣಗೊಳಿಸಿದರು.

ಗಾಂಧಿ ತಾವೇ ನೇಯ್ದ ಬಟ್ಟೆಯನ್ನು ಮಾನಮುಚ್ಚುವಷ್ಟು ಧರಿಸಿದರೆ, ತೆರೆಸಾ ಸೇವಾನಿಕೇತನದಲ್ಲಿ ನೇಯ್ದ ಸರಳ ಉಡುಪನ್ನೇ ಧರಿಸುತ್ತಿದ್ದರು. ಈ ಇಬ್ಬರ ತ್ಯಾಗಜೀವನಕ್ಕೆ ಇದಕ್ಕಿಂತ ಬೇರೆ ನಿದರ್ಶನ ಇನ್ನೇನು ಬೇಕಾಗಿದೆ? ಪ್ರತಿ ಕಣ್ಣಿನ ನೀರ ಹನಿಯನ್ನು ಒರಸುವುದಕ್ಕೆ ಈ ಇಬ್ಬರೂ ಶ್ರಮಿಸಿದರು. ದರಿದ್ರನಾರಾಯಣನಲ್ಲಿ ದೇವರನ್ನು ಕಂಡವರು. ಜಗತ್ತಿನ ದುಃಖ-ದುಮ್ಮಾನಗಳ ನಿವಾರಣೆಗಾಗಿ ಸದಾ ಪ್ರಾರ್ಥಿಸಿದವರು. ದಣಿವರಿಯದ ದುಡಿಮೆಯಿಂದ ಜಗದ್ವಂದ್ಯರಾದವರು.

* * *

ಪವಿತ್ರ ಅಂತಃಕರಣದ ಮದರ್

ದೂರದ ಯುಗೊಸ್ಲಾವಿಯಾದ ಆಗ್ನೆಸ್‌ಗೋಂಖ್ಯಾಗೂ ಭಾರತದ ಕಲ್ಕತ್ತ ನಗರಕ್ಕೂ ಎತ್ತಣಿಂದೆತ್ತ ಸಂಬಂಧವಯ್ಯಾ! ಆದರೆ ಮಹಾ ವಿಭೂತಿಗಳ ಬದುಕಿನ ನೆಲೆಗಳು ಗಡಿಮೀರಿವೆಯಿಂದತ್ತತ್ತ ಎಂಬುದು

ಮದರ್ ತೆರೆಸಾ



೧೯೧೦-೧೯೯೭

ಸತ್ಯ. ಇಂದು ಜಗತ್ತಿನಾದ್ಯಂತ ಸೇವಾ ಸದನಗಳ ಸಾಮ್ರಾಜ್ಯ ಕಟ್ಟಿ ಮಾನವ ಕುಲ ಕೋಟಿಯ ಮಾತೆಯಾಗಿ ಪ್ರಪಂಚದ ಅತ್ಯುನ್ನತ ಪ್ರಶಸ್ತಿ, ಗೌರವಗಳನ್ನು ತನ್ನದಾಗಿಸಿಕೊಂಡು ಚಿರಸ್ಮರಣೆಗೆ ಪಾತ್ರರಾದ ಮದರ್ ತೆರೆಸಾ ಅರ್ಧ ಶತಮಾನಗಳ ಹಿಂದೆ ಕೈಯಲ್ಲಿದ್ದ ಐದೂಚಿಲ್ಲರೆ ರೂಪಾಯಿಗಳ ಬಂಡವಾಳದೊಂದಿಗೆ ಏಕಾಂಗಿಯಾಗಿ ಕಲ್ಕತ್ತದ ಮೋತಿಜಿಲ್ ಕೊಳಗೇರಿಯ ಮುರುಕು ಮನೆಯಲ್ಲಿ ಸೇವಾಕೇಂದ್ರ ಪ್ರಾರಂಭಿಸಿದಾಗ ಎದುರಾದ ಅಡ್ಡಿ ಆತಂಕಗಳು ನೂರಾರು.

ತಾನು ಕೈಗೊಂಡ ಸೇವಾಕಾರ್ಯಕ್ಕೆ ಹಣ ಔಷಧಿಗಳ ಭಿಕ್ಷೆ ಬೇಡಿದಾಗ ಬಂದ ಪ್ರತಿಫಲ ಅಪಮಾನದ ಬಿರುನುಡಿಗಳು. ಈ ಮಹತ್ಕಾರ್ಯಕ್ಕೆ ದೇಣಿಗೆ ಕೋರಿ ಮಾಡಿಕೊಂಡ ಪತ್ರಿಕಾ ಮನವಿಗೆ ದೊರೆತ ಪರಿಹಾರ ಅಂದಿನ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಬಿ.ಸಿ. ರಾಯ್ ಅವರೊಬ್ಬರಿಂದ ಮಾತ್ರ.

ತನಗೇ ನಿಲ್ಲಲು ನೆಲೆ ಇಲ್ಲದಿದ್ದಾಗ ತೆರೆಸಾ ಕಲ್ಕತ್ತದ ಹಾದಿಬೀದಿಯಲ್ಲಿ ಬಿದ್ದಿದ್ದ ಅನಾಥರು, ಕುಷ್ಠ, ಕ್ಷಯರೋಗದಿಂದ ನರಳುತ್ತಿದ್ದವರು, ಕಸದ ತೊಟ್ಟಿ, ಗಟಾರಗಳಲ್ಲಿ ಸಿಕ್ಕಿದ ಹಾಲುಗಲ್ಲದ ಹಸುಳೆಗಳು, ಬೀದಿಪಾಲಾದ ವೃದ್ಧರಿಗೆ ನೆಲೆಯೊದಗಿಸುವ ಸಾಹಸಕ್ಕೆಳೆಯುತ್ತಾರೆ. ಈಕೆ ಮಾಡುತ್ತಿರುವ ಈ ಕೆಲಸದಲ್ಲಿ ಏನೋ ರಹಸ್ಯ ಅಡಗಿದೆ ಇದನ್ನು ಭೇದಿಸಲೇಬೇಕೆಂಬ ಚಪಲ ಕೆಲವರಿಗಾದರೆ, ಈ ಬಿಳಿ ತೊಗಲಿನ ಹೆಣ್ಣಿಗೆ ಮುತಿಗೆಟ್ಟಿರಬೇಕೆಂದು ಕೆಲವರ ನಿರ್ಧಾರ. ಹೀಗೆ ಸಂಶಯ, ತಿರಸ್ಕಾರ, ವ್ಯಂಗ್ಯ ವಿಡಂಬನೆಗಳ ನಡುವೆಯೇ ಸೋದರಿ ಆಗ್ನೆಸ್‌ಳು ತೆರೆಸಾಳಾಗಿ ಮಾತೆ ಆಗುವ ದಿಕ್ಕಿನತ್ತ ಮುಖಮಾಡಿ ಆಗಿತ್ತು.

ಅನುಮಾನದ ಕಣ್ಣುಗಳಿಗೆ, ತಿರಸ್ಕಾರದ ಮನಗಳಿಗೆ ಕಾಲಗತಿಯಲ್ಲಿ ತೆರೆಸಾ ಅವರ ನಿಸ್ವಾರ್ಥ ಸೇವೆಯ ಅರಿವಾಗುತ್ತದೆ. ತಾವು ಅಂದುಕೊಂಡಿದ್ದಕ್ಕೂ ಆಗುತ್ತಿರುವುದಕ್ಕೂ ಅಂತರ ಕಾಣುತ್ತಾರೆ. ತಮ್ಮ ಸಂಶಯಕ್ಕೆ ಜುಗುಪ್ಸೆ ಪಡುತ್ತಾರೆ. ತಾವು ಒಡ್ಡಿದ ಅಡ್ಡಿ ಆತಂಕಗಳಿಗೆ ಮರುಗುತ್ತಾರೆ. ತಮ್ಮಿಂದ ತಿಳಿದೋ ತಿಳಿಯದೆಯೋ ನಡೆದು ಹೋದ ಪಾಪಕಾರ್ಯಕ್ಕೆ ಪ್ರಾಯಶ್ಚಿತ್ತವಾಗಿ ತೆರೆಸಾ ಅವರ ನಿಷ್ಕಪಟ ಸೇವಾಕಾರ್ಯಕ್ಕೆ ತಾವೂ ಕೈಜೋಡಿಸಿ ಕೃತಾರ್ಥರಾಗುತ್ತಾರೆ. ಈ ಪವಿತ್ರ ಕೆಲಸಕ್ಕೆ ದಾನಿಗಳು, ಹಿತೈಷಿಗಳು, ಸಮಾನಮನಸ್ಕರು ಸಹಾಯ ಹಸ್ತ ಚಾಚಿ ಸಾಲುಗಟ್ಟಿ ನಿಲ್ಲುತ್ತಾರೆ. ಇದರ ಪರಿಣಾಮ ಕೊಳಗೇರಿಯ ಮಕ್ಕಳಿಗಾಗಿ ಶಾಲೆಗಳು, ಕಾಂಗ್ರಿಗೇಷನ್ ಆಫ್ ಮಿಷನರಿ ಚಾರಿಟೀಸ್, ಕುಷ್ಠ ರೋಗಿಗಳ ಉಪಚಾರಕ್ಕಾಗಿ ಹ್ರಸೋರಿಯಂ, ನಿರಾಶ್ರಿತರ ಆರೈಕೆಗಾಗಿ 'ಹೌಸ್ ಆಫ್ ದಿ ಡೈಯಿಂಗ್', ಮಕ್ಕಳ ಪಾಲನೆಗಾಗಿ ಅನಾಥಾಲಯಗಳು, ಬುದ್ಧಿಮಾಂದ್ಯರಿಗೆ ಆಶ್ರಯತಾಣಗಳು, ಮದ್ಯಪಾನದಿಂದ ವಿಮುಕ್ತಿಗೊಳಿಸಲು 'ಹೋಮ್ ಆಫ್ ಕಂಪಾಶನ್'—ಹೀಗೆ ಸಾವಿರಾರು ವೈವಿಧ್ಯಮಯ ಸೇವಾ ಕೇಂದ್ರಗಳು ಕಲ್ಕತ್ತ ನಗರದ ಗಡಿದಾಟಿ ರಾಜ್ಯ, ರಾಷ್ಟ್ರ, ಪ್ರಪಂಚದ ದಶದಿಕ್ಕುಗಳಿಗೂ ದಾಂಗುಡಿ ಇಟ್ಟು, ಈ ಕೇಂದ್ರಗಳಲ್ಲಿ

ದೀನದುರ್ಬಲರ, ರೋಗಿಗಳ, ವೃದ್ಧರ ಸೇವೆ ಸಾವಿರ ಸಾವಿರ ಕಾರ್ಯಕರ್ತರ ಮೂಲಕ ನಿರಂತರವಾಗಿ ನಡೆಯುತ್ತಿದೆ. ಈ ನಿರ್ಮಲ ಸೇವೆಗಾಗಿ ಮದರ್‌ಗೆ ವಿಶ್ವದಾದ್ಯಂತ ಸಂದ ಕಾಣಿಕೆ, ಗೌರವಗಳಿಗೆ ಲೆಕ್ಕವಿಲ್ಲ. ಹೀಗೆ ಬಂದ ಕಾಣಿಕೆ, ಪಾರಿತೋಷಕಗಳು ವಿಶಿಷ್ಟವಾಗಿ ವಿನಿಯೋಗವಾಗುತ್ತವೆ.

ಒಮ್ಮೆ ಕುಷ್ಠ ಕೇಂದ್ರದಲ್ಲಿದ್ದ ಹೆಣ್ಣುಮಗಳೊಬ್ಬಳಿಗೆ ರೋಗ ಗುಣವಾಗಿ ವಿವಾಹ ನಿಶ್ಚಯವಾಗುತ್ತದೆ. ಚಿನ್ನದ ಉಂಗುರ ಕೊಟ್ಟಲ್ಲಿ ಮಾತ್ರ ಮದುವೆ ಆಗುವುದಾಗಿ ಕೊನೆಯ ಕ್ಷಣದಲ್ಲಿ ವರ ಪಟ್ಟು ಹಿಡಿಯುತ್ತಾನೆ. ನಿರ್ಗತಿಕಳಾದ ಆ ಹೆಣ್ಣಿನ ತಾಯಿ ಕಂಗಾಲಾಗಿ ಮದರ್ ಅವರಲ್ಲಿ ತನ್ನ ಅಸಾಹಾಯಕತೆ ಮನವರಿಕೆ ಮಾಡಿಕೊಳ್ಳುತ್ತಾಳೆ. "ಆ ದಯಾಮಯ ನಿನ್ನ ಮಗಳ ರೋಗವನ್ನೇ ಗುಣಮಾಡಿರುವಾಗ ಈ ಸಣ್ಣ ಅಗತ್ಯ ಪೂರೈಸಲಾರನೆ ?" ಎಂದು ಸಂತೈಸಿ, ತಮಗೆ ಯಾವಾಗಲೋ ಕೊಡುಗೆಯಾಗಿ ಬಂದಿದ್ದ ಚಿನ್ನದ ಉಂಗುರ ಒಂದನ್ನು ಆ ಕ್ಷಣದಲ್ಲಿ ಹುಡುಕಿ ತರಿಸಿ ಅವಳಿಗೆ ಕೊಟ್ಟು ವಿವಾಹ ನೆರವೇರಿಸುವಂತೆ ತಿಳಿಸುತ್ತಾರೆ.

ಪಾರಿತೋಷಕ, ಕಾಣಿಕೆ, ಬಹುಮಾನಗಳನ್ನು ಜತನದಿಂದ ಕಾಯ್ದಿರಿಸಿಕೊಳ್ಳುವುದು ವಾಡಿಕೆ. ಆದರೆ ಮದರ್ ತಮಗೆ ಬಂದ ಯಾವುದೇ ಕೊಡುಗೆಯನ್ನು ಅಲ್ಲೇ ವಿಲೇವಾರಿ ಮಾಡಿ ಬಂದ ಹಣದಿಂದ ತಮ್ಮ ಆಶ್ರಿತರಿಗೆ ಬೇಕಾಗಿರುವ ಸಾಮಗ್ರಿ ಕೊಂಡು ಹಂಚಿ "ಕೆರೆಯ ನೀರನು ಕೆರೆಗೆ ಚೆಲ್ಲಿ ವರವ ಪಡೆ"ಯುತ್ತಿದ್ದರು.

'ಅನಾಥಾಲಯಗಳ ಮಕ್ಕಳನ್ನು ದತ್ತು ಕೊಡುವುದರ ಮೂಲಕ ಬಡವರನ್ನು ಹಣವಂತರನ್ನು ಒಂದುಗೂಡಿಸುವುದು ಸಾಧ್ಯ' ಎಂಬುದನ್ನು ಕಂಡುಕೊಂಡಿದ್ದ ತೆರೆಸಾ ಮನುಷ್ಯನ ಒಂಟಿತನದ ನಿವಾರಣೆಯಾದರೆ ಅವನಿಗೆ ನೆಮ್ಮದಿ ದೊರೆಯುತ್ತದೆ ಎಂಬುದನ್ನು ಅರಿತಿದ್ದರು. 'ರೋಗರುಜಿನ ಈ ಜಗತ್ತಿನ ಸಮಸ್ಯೆಯಲ್ಲ. ರೋಗಿಗಳನ್ನು ನೊಂದವರನ್ನು ಪ್ರೀತಿ ಅನುಕಂಪದಿಂದ ಸಂತೈಸುವ ಭಾವನಾತ್ಮಕ ಸಂಬಂಧದ ಕೊರತೆಯೇ ಈ ಜಗತ್ತಿನ ಬಹುದೊಡ್ಡ ಸಮಸ್ಯೆ' ಎಂದು ವ್ಯಾಕುಲರಾಗಿದ್ದರು. ಜನರ ಸೇವೆಗೆ ಹೋಗುವಾಗ ಪ್ರಸನ್ನ ಮನೋಭಾವ ಅಗತ್ಯ. ಅವರ ಬಳಿಗೆ ಹೋಗುವಾಗ ನೀವು ನಗುತ್ತಾ ಹೋಗಬೇಕು. ಮೊದಲೇ ನೊಂದಿರುವ ಅವರಿಗೆ ನಿಮ್ಮ ನಗುಮುಖ ತೋರಿಸಲು ಸಾಧ್ಯವಾಗದಿದ್ದರೆ ನೀವು ಹೋಗಲೇಬೇಡಿ ಎಂದು ಕಟ್ಟಾಜ್ಞೆ ನೀಡುತ್ತಿದ್ದರು. ಅನಾಥರ ದೀನದುರ್ಬಲರ ಬಗ್ಗೆ ಅನುಕಂಪದ ನುಡಿ ಬಾಯಿಮಾತಿಗಷ್ಟೆ ತಮ್ಮ ಸೇವೆಯನ್ನು ಮುಡುಪಾಗಿಟ್ಟಿರುವ ಬಹುಸಂಖ್ಯಾತರ ನಡುವೆ ನೈಜ ಅಂತಃಕರಣದಿಂದ ಅವರ ಕಣ್ಣೊರೆಸಿ ಪುನರ್ಜನ್ಮ ನೀಡುತ್ತಿದ್ದ ಮದರ್ ಈ ನಾಡಿನ ವಿರಳಾತಿ ವಿರಳರು.

ದಂತಕತೆಯಾಗಿ ಎಂಬತ್ತೇಳು ವರ್ಷಗಳ ಸಾರ್ಥಕ ಬದುಕು ನಡೆಸಿದ ಮದರ್ ೧೯೮೬ರಲ್ಲಿ ತಾಂಜೀನಿಯಾದಲ್ಲಿ ಸಂಭವಿಸಿದ ವಿಮಾನಾಪಘಾತದಲ್ಲಿ ಕೂದಲೆಳೆಯ ಅಂತರದಿಂದ ಬಧುಕಿ ಉಳಿದರು. ೧೯೮೯ರಲ್ಲಿ ಹೃದಯಾಘಾತಕ್ಕೆ ಒಳಗಾಗಿ, ೧೯೯೧ರಲ್ಲಿ ಅಮೆರಿಕಾದಲ್ಲಿ ಹೃದಯದ ಶಸ್ತ್ರಚಿಕಿತ್ಸೆಗೆ

ಒಳಗಾಗುತ್ತಾರೆ. ಎರಡು ವರ್ಷಗಳ ಅನಂತರ ಮತ್ತೊಮ್ಮೆ ಕಲ್ಕತ್ತದಲ್ಲಿ ಹೃದಯದ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡು ಸಾವು ಬದುಕಿನ ನಡುವೆ ಹೋರಾಟ ನಡೆಸಿದರೂ ತಮ್ಮ ಸೇವಾ ಕಾರ್ಯದಿಂದ ವಿಮುಖರಾಗದ ಮದರ್ ೫ರ ಸೆಪ್ಟೆಂಬರ್ ರಾತ್ರಿ ಕೊನೆಗೂ ಇಹಲೋಕದ ಬದುಕಿಗೆ ವಿದಾಯ ಹೇಳಲೇ ಬೇಕಾಯಿತು. ತಾಯಿ ಇಲ್ಲವಾದ ಸುದ್ದಿ ತಿಳಿದ ಹ್ರಿಸೋರಿಯಂನ ವಿಲಿಯಮ್ಸ್ ಕಣ್ಣಿಂದ ನೀರು ಹನಿಯುತ್ತಿತ್ತು. ಅವನ ಎರಡು ಹಸ್ತಗಳನ್ನು ಕುಷ್ಠ ಕವರಿ ಹಾಕಿದ್ದುದರಿಂದ ನೀರು ಒರಸಿಕೊಳ್ಳುವುದು ಅವನಿಗೆ ಅಸಾಧ್ಯವಾಗಿತ್ತು. ಈಗ ಅವನ ಕಣ್ಣೀರನ್ನು ತೊಡೆಯಲು ಆ ಮಾತೆಯೂ ಇಲ್ಲವಾಗಿದ್ದರು.

ಕಾಶ್ಮೀರದ ಉಗ್ರಗಾಮಿಯಾದ ಶಬೀರ್ ಅಹಮದ್ ಯಾರಿಗೂ ತಿಳಿಯದಂತೆ ಚರ್ಚಿಗೆ ಭೇಟಿ ನೀಡಿ, ಮದರ್‌ಗೆ ಅಂತಿಮ ಗೌರವ ಸಲ್ಲಿಸಿದ ಎಂಬ ಸುದ್ದಿಯು ತೆರೆಸಾ ನೊಂದವರ ಪಾಲಿಗಷ್ಟೇ ತಾಯಿಯಾಗಿರಲಿಲ್ಲ ಎಂಬ ಸತ್ಯದ ಇನ್ನೊಂದು ಮುಖ ಗೋಚರವಾಗುತ್ತದೆ.

ನುಡಿನಮನ

"ತನ್ನ ಜನತೆಯ ನಾಯಕ, ಯಾವುದೇ ಬಾಹ್ಯಬಲದ ಬೆಂಬಲ ವಿರದಾತ: ಈ ರಾಜಕಾರಣಿಯ ಯಶಸ್ಸು ಚಮತ್ಕಾರವನ್ನಾಗಲೀ ತಾಂತ್ರಿಕ ಕೌಶಲಗಳಲ್ಲಿ ಗಳಿಸಿರುವ ಪ್ರಾವೀಣ್ಯವನ್ನಾಗಲೀ ಅವಲಂಬಿಸಿಲ್ಲ. ಬದಲು, ಮನವೊಲಿಸಬಲ್ಲ ಸ್ವಂತ ವ್ಯಕ್ತಿತ್ವದ ಸಾಮರ್ಥ್ಯವನ್ನು ಮಾತ್ರ ಅವಲಂಬಿಸಿದೆ. ಬಲಪ್ರಯೋಗವನ್ನು ಸದಾ ತಿರಸ್ಕರಿಸಿದ ಯಶಸ್ವೀ ಹೋರಾಟಗಾರ, ವಿವೇಕ ವಿನೀತತೆಗಳಿಂದ ಕೂಡಿದ ಪುರುಷ, ದೃಢನಿರ್ಧಾರ ಮತ್ತು ಅಚಲಸ್ಥೈರ್ಯದಿಂದ ಸಜ್ಜುಗೊಂಡು ಸಕಲ ತ್ರಾಣವನ್ನು ತನ್ನ ಜನರ ಉದ್ಧಾರ ಹಾಗೂ ಸ್ಥಿತಿಗತಿಗಳ ಸುಧಾರಣೆಗಾಗಿ ಅರ್ಪಿಸಿದಾತ, ಯುರೋಪಿನ ಅಮಾನುಷ ಕ್ರೌರ್ಯವನ್ನು ಸರಳ ವ್ಯಕ್ತಿಯ ಗಾಂಭೀರ್ಯದಿಂದ ಎದುರಿಸಿ ಎಲ್ಲ ಸಂದರ್ಭಗಳಲ್ಲಿಯೂ ಶ್ರೇಷ್ಠತೆಯಿಂದ ಕಂಗೊಳಿಸಿದಾತ. ಇಂಥವನೊಬ್ಬ ಎಂದಾದರೂ ಈ ನೆಲದ ಮೇಲೆ ರಕ್ತ ಮಾಂಸ ಭರಿತನಾಗಿ ಅಡ್ಡಾಡಿದುದು ನಿಜವಿರಬಹುದೇ ಎಂದು ಮುಂಬರಲಿರುವ ಪೀಳಿಗೆಗಳು ಸಂದೇಹಿಸುವುದು ಸಾಧ್ಯ." ಎಂದು ಗಾಂಧೀಜಿಗೆ ಐನ್‌ಸ್ಟೈನ್ ಸಲ್ಲಿಸಿದ ನುಡಿನಮನ ರೂಪಕಾರ್ಥದಲ್ಲಿ ಯಾವುದೇ ಮಹಾಚೇತನ ಇನ್ನೊಂದು ಮಹಾಚೇತನಕ್ಕೆ ಅರ್ಪಿಸಬಹುದಾದ ಈ ಅಭಿವಂದನೆ; ಮದರ್ ತೆರೆಸಾ ಅವರ ಸಾರ್ಥಕ ಜೀವನಕ್ಕೂ ಸುಸಂಗತವಾಗಿದೆ. ರಾಷ್ಟ್ರಪಿತ ಗಾಂಧಿಯನ್ನು ಅಂತಿಮಯಾತ್ರೆಗೆ ಕೊಂಡೊಯ್ದ ಫಿರಂಗಿಗಾಡಿಯೇ ಮಾತೆ ತೆರೆಸಾ ಅವರ ಪಾರ್ಥಿವ ಶರೀರವನ್ನೂ ಕೊಂಡೊಯ್ದು, ಈ ಯುಗದ ಎರಡು ಅಪೂರ್ವಕೊಂಡಿಗಳನ್ನು ಬೆಸೆದ ಒಂದು ಶತಮಾನದ ಸಾರ್ಥಕ ಸೇವೆಯ ಸಂಕೇತವಾಗಿದೆ.

ಮಹಾತ್ಮ ಮತ್ತು ಮದರ್ ಅವರಿಂದ ತೆರವಾದ ಸ್ಥಾನ ತುಂಬಬೇಕಾದರೆ, ಮಹಾತ್ಮ ಮತ್ತು ಮದರ್ ಅವರೇ ಜನ್ಮ ತಾಳಬೇಕು. ಇದು ಸಾಧ್ಯವೆ? ಎಂದಾದರೆ ಈ ಜಗತ್ತಿನಲ್ಲಿ ಅಸಾಧ್ಯ ಯಾವುದಿದೆ ಎಂದು ಸಂತೈಸಿಕೊಳ್ಳಬೇಕಾಗಿದೆ.

ಮದರ್ ತೆರೆಸಾ ಅವರ ಬದುಕಿನ ಘಟ್ಟಗಳು

ಹಿಂದಿನ ಹೆಸರು	:	ಆ್ಯಗ್ನೆಸ್ ಗೊಂಕ್ಸಾ ಬೊಜಾಕ್ಸಿಯಾ
ಜನನ	:	೧೯೧೦ರ ಆಗಸ್ಟ್ ೨೬
ತಂದೆ	:	ನಿಕೊಲಾಸ್ ಬೊಜಾಕ್ಸಿಯಾ
ತಾಯಿ	:	ಡ್ರ್ಯಾನಾ ಫೈಲ್ ಬೆರ್ನ್ಯಾಯ್
ಸ್ಥಳ	:	ಯುಗೊಸ್ಲಾವಿಯದ ಮೆಸಡೋನಿಯಾ
೧೯೨೮	:	ಕಲ್ಕತ್ತಗೆ ಆಗಮಿಸಿ ಅಧ್ಯಾಪಕಿಯಾಗಿ ಸೇವೆ ಪ್ರಾರಂಭ
೧೯೩೧	:	ಸನ್ಯಾಸ ಸ್ವೀಕರಿಸಿ ತೆರೆಸಾ ಆಗಿ ಮಾರ್ಪಾಡು
೧೯೪೬	:	ಮಿಷನರಿಗಳ ದತ್ತಿ ಸ್ಥಾಪನೆ
೧೯೪೮	}	ಪಾಟ್ನಾದಲ್ಲಿ ಭಾರತೀಯ ಪೌರತ್ವ ಕಲ್ಕತ್ತದ ಕೊಳಚೆ ಪ್ರದೇಶದಲ್ಲಿ ಶಾಲೆ ಪ್ರಾರಂಭ
೧೯೫೦	:	ಕಲ್ಕತ್ತದಲ್ಲಿ ಕಾಂಗ್ರೆಗೇಷನ್ ಆಫ್ ದಿ ಮಿಷನರೀಸ್ ಚಾರಿಟೀಸ್ ಪ್ರಾರಂಭ.
೧೯೬೨	}	ಪದ್ಮಶ್ರೀ ಪ್ರಶಸ್ತಿ ಪ್ರದಾನ ಮ್ಯಾಗ್ಸೆಸೆ ಪ್ರಶಸ್ತಿ ಸ್ವೀಕಾರ
೧೯೭೧	:	ಪೋಪ್ ಜಾನ್ ಶಾಂತಿ ಪ್ರಶಸ್ತಿ ನೀಡಿಕೆ
೧೯೭೯	:	ನೊಬೆಲ್ ಶಾಂತಿ ಪ್ರಶಸ್ತಿ ಪ್ರದಾನ
೧೯೮೦	:	ಭಾರತದ ಅತ್ಯುನ್ನತ ಪ್ರಶಸ್ತಿ ಭಾರತ ರತ್ನ ಪ್ರದಾನ
೧೯೮೩	:	ರಾಣಿ ಎಲಿಜಬೆತ್–II ನೀಡಿದ ಆರ್ಡರ್ ಆಫ್ ಮೆರಿಟ್ ಸ್ವೀಕಾರ
೧೯೮೬	:	ತಾಂಜೇನಿಯಾದಲ್ಲಿ ಸಂಭವಿಸಿದ ವಿಮಾನಾಪಘಾತದಿಂದ ಪಾರು
೧೯೮೯	:	ಹೃದಯಾಘಾತಕ್ಕೆ ಒಳಗಾಗಿ ಪೇಸ್‌ಮೇಕರ್ ಅಳವಡಿಕೆ
೧೯೯೧	:	ಅಮೆರಿಕಾದಲ್ಲಿ ಹೃದಯದ ಶಸ್ತ್ರಚಿಕಿತ್ಸೆ
೧೯೯೩	}	ಕಲ್ಕತ್ತದಲ್ಲಿ ಮತ್ತೊಮ್ಮೆ ಹೃದಯದ ಶಸ್ತ್ರಚಿಕಿತ್ಸೆ ಸದ್ಭಾವನಾ ಪ್ರಶಸ್ತಿ ಪ್ರದಾನ
೧೯೯೬	}	ಅಮೆರಿಕಾದ ಗೌರವ ಪೌರತ್ವ ನೀಡಿಕೆ ಹಲವಾರು ಗೌರವ ಡಾಕ್ಟರೇಟ್‌ಗಳು, ಸನ್ಮಾನ ಪ್ರಶಸ್ತಿಗಳು ಭಾರತ ಮತ್ತು ಸ್ವೀಡನ್‌ನಿಂದ ಅಂಚೆಚೀಟಿಗಳ ಬಿಡುಗಡೆ
೧೯೯೭ರ ಮಾರ್ಚ್–೧೩	:	ಸಿಸ್ಟರ್ ನಿರ್ಮಲ ಅವರಿಗೆ ಹುದ್ದೆ ಹಸ್ತಾಂತರ
೧೯೯೭ರ ಸೆಪ್ಟೆಂಬರ್–೫	:	ಇಹಲೋಕದಿಂದ ಬಿಡುಗಡೆ
೧೯೯೭ರ ಸೆಪ್ಟೆಂಬರ್–೧೩	:	ಕಲ್ಕತ್ತದ ಮದರ್ ಹೌಸ್‌ನಲ್ಲಿ ಅಂತ್ಯಕ್ರಿಯೆ

ಬ್ರಹ್ಮಚಾರಿಯಾಗಲು ಒಂದೇ ಮಾತು

ಡಾ॥ ಸ. ಜ. ನಾಗಲೋಟಿಮಠ
೨೫, ಶಾಂತಾ, ಬಸವ ಕಾಲನಿ
ಬೆಳಗಾವಿ-೫೯೦ ೮೧೧

ಭಾರತದ ಹಲವಾರು ಸುಪುತ್ರರಲ್ಲಿ ಡಾ॥ ಬಿ. ಸಿ. ರಾಯ್ ಪ್ರಮುಖರು. ಅವರು ಬ್ರಹ್ಮಚಾರಿಯಾಗಿ ಬದುಕಿದರು. ಅನೇಕರಿಗೆ ಇದು ಅಚ್ಚರಿಯನ್ನು ತರಬಹುದು. ಬಹುದೊಡ್ಡ ವೈದ್ಯರೂ ಶ್ರೇಷ್ಠ ರಾಜಕಾರಣಿಯೂ, ಜೀವನದಲ್ಲಿ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಿದ ಈ ವ್ಯಕ್ತಿ ಬ್ರಹ್ಮಚಾರಿ ಆಗಿ ಉಳಿಯಲು ಕಾರಣವೇನು ? ಇದರ ಹಿಂದೆ ಒಂದು ಘಟನೆ ಇದೆ.

ಡಾ॥ ಬಿ. ಸಿ. ರಾಯ್ ಅವರು ಆಗ ಇನ್ನೂ ವಿದ್ಯಾರ್ಥಿ, ವೈದ್ಯಕೀಯ ಕಾಲೇಜಿನಲ್ಲಿ ಓದುತ್ತಿದ್ದರು. ಕ್ಲಾಸಿನಲ್ಲಿ ಜಾಣ ವಿದ್ಯಾರ್ಥಿ ಎಂದು ಹೆಸರು ಮಾಡಿದ್ದರು. ಪ್ರತಿ ವರ್ಷ ಅವರು ಕಾಲೇಜಿಗೇ ಪ್ರಥಮ ಸ್ಥಾನ ಪಡೆಯುತ್ತಿದ್ದರು. ಅವರನ್ನು ಪ್ರಾಧ್ಯಾಪಕರೆಲ್ಲ ಅಭಿಮಾನದಿಂದ ಕಾಣುತ್ತಿದ್ದರು. ಡಾ॥ ನೀಲರತ್ನ ಸರ್ಕಾರ ಎಂಬುವರೂ ಅವರ ಪ್ರಾಧ್ಯಾಪಕರಾಗಿದ್ದರು. ನೀಲರತ್ನ ಸರ್ಕಾರ ಶ್ರೇಷ್ಠ ವೈದ್ಯರೆಂದು ಇಡೀ ದೇಶಕ್ಕೆ ಗೊತ್ತಿದ್ದವರು. ಅವರಿಗೊಬ್ಬಳು ಸುಂದರ ಮಗಳಿದ್ದಳು. ಆಕೆಯನ್ನು ವೈದ್ಯರಿಗೆ ಕೊಟ್ಟು ಮದುವೆ ಮಾಡಲು ಸರ್ಕಾರ ಅವರು ಆಶಿಸಿದ್ದರು. ಇದರ ಸುಳಿವು ಬಿ. ಸಿ. ರಾಯ್ ಅವರಿಗೆ ಮುಟ್ಟಿತು. ಅವರಿಗೂ ನೀಲರತ್ನ ಸರ್ಕಾರ ಅವರ ಮಗಳನ್ನು ಮದುವೆ ಆಗಲು ಆಶೆ ಆಯಿತು. ಆದರೆ ಸಾಧಿಸುವದೆಂತು ? ಮೊದಲು ಬಹಳ ಚೆನ್ನಾಗಿ ಓದಿದರು ಆ ವರ್ಷದ ಶ್ರೇಷ್ಠ ವಿದ್ಯಾರ್ಥಿ ಎಂದು ಕೊನೆಯ ಪರೀಕ್ಷೆ ಪಾಸುಮಾಡಿದರು. ಇನ್ನೊರ್ವ ಪ್ರಾಧ್ಯಾಪಕರ ಮನೆಗೆ ಹೋಗಿ ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿದರು. ಅದು ಸರಿಯೋ ತಪ್ಪೋ ಎಂದು ಕೇಳಿದರು. ಆ ಪ್ರಾಧ್ಯಾಪಕರು ಹೆಮ್ಮೆಯಿಂದ ಇವರನ್ನು ನೋಡಿ "ನೀನು ಒಳ್ಳೆಯ ವರ. ಆಕೆ ಸುಂದರ ಹುಡುಗಿ, ಡಾ॥ ನೀಲರತ್ನ ಸರ್ಕಾರ ಅವರಿಗೂ ಒಳ್ಳೆಯ ವರ ಬೇಕಾಗಿದ್ದಾನೆ. ವರನು ವೈದ್ಯನಾಗಿರಬೇಕೆಂದೂ ಅವರ ಆಶೆ. ಇದರಲ್ಲಿ ತಪ್ಪೇನಿದೆ" ಎಂದು ಹೇಳಿದರು. ತಾವು ಮಧ್ಯಸ್ಥಿಕೆ ವಹಿಸಿ ಮಾತನಾಡುವುದಾಗಿ ಹೇಳಿದರು. ಒಂದು ದಿನ ಸರ್ಕಾರ ಅವರ ಮನೆಗೆ ಹೋಗಿ ಈ ಮಾತನ್ನು ಅವರ ಮುಂದಿಟ್ಟರು. ನೀಲರತ್ನ ಸರ್ಕಾರ ಅವರು "ಏನು, ನನ್ನ ಮಗಳನ್ನು ಅಂಥ ಹುಂಬನಿಗೆ ಕೊಡುವುದೇ ? ಅಸಾಧ್ಯ" ಎಂದರಂತೆ. ಮಧ್ಯಸ್ಥಿಕೆ ವಹಿಸಿದ ಪ್ರಾಧ್ಯಾಪಕರು ಮರಳಿಬಂದು ನಡೆದ ಘಟನೆಯನ್ನು ಬಿ. ಸಿ. ರಾಯ್ ಅವರಿಗೆ


ವಿವರಿಸಿದರು. ತನ್ನ ಪ್ರೀತಿಯ, ಹೆಮ್ಮೆಯ ಗುರುಗಳು ಹೀಗೆ ಅಂದರಲ್ಲ ಎಂದು ದುಃಖಿಸಿದರು. ಅಂದೇ ತಾವು ವಿವಾಹ ಆಗಬಾರದೆಂದು ನಿರ್ಣಯಿಸಿದರು. ಇಂಗ್ಲೆಂಡಿಗೆ ಹೋಗಿ ಉಚ್ಚ ಪದವಿ (ಎಂ.ಆರ್.ಸಿ.ಪಿ., ಎಫ್.ಆರ್.ಸಿ.ಎಸ್.) ಪಡೆದರು. ಅಲ್ಲಿಯೇ ಕೆಲವು ಕಾಲ ಇದ್ದು ಸೇವೆ ಸಲ್ಲಿಸಿದರು. ತಾಯ್ನಾಡಿನ ಕರೆಯ ಕೇಳಿ ಭಾರತಕ್ಕೆ ಬಂದರು. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸೇರಿದರು. ರಾಷ್ಟ್ರೀಯ ಶಿಕ್ಷಣದ ಚಳುವಳಿಯಲ್ಲಿ ಮುಂದಾಳಾಗಿ ಒಂದು ಹೊಸ ಮೆಡಿಕಲ್ ಕಾಲೇಜನ್ನು ಸ್ಥಾಪಿಸಿದರು. ಈಗ ಆ ಕಾಲೇಜಿಗೆ ಒಂದು ಹೆಸರು ಕೊಡಬೇಕಾಯಿತು. ಡಾ|| ಬಿ. ಸಿ. ರಾಯ್ ಅಷ್ಟರಲ್ಲಿ ಬಂಗಾಲದ ಶ್ರೇಷ್ಠ ವೈದ್ಯರೆಂದು ಹೆಸರಾಗಿದ್ದರು. ಎಲ್ಲರೂ ಅವರನ್ನು ಭಕ್ತಿ ಗೌರವಗಳಿಂದ ನೋಡುತ್ತಿದ್ದರು. ಕಾಲೇಜಿಗೆ ಹೆಸರನ್ನು ಸೂಚಿಸಲು ಎಲ್ಲರೂ ಅವರನ್ನೇ ಪ್ರಾರ್ಥಿಸಿದರು. ಡಾ|| ಬಿ. ಸಿ. ರಾಯ್ ಅವರು ಆ ಕಾಲೇಜಿಗೆ "ನೀಲರತ್ನ ಸರ್ಕಾರ ಮೆಡಿಕಲ್ ಕಾಲೇಜು" ಎಂದು ಹೆಸರಿಡಲು ಸೂಚಿಸಿದರು. ಎಲ್ಲರಿಗೂ ಅಚ್ಚರಿ. ತನ್ನ ಮಗಳನ್ನು ಕೊಡುವುದಿಲ್ಲ ಎಂದ ವ್ಯಕ್ತಿಯ ಹೆಸರು. ಒಂದೇ ಮಾತಿನಿಂದ ಬ್ರಹ್ಮಚಾರಿ ಆದ ವ್ಯಕ್ತಿ ತನ್ನ ಗೌರವವನ್ನು ಗುರುಗಳಿಗೆ ಸಲ್ಲಿಸಿದರು.

ಬಿ. ಸಿ. ರಾಯ್ ಕಂಡಂತೆ ತೆರೆಸಾ

ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಆಗಿದ್ದ ಡಾ|| ಬಿ. ಸಿ. ರಾಯ್ ಅವರ ೮೦ನೆಯ ಹುಟ್ಟುಹಬ್ಬದಂದು ಸ್ಟೇಟ್ಸ್‌ಮನ್ ಪತ್ರಿಕೆ ಅವರ ಒಂದು ಸಂದರ್ಶನ ಪ್ರಕಟಿಸಿತು. ಅದರಲ್ಲಿ ಬಿ. ಸಿ. ರಾಯ್ ತಮ್ಮ ಹಾಗೂ ಗಾಂಧೀಜಿ ನಡುವೆ ಮಧುರ ಬಾಂಧವ್ಯ ಕುರಿತಾಗಲೀ, ಸ್ವಾತಂತ್ರ್ಯ ಹೋರಾಟದ ಬಗ್ಗೆಯಾಗಲೀ ಹೇಳದೆ ಅಷ್ಟೇನೂ ಪ್ರಸಿದ್ಧಳಲ್ಲದ ಸನ್ಯಾಸಿಯೊಬ್ಬಳು ಕಲ್ಕತ್ತಾದ ಬೀದಿಗಳಲ್ಲಿ ಕಾರ್ಯಮಗ್ನಳಾಗಿರುವುದನ್ನು ನೆನೆದರು. ನಾನು ನನ್ನ ಕಛೇರಿಯ ಮೆಟ್ಟಲುಗಳನ್ನು ಏರುವಾಗ ಬಡಬಗ್ಗರಿಗಾಗಿಯೇ ತನ್ನ ಬದುಕನ್ನು ಮುಡುಪಿಟ್ಟ ತೆರೆಸಾ ಬಗ್ಗೆ ಯೋಚಿಸುತ್ತೇನೆ ಎಂದರು. ಈ ಸುದ್ದಿ ಪ್ರಕಟವಾಗುತ್ತಿದ್ದಂತೆಯೇ ತೆರೆಸಾ ಲೋಕವಿಖ್ಯಾತರಾಗಿಬಿಟ್ಟರು. ಅವರ ಸೇವಾ ಕಾರ್ಯಗಳಿಗೆ ಜಗತ್ತಿನಾದ್ಯಂತ ಸಹಾಯ ಹಸ್ತಗಳು ಚಾಚಿದವು.

ಕಳಚಿದ ವಿದ್ವತ್‌ಕೊಂಡಿ—ಡಾ|| ಕೆ. ಕೃಷ್ಣಮೂರ್ತಿ

ಡಾ|| ಶಿಕಾರಿಪುರ ಕೃಷ್ಣಮೂರ್ತಿ
ಪ್ರಾಧ್ಯಾಪಕರು, ಸಂಸ್ಕೃತ ವಿಭಾಗ
ಸೆಂಟ್ ಅಲೋಶಿಯಸ್ ಕಾಲೇಜ್
ಮಂಗಳೂರು-೫೭೫೦೦೩



ದಿವಂಗತ ಡಾ|| ಕೆ. ಕೃಷ್ಣಮೂರ್ತಿ ಅವರು

ಪ್ರೊಫೆಸರ್ ಕೇರಳಾಪುರ ಕೃಷ್ಣಮೂರ್ತಿ ಅವರು (೩೦-೭-೧೯೨೩—೧೮-೭-೧೯೯೭) ನ್ನಡ-ಸಂಸ್ಕೃತ-ಇಂಗ್ಲಿಷ್ ವಾಙ್ಮಯ ಂರಿತ ವಿದ್ವತ್ತಿನ ಕೊಂಡಿ. ಇವರು ಈ ಾಷಾ ಶಾಸ್ತ್ರಗಳನ್ನು ತೌಲನಿಕವಾಗಿ ಳೆಯುಬಲ್ಲವರಾಗಿದ್ದರು.

ಸಾಹಿತ್ಯ ಮತ್ತು ಶಾಸ್ತ್ರಗಳಲ್ಲಿ ಸಮಾನ ಾಂಡಿತ್ಯ ಅವರದ್ದು. ನಾನು ಅವರ ನೇರ ಷ್ಯನಾಗಿ ತರಗತಿಗಳಲ್ಲಿ ಲೀಲಾಜಾಲ ಾಸ್ತ್ರವಿಹಾರಗಳನ್ನೂ ಸಾಹಿತ್ಯ ಪ್ರೌಢಿಮೆ ಯನ್ನೂ ಕೇಳಿ ಆನಂದಿಸಿದವನು. ಎರಡು ಮೂರು ಗಂಟೆಗಳಾದರೂ ಒಂದೊಂದು ಅವಧಿಗಳಲ್ಲಿ ಅವರು ನಮ್ಮನ್ನು ಜ್ಞಾನ-ದಾಳಕ್ಕೆ ಕೊಂಡೊಯ್ಯುತ್ತಿದ್ದ ಪರಿ! ಸಿಹಿ ನೆನಪು ಅಷ್ಟೆ. ಒಂದೊಂದು ತರಗತಿಯಲ್ಲೂ ಅವರು ಎತ್ತಿತೋರುತ್ತಿದ್ದ ಒಳನೋಟ ಎಷ್ಟೊಂದು ಪ್ರಖರವಾಗಿರುತ್ತಿತ್ತೆಂದರೆ, ಮುಂದಿನ ಸಂಶೋಧನೆಗಳಿಗೆ ಇದೊಂದು ಪ್ರಬಲ ಪ್ರೇರಣೆಯಾಗುತ್ತಿತ್ತು. ಹಾಗಾಗಿ ಅವರ ಅಪಾರ ಶಿಷ್ಯವರ್ಗ

ಇಂದು ಸಾಹಿತ್ಯ ಸಂಶೋಧನೆಗಳಲ್ಲಿ ತೊಡಗಿದೆ.

ಸ್ವತಃ ಗಂಟೆಗಟ್ಟಲೆ ಕುಳಿತು ಓದುವ, ಬರೆಯುವ ಗ್ರಂಥಾಲಯಗಳಲ್ಲಿ ಹುಡುಕುತ್ತಾ ಕೂರುವ ಡಾ|| ಕೆ. ಕೃಷ್ಣಮೂರ್ತಿಯವರು ಪರಿಶ್ರಮದ ಅಧ್ಯಯನಕ್ಕೆ ಒಂದು ಮಾದರಿ. ಅವರ ವಿಶಿಷ್ಟ ಬುದ್ಧಿಬಲ ಮತ್ತು ಏನನ್ನಾದರೂ ಕಂಡರೆ ಅದನ್ನು ಕೂಡಲೇ ಗ್ರಹಿಸುವ ಸಾಮರ್ಥ್ಯ ಬೆರಗುಗೊಳಿಸುವಂತಹದು. ಯಾವುದೇ ಗ್ರಂಥವನ್ನು ಹಿಡಿದಾಗಲೂ ಅದರ ಸಾರವನ್ನು ಆ ಶಾಸ್ತ್ರದ ಸಮಗ್ರತೆಯ ಮುನ್ನೆಲೆಯಲ್ಲಿ ನೋಡಬಲ್ಲ ಕಣ್ಣು ಅವರದು. ಮೇಲುನೋಟಕ್ಕೆ ಬೇರೆ ಬೇರೆ ಎಂದೇ ಕಾಣುವ ಗ್ರಂಥಗಳನ್ನೂ ಸಾಹಿತ್ಯ ತತ್ವಗಳನ್ನೂ ವಿಮರ್ಶೆಯ ಸಮಗ್ರ ತತ್ವದಡಿ ತರಬಲ್ಲ ಸಮಗ್ರದೃಷ್ಟಿ ಅವರದಾಗಿತ್ತು.

ಹೊಸತನ್ನು ಮೆಚ್ಚುವ ಔದಾರ್ಯ ಮತ್ತು ಸಂಸ್ಕೃತಜ್ಞರಲ್ಲಿ ಸಾಮಾನ್ಯವಾಗಿ ಕಾಣದ ನಮ್ರತೆ ಅವರನ್ನು ವಿಶಿಷ್ಟರಲ್ಲಿ ವಿಶಿಷ್ಟ ಪಂಡಿತರನ್ನಾಗಿಸಿದೆ. ಏಸುಕ್ರಿಸ್ತನ ಬಗ್ಗೆ ಸಂಸ್ಕೃತ ರೂಪಕವೊಂದನ್ನು ನಿರ್ಮಿಸಿ ದೂರದರ್ಶನದಲ್ಲಿ ತೋರಿಸಿದಾಗ ಯಾವ ಮಡಿವಂತಿಕೆಯೂ ಅವರನ್ನು ಕಾಡಲಿಲ್ಲ. ಆಧುನಿಕ ವ್ಯವಸ್ಥಾಪನ ವಿಜ್ಞಾನವನ್ನು ಪ್ರಾಚೀನ ಗ್ರಂಥಗಳ ಮುನ್ನೆಲೆಯಲ್ಲಿ ಪರಿಶೀಲಿಸುವ ನನ್ನ ಪ್ರಯತ್ನವನ್ನು ಮುಕ್ತಕಂಠದಿಂದ ಮೆಚ್ಚಿದ ಮಹಾನುಭಾವರು ಅವರು. ಹಳತನ್ನು ಹೊಸ ಕಣ್ಣಿನಲ್ಲಿ ನೋಡಬಲ್ಲ ಶಿಷ್ಯರನ್ನು ನಿರ್ಮಿಸಿ ಭಾಷಾಂಧತಾಮುಕ್ತ ಪಂಡಿತರನ್ನು ಲೋಕಕ್ಕೆ ಕೊಡಲು ಬಯಸಿದವರು.

ಹಾಗಾದರೆ ಡಾ|| ಕೆ. ಕೃಷ್ಣಮೂರ್ತಿ ಎಂದೊಡನೇ ನಾವು ಸದಾ ಸ್ಮರಿಸಬೇಕಾದ್ದು ಏನನ್ನು? ಸಂಸ್ಕೃತದವರು ಇಂದಿನ ಕನ್ನಡ–ಇಂಗ್ಲಿಷ್ ವಿದ್ವತ್ ಲೋಕಕ್ಕೆ ತಮ್ಮದೇ ಆದ ರೀತಿಯಲ್ಲಿ ಕೊಡುಗೆ ನೀಡಬೇಕಾದ್ದಿದೆ. ಶಾಸ್ತ್ರಗಳನ್ನೂ ಸಾಹಿತ್ಯವನ್ನೂ ಇಂದಿನ ಸಮಾಜಕ್ಕೆ ಅನ್ವಯವಾಗುವಂತೆ ಅರ್ಥೈಸಬಹುದಾಗಿದೆ. ಹಿನ್ನೆಲೆ ಯಾವುದೇ ಇದ್ದರೂ ಕಷ್ಟಪಟ್ಟು ದುಡಿಯಬಲ್ಲವನು ಎಷ್ಟೂ ಎತ್ತರಕ್ಕೆ ಏರಬಹುದು; ಸಾಮಾಜಿಕ ಎಳೆತ ಸೆಳೆತಗಳೆಲ್ಲವೂ ಇವನ ಕೃಷಿಯ ಮುಂದೆ ಏನೇನೂ ಮಾಡಲಾರವು. ನಾವು ನಮ್ಮ ವಲಯಗಳಲ್ಲಿ ಡಾ|| ಕೆ. ಕೃಷ್ಣಮೂರ್ತಿಯಂತಹವರನ್ನು ಇನ್ನು ಮುಂದೆಯೂ ಕಾಣುವಂತಾಗಬೇಕಾದಲ್ಲಿ, ಕಳಚಿಹೋದ ವಿದ್ವತ್‌ಕೊಂಡಿಯನ್ನು ಮತ್ತೆ ಹೊಂದಿಸಬೇಕಾದಲ್ಲಿ ಇಂದಿನ ವಿದ್ವಾಂಸರು ಅವರ ದಾರಿಯಲ್ಲಿ ಅವಿಶ್ರಾಂತವಾಗಿ ದುಡಿಯಬೇಕಲ್ಲವೇ?

ಶಿಕ್ಷಣದ ಮೂಲಕ ಪುನರ್ನಿರ್ಮಾಣ;
ಪುನರ್ನಿರ್ಮಾಣದ ಮೂಲಕ ಶಿಕ್ಷಣ

—ಗಾಂಧೀಜಿ

ಪಿಂಗಾಣಿಯ ಒಂದು ಚೂರು

ನೀರದ ಎನ್. ನಾಗರಾಜರಾವ್
೨೨೪೫, ೨೪ನೇ ಕ್ರಾಸ್, ಬನಶಂಕರಿ
೨ನೇ ಹಂತ, ಬೆಂಗಳೂರು-೫೬೦೦೭೦

ಪ್ರಪಂಚದಲ್ಲಿ ಯಾರೂ ತಮ್ಮ ಬಳಿ ಇರಿಸಿಕೊಳ್ಳದಂಥಹ ಸಾಮಾನನ್ನು ನಮ್ಮ ತಾಯಿ ಮಾತ್ರ ಏಕೆ ಇಟ್ಟುಕೊಂಡಿದ್ದಾರೆ?

ನಾನು ಸುಮಾರು ಒಂಭತ್ತು ವರ್ಷದವಳಾಗಿದ್ದಾಗ, ಒಂದು ದಿನ ನಮ್ಮ ತಾಯಿ, ನನ್ನನ್ನು ನನ್ನ ಅಣ್ಣಂದಿರ ಮತ್ತು ಅಕ್ಕಂದಿರ ಸುಪರ್ದಿಗೆ ಬಿಟ್ಟು ದೂರದ ಊರಿಗೆ ಹೊರಟು ಹೋದರು. ಅವರ ಕಾರು ಹೊರಟ ಒಡನೆಯೇ, ನಾನು ಅವರ ಬೆಡ್ ರೂಮಿಗೆ ಹೋಗಿ ಅವರ ಬಟ್ಟೆ ಬೀರುವನ್ನು ಕೆದಕಿನೋಡತೊಡಗಿದೆ.

ಬೀರುವಿನ ಮೇಲಿನ ಖಾನೆಯಲ್ಲಿ ಮೃದುವಾದ, ಸುವಾಸನೆಯಿಂದ ಕೂಡಿದ ದೊಡ್ಡವರ ಉಡುಪುಗಳು ಜೋಡಿಸಲ್ಪಟ್ಟಿದ್ದವು. ಅದರ ಮಧ್ಯದಲ್ಲಿ ಒಂದು ಮರದ ಆಭರಣದ ಪೆಟ್ಟಿಗೆ ಇತ್ತು. ಅದರೊಳಗಿನ ವಿಧವಿಧವಾದ ಅಪರೂಪದ ಸಾಮಾನುಗಳನ್ನು ನೋಡಿ ನನಗೆ ಪರಮಾನಂದವಾಯಿತು. ನಮ್ಮ ಅಮ್ಮನಿಗೆ ಅತಿಪ್ರೀತಿ ಪಾತ್ರರಾದ ಆಂಟಿಯೊಬ್ಬರು ಅಮ್ಮನಿಗೆಂದೇ ಕೊಟ್ಟಿದ್ದ ಕೆಂಪಿನ ಉಂಗುರ ನಮ್ಮ ಅಜ್ಜಿಯ ಆಸ್ತಿಯಾಗಿದ್ದ ಒಂದು ಜೊತೆ ಮುತ್ತಿನ ಓಲೆ ಜೊತೆಗೆ ನಮ್ಮ ತಾಯಿಯ ಮದುವೆಯಲ್ಲಿ ಕೊಟ್ಟಿದ್ದ ಒಂದು ಬ್ಯಾಂಡ್ ಸಹ ಅಲ್ಲಿತ್ತು. ನಮ್ಮ ತೋಟದಲ್ಲಿ ಸಾಮೂಹಿಕ ಸಂಗೀತದ ಕಾರ್ಯಕ್ರಮವಿದ್ದಾಗ ನಮ್ಮ ತಾಯಿ, ತಂದೆಯವರ ಜೊತೆ ಆ ಬ್ಯಾಂಡ್ ಬಾರಿಸುತ್ತಿದ್ದರು.

ನಾನು ಉಂಗುರ, ಓಲೆ, ಬ್ಯಾಂಡ್ ಎಲ್ಲವನ್ನೂ ಒಮ್ಮೆ ಹಾಕಿ, ತೆಗೆದು ಊದಿ, ನಮ್ಮ ತಾಯಿಯಂಥ ಸುಂದರ ಸುಶಿಕ್ಷಿತ ಹೆಂಗಸೇ ಇಲ್ಲ ಹಾಗಿಲ್ಲದಿದ್ದರೆ ಇಂಥ ಸುಂದರವಾದ ಬೆಲೆಬಾಳುವ ಸಾಮಾನುಗಳನ್ನು ಸಂಗ್ರಹಿಸುವ ಕಲೆ ಇರುತ್ತಿರಲಿಲ್ಲ ಎಂದು ಹೆಮ್ಮೆಯಿಂದ ಬೀಗಿದೆ. ಅಷ್ಟರಲ್ಲಿ ಪೆಟ್ಟಿಗೆಯ ಮುಚ್ಚಳದ ಒಳಭಾಗದಲ್ಲಿ ಹಾಕಿದ್ದ ಮಖಮಲ್ಲಿನ ಪದರದಲ್ಲಿ ಏನೋ ಕಾಣಿಸಿತು ಬಟ್ಟೆಯನ್ನು ಎತ್ತಿ ನೋಡಿದಾಗ ಪಿಂಗಾಣಿ ಚೂರೊಂದು ಅಲ್ಲಿತ್ತು.

ನಾನು ಅದನ್ನು ಕೈಯಲ್ಲಿ ತೆಗೆದುಕೊಂಡು, "ನಮ್ಮ ತಾಯಿ ಏಕೆ ಈ ಚೂರನ್ನು ಇಲ್ಲಿ ಜೋಪಾನವಾಗಿರಿಸಿಕೊಂಡಿದ್ದಾರೆ? ಪ್ರಪಂಚದಲ್ಲಿ ಯಾರೂ

ಆಧಾರ: ೧೯೯೬ ರ ಸೆಪ್ಟೆಂಬರ್‌ನ 'ರೀಡರ್ಸ್ ಡೈಜೆಸ್ಟ್' ಸಂಚಿಕೆಯಲ್ಲಿನ ಬೆಟ್ಟಿ ಯಂಗ್‌ನ ಅವರ "ದಿ ಲಿಟ್ಲ್ ಚೈನಾ ಚಿಪ್" ಲೇಖನ.

ಇಟ್ಟುಕೊಳ್ಳುವಂಥ ಈ ಮುರುಕು ತುಂಡನ್ನು ಏಕೆ ಇರಿಸಿಕೊಂಡಿದ್ದಾರೆ" ಎಂದು ಯೋಚಿಸತೊಡಗಿದೆ, ಬೆಳಕಿನಲ್ಲಿ ಸ್ವಲ್ಪ ಹೊಳೆಯುತ್ತಿದ್ದ ಆ ತುಂಡಿನಿಂದ ನನಗೆ ಬೇಕಾದ ಉತ್ತರ ಸಿಗಲಿಲ್ಲ.

ಕೆಲವು ತಿಂಗಳ ನಂತರ, ನಾನು ರಾತ್ರಿ ಊಟಕ್ಕೆಂದು ಊಟದಮೇಜನ್ನು ಸಿದ್ಧಗೊಳಿಸುತ್ತಿದ್ದೆ. ಆಗ ನಮ್ಮ ಪಕ್ಕದಮನೆ ಮಾರ್ಗ್‌ ನಮ್ಮ ಮನೆ ಬಾಗಿಲನ್ನು ತಟ್ಟಿದರು. ನಮ್ಮ ತಾಯಿ ಒಲೆಯ ಹತ್ತಿರ ಏನೋ ಕೆಲಸ ಮಾಡುತಿದ್ದುದರಿಂದ ಹೊರ ಬರಲು ಆಗದೆ, ಅವರನ್ನೇ ಒಳಕ್ಕೆ ಬರಲು ಕೂಗಿ ಕರೆದರು. ಒಳಗೆ ಬಂದ ಮಾರ್ಗ್‌ ಊಟದ ಮೇಜಿನ ಮೇಲೆ ಸೆಟ್ ಆಗುತಿದ್ದ ಮೇಜುವಾನಿಗಳನ್ನೆಲ್ಲಾ ಸೂಕ್ಷ್ಮವಾಗಿ ಪರಿಶೀಲಿಸುತ್ತಾ "ಓ ಹೋ! ನಿಮ್ಮ ಮನೆಗೆ ಯಾರೋ ಹೊರಗಿನವರು ಊಟಕ್ಕೆ ಬರುವಹಾಗೆ ಕಾಣುತ್ತಾ ಇದೆ ನಾನು ಮತ್ತೊಮ್ಮೆ ಬರುತ್ತೇನೆ" ಎಂದು ಹೊರಡಲನುವಾದರು.

"ಇಲ್ಲ, ಬನ್ನಿ", ಎಂದು ನಮ್ಮ ತಾಯಿ ಉತ್ತರಿಸುತ್ತಾ "ನಾವು ಯಾರನ್ನೂ ಎದಿರು ನೋಡುತ್ತಿಲ್ಲ" ಎಂದರು.

"ಆದರೆ ನಿಮ್ಮ ಆ ಚೈನಾ ಪಿಂಗಾಣಿ ಸೆಟ್‌ಗಳು? ನಾನಂತು ಯಾವಾಗಲೂ ಒಳ್ಳೇ ಡಿನ್ನರ್ ಸೆಟ್‌ಗಳನ್ನು ಮಕ್ಕಳ ಮೇಲಿನ ಭಯದಿಂದ ಹೊರತೆಗೆಯುವುದೇ ಇಲ್ಲ" ಎಂದು ಮಾರ್ಗ್‌ ಹೇಳಿದರು.

ನಮ್ಮ ತಾಯಿಗೆ ಹಿಂದಿನ ವಿಚಾರಗಳು ಥುತ್ ಎಂದು ನೆನಪಿಗೆ ಬಂದು ಜೋರಾಗಿ ನಕ್ಕುಬಿಟ್ಟರು. "ಈ ದಿನ ನಮ್ಮ ಮನೆಯವರಿಗೇ ನಮ್ಮ ಮನೆಯಲ್ಲಿ ಔತಣ. ನೆಂಟರು ಬಂದಾಗ ನಮ್ಮಲ್ಲಿರುವ ಅತಿಬೆಲೆಬಾಳುವ ಡಿನ್ನರ್ ಸೆಟ್‌ಗಳಿಂದ, ವಿಶೇಷವಾದ ಅಡುಗೆಗಳಿಂದ ಅವರನ್ನು ನಾವು ಸತ್ಕರಿಸುವಾಗ, ನಮ್ಮ ಮನೆಯ ಜನರಿಗೇ ಅಂಥಹದೊಂದು ಔತಣ ಏರ್ಪಡಿಸಬಾರದೇಕೆ?"

"ಆದರೆ, ನಿಮ್ಮ ಆ ಅತಿಬೆಲೆಬಾಳುವ ಚೈನಾ!! ಪಿಂಗಾಣಿ ಸೆಟ್" ಎಂದು ಮತ್ತೊಮ್ಮೆ ಮಾರ್ಗ್‌ ಹೇಳಿದಾಗ

"ಓಹೋ! ಅದಾ" ಎಂದು ತಾಯಿ ಹೇಳುತ್ತಾ, "ಒಂದೆರಡು ತಟ್ಟೆಗಳು ಒಡೆದು ಹೋಗಬಹುದು. ಆದರೆ, ನನ್ನ ಪ್ರೀತಿ ಪಾತ್ರರೊಂದಿಗೆ ಹೊಂದುವ ಆ ಆನಂದದಲ್ಲಿ, ಆ ಮುರಿದ ತಟ್ಟೆಗಳಿಗೆ ಬೆಲೆಯೇ ಇರೊಲ್ಲ" ಎಂದು ಹೇಳುತ್ತಾ ಜೊತೆಗೆ, "ಇದೆಲ್ಲದರ ವಿಚಾರ ಹಾಗಿರಲಿ, ಒಂದೊಂದು ಪಿಂಗಾಣಿ ತುಂಡುಗಳು ಮತ್ತು ಪಿಂಗಾಣಿ ಪಾತ್ರೆಗಳ ಮೇಲೆ ಕಾಣುತ್ತಿರುವ ಬಿರುಕುಗಳು ತನ್ನದೇ ಆದ ಒಂದೊಂದು ಕಥೆಯನ್ನು ಜ್ಞಾಪಿಸುತ್ತವೆ" ಎಂದಳು.

ಅಲಮಾರಿನ ಹತ್ತಿರಕ್ಕೆ ಹೋಗಿ ಅದರೊಳಗಿನಿಂದ ಒಂದೇ ತಟ್ಟೆಯ ಎರಡು ಭಾಗಗಳನ್ನು ಒಟ್ಟಿಗೆ ತಂದು ತೋರಿಸುತ್ತಾ "ಆಸ್ಪತ್ರೆಯಿಂದ ನನ್ನ ಮಗ ಮಾರ್ಕ್‌ ನನ್ನು ಮನೆಗೆ ಕರೆತಂದ ದಿನ ಒಡೆದ ನೆನಪಿಗಾಗಿ ಇರಿಸಿಕೊಂಡಿದ್ದೀನಿ, "ಆ ದಿನ ಮಧ್ಯಾಹ್ನ ವಿಪರೀತ ಚಳಿ ಮತ್ತು ತೀವ್ರವಾದ ಗಾಳಿ ಬೀಸುತ್ತಿತ್ತು. ನನ್ನ ಮಗಳು ಕೇವಲ ಆರು ವರ್ಷದ ಜೂಡಿ ನನಗೆ ಸಹಾಯಮಾಡಲು ಮುಂದೆ ಬಂದಳು. ಆ ಉತ್ಸಾಹದಲ್ಲಿ ಸಿಂಕ್‌ನೊಳಕ್ಕೆ ತಟ್ಟೆಗಳನ್ನು ತೆಗೆದುಕೊಂಡು ಹೋಗಿ ಇಡಲು ಹೋದಾಗ ಕೈತಪ್ಪಿ ಬಿದ್ದು ಒಡೆದು ಹೋಯಿತು.

"ಮೊದಲು ಸ್ವಲ್ಪ ಹೊತ್ತು ನನಗೆ ಬಹಳ ಮನಸ್ಸಿಗೆ ನೋವಾಗಿದ್ದೇನೋ ನಿಜ. ಆದರೆ ನಮ್ಮ ಮನೆಗೊಂದು ಹೊಸ ಮಗು ಬಂದದಿನ ಉಂಟಾಗಿರುವ ಸಂತೋಷವನ್ನು ಹತ್ತಿಕ್ಕಲು ಮನಸ್ಸಾಗಲಿಲ್ಲ. ಜೊತೆಗೆ ಆ ದಿನ ನಾವೆಲ್ಲಾ ಸಂತೋಷದಿಂದ ಒಟ್ಟಾಗಿ ಸುಖಿಸುತಿದ್ದೆವು" ಎಂದಳು. ಮಾರ್ಗ್‌ಗೆ ಈ ಸಿದ್ಧಾಂತದ ತಲೆಬುಡ ಅರ್ಥವಾಗದೇ ಬೆಪ್ಪಾಗಿ ನೋಡ ತೊಡಗಿದರು.

ನಮ್ಮ ತಾಯಿ ಮತ್ತೆ ಅಲಮಾರಿನ ಬಳಿ ಹೋಗಿ ಮತ್ತೊಂದು ತಟ್ಟೆಯನ್ನು ತಂದರು. ಅದನ್ನು ಕೈಯಲ್ಲಿ ಹಿಡಿದು, ಮೇಲಕ್ಕೆ ಎತ್ತಿ "ನೋಡಿ, ಈ ತಟ್ಟೆಯ ಅಂಚಿನಲ್ಲಿ ಒಂದು ಬಿರುಕು ಇದೆಯಲ್ಲವೆ? ಇದು, ನಾನು ಹದಿನೇಳನೆಯ ವಯಸ್ಸಿನವಳಾಗಿದ್ದಾಗ ಆದದ್ದು ಎಂದರು.

ಇದ್ದಕ್ಕಿದಂತೆ ನಮ್ಮ ತಾಯಿಯ ಧ್ವನಿ ಮೆದುಗೊಂಡಿತ್ತು. "ಒಂದು ವಸಂತಋತುವಿನ ದಿನ, ನನ್ನ ಅಣ್ಣಂದಿರು ಒಣ ಹುಲ್ಲನ್ನು ಶೇಖರಿಸಿ ಇಡಲು ಸಹಕರಿಸುವಂತೆ ಒಬ್ಬ ಯುವಕನನ್ನು ಕೆಲಸಕ್ಕೆ ತೆಗೆದುಕೊಂಡಿದ್ದರು. ಆತ ಸಣ್ಣಕ್ಕೆ ಬಲಶಾಲಿಯಾದ ಉಕ್ಕಿನಂಥಹ ತೋಳುಗಳುಳ್ಳವನಾಗಿದ್ದ. ಜೊತೆಗೆ ತಲೆತುಂಬಾ ಒತ್ತುಕೂದಲು ಕೂಡ ಹೊಂದಿದ್ದ. ಇದೆಲ್ಲದರ ಜೊತೆ, ಅವನು ನಕ್ಕಾಗಲೆಲ್ಲಾ ಒಂದು ರೀತಿಯ ಮೋಹಕನಗೆಯೂ ಕಾಣುತಿತ್ತು.

"ನನ್ನ ಅಣ್ಣಂದಿರಿಗೆ ಅವನಲ್ಲಿ ಏನೋ ಒಂದು ವಿಚಿತ್ರ ರೀತಿಯ ಪ್ರೀತಿ ಉಂಟಾಗಿ, ರಾತ್ರಿ ಊಟಕ್ಕೆ ನಿಲ್ಲಿಸಿಕೊಂಡರು, ನನ್ನ ದೊಡ್ಡಣ್ಣ ಒಂದು ಕಡೆ, ನಾನು ಮತ್ತೊಂದು ಕಡೆ ಆ ಹೊರಗಿನ ಅತಿಥಿ ಊಟಕ್ಕೆ ಕುಳಿತಿದ್ದಾಯಿತು. ನನಗೆ ಹೇಳಿಕೊಳ್ಳಲಾಗದಂಥ ಮುಜುಗರ. ನನಗೆ ಜ್ಞಾನತಪ್ಪಿ ಹೋದಂತೆಯೂ ಆಯಿತು.

ಅತಿಸುಂದರವಾದ ಮರೆಯಲಾಗದ ನೆನಪು

ತಾನು ತನ್ನ ಚಿಕ್ಕಮಗಳಿಗೆ ಮತ್ತು ಪಕ್ಕದ ಮನೆಯವರೊಬ್ಬರಿಗೆ ಕಥೆ ಹೇಳುತ್ತಿದುದಾಗಿ ಜ್ಞಾಪಿಸಿಕೊಂಡು, ನಮ್ಮ ತಾಯಿಯ ಮುಖ ಕೆಂಪಗಾಗತೊಡಗಿತ್ತು. ಆತುರ, ಆತುರವಾಗಿ ಈ ರೀತಿ ಹೇಳತೊಡಗಿದರು. "ಸರಿ, ಆಮೇಲೆ ಆಗಂತುಕ ತನ್ನ ತಟ್ಟೆಯನ್ನು ನನ್ನ ಕೈಗೆ ಕೊಡುತ್ತಾ ಸ್ವಲ್ಪ ಅಡುಗೆಯನ್ನು ಅದರಲ್ಲಿ ಬಡಿಸಿಕೊಡುವಂತೆ ಕೇಳಿಕೊಂಡರು. ನಾನು ಬಹಳ ನಾಚಿಕೆ ಮತ್ತು ಹೆದರಿಕೆಯಿಂದ ಆ ತಟ್ಟೆಯನ್ನು ಅವರ ಕೈಯಿಂದ ತೆಗೆದುಕೊಂಡಾಗ ಅದು ಕೈಜಾರಿ, ಅಡುಗೆ ಇರಿಸಿದ್ದ ಕ್ಯಾಸರೋಲ್ ಪಾತ್ರೆಗೆ ಬಡಿಯಿತು.

"ಅದೂ ಒಂದು ಮರೆಯಲಾಗದಂಥ ನೆನಪಿನ ಘಟನೆ" ಎಂದು ಮಾರ್ಗ್ ಹೇಳಿದಳು.

"ಓಹೋ!! ಹಾಗೇನಿಲ್ಲ" ಎಂದು ನಮ್ಮ ತಾಯಿ ಉತ್ತರಿಸಿದರು, "ಆ ಎಳೆವಯಸ್ಸಿನ ಅತಿಥಿ ಹೊರಡುವಾಗ ನನ್ನ ಕೈಯನ್ನು ತನ್ನ ಕೈಯಲ್ಲಿ ಹಿಡಿದುಕೊಂಡು, ಅದರೊಳಗೆ ಒಂದು ತುಂಡು ಮುರಿದ ಆ ಚೈನಾ ಪಿಂಗಾಣಿ ಚೂರನ್ನಿತ್ತು ಹೊರಟು ಹೋದನು. ಅದೇ ಮುಗುಳುನಗೆಯನ್ನು ಮತ್ತೊಮ್ಮೆ ಬೀರಿ ಹೊರಟೇಹೋದನು. ಏನೊಂದು ಮಾತೂ ಆಡದೆ ಹೊರಟು ಹೋದನು.

"ಒಂದು ವರ್ಷದ ನಂತರ ನಾನು ಅವರನ್ನೇ ಮದುವೆಯಾದೆ, ಇವತ್ತಿನ ವರೆಗೂ, ನಾನು ಆ ಒಡೆದ ತಟ್ಟೆಯನ್ನು ನೋಡಿದಾಗಲೆಲ್ಲಾ, ಆ ದಿನದ ಅವರ ಭೇಟಿಯ ನೆನಪು ಕಣ್ಮುಂದೆ ಹಾಯುತ್ತದೆ.

ನಾನು ದಂಗಾಗಿ ಅಮ್ಮನನ್ನೇ ನೋಡುತ್ತಿದ್ದೆ. ತಾಯಿ ನನ್ನ ಕಡೆಗೊಮ್ಮೆ ಕಣ್ಣು ಹೊಡೆದು ನಂತರ ಅತಿಜಾಗರೂಕತೆಯಿಂದ ಆ ತಟ್ಟೆಯನ್ನು ಇತರ ತಟ್ಟೆಗಳ ಹಿಂದೆ ಇರಿಸಿದರು. ತಮ್ಮದೇ ಆದ ಸ್ಥಾನಮಾನಗಳನ್ನು ಹೊಂದಿದ್ದ ಆ ತಟ್ಟೆಗಳ ಕಥೆಯೇ ಬೇರೆಯಾಗಿತ್ತು.

ನನಗೆ ಆ ತಟ್ಟೆಯ ತುದಿಯ ಒಂದು ಚೂರಿನ ಬಗ್ಗೆ ಮರೆಯಲಾಗಲೇ ಇಲ್ಲ. ಅಲ್ಲಿಂದ ಎದ್ದವಳೇ ನಾನು, ನನ್ನ ತಾಯಿಯ ಕೊಠಡಿಗೆ ಹೋಗಿ ಆ ಮರದ ಒಡವೆ ಪೆಟ್ಟಿಗೆಯನ್ನು ಮತ್ತೆ ತೆಗೆದಿಟ್ಟುಕೊಂಡು ಕುಳಿತೆ. ಅದರಲ್ಲಿ ಆ ಸಣ್ಣ ಚೈನಾ ಪಿಂಗಾಣಿಚೂರಿನ ಅವಶೇಷ ಕುಳಿತಿತ್ತು.

ನಾನು ಅದನ್ನು ಗಮನವಿಟ್ಟು ನೋಡಿ ಮತ್ತೆ ಅಡುಗೆಮನೆ ಕಬೋರ್ಡ್‌ನವರೆಗೆ ಓಡಿಹೋದೆ. ಒಂದು ಕುರ್ಚಿಯನ್ನು ಎಳೆದುಕೊಂಡು, ಅದರ ಮೇಲೆ ಹತ್ತಿ ಆ ಮುರಿದ ತಟ್ಟೆಯನ್ನು ಕೆಳಕ್ಕೆ ತೆಗೆದಿರಿಸಿಕೊಂಡೆ. ನಾನಂದುಕೊಂಡಂತೆಯೇ, ಆ ತುಂಡು ನನ್ನ ತಾಯಿ ಅತಿಭದ್ರವಾಗಿ ತನ್ನ ಪೆಟ್ಟಿಗೆಯೊಳಗಿಟ್ಟು, ಕಾಪಾಡಿದ್ದು, ಬೇರಾವ ತಟ್ಟೆಯ ತುಂಡಾಗಿರದೆ, ಆಕೆ ನನ್ನ ತಂದೆಯನ್ನು ಮೊದಲಬಾರಿಗೆ ಭೇಟಿ ಆದಾಗ, ಊಟ ಬಡಿಸುವಾಗ, ಕ್ಯಾಸರೋಲ್‌ಗೆ ಬಡಿದ ತಟ್ಟೆಯದೇ ಆಗಿತ್ತು.

ನಾನಂತೂ ಬಹಳ ಜಾಣೆಯಾಗಿ ಬಿಟ್ಟಿದ್ದೆ ನನ್ನ ತಾಯಿಯ ಮೇಲೆ ನನಗೆ ಇನ್ನೂ ಅತಿಯಾದ ಗೌರವ ಉಂಟಾಗತೊಡಗಿತು. ಅತಿ ಜಾಗರೂಕತೆಯಿಂದ ಆ ಸಣ್ಣ ಪಿಂಗಾಣಿ ಚೂರನ್ನು ಒಡವೆ ಪೆಟ್ಟಿಯೊಳಗಿಟ್ಟುಬಿಟ್ಟೆ.

ಆ ಸಣ್ಣ ಚೂರಿನಿಂದ ಉಂಟಾದ ಪ್ರೇಮದ ಕಥೆಗೀಗ ಹಲ ವರ್ಷಗಳಾಗಿವೆ. ಇತ್ತೀಚೆಗೆ ನನ್ನ ಒಬ್ಬ ತಂಗಿ ನಮ್ಮ ತಾಯಿಯನ್ನು "ಆ ಕೆಂಪಿನ ಉಂಗುರ ನನಗೇ ಕೊಡಬೇಕು" ಎಂದು ಕೇಳಿಕೊಂಡಳು. ಮತ್ತೊಬ್ಬ ತಂಗಿ "ನನಗೆ ಅಜ್ಜಿಯ ಮುತ್ತಿನ ಓಲೆ ಇರಲಿ" ಎಂದಳು.

ನಾನೂ ಮಾತ್ರ "ಅಮ್ಮನ ಅತಿ ಅಮೂಲ್ಯ ನೆನಪಿನ ಕಾಣಿಕೆಯಾದ ಆ ಪಿಂಗಾಣಿಯ ಚೂರನ್ನು ನನಗೇ ಕೊಡಿ" ಎಂದು ಕೇಳಿಕೊಂಡೆ.

ದೇವರೇ ರೋಗಿಯ ರೂಪದಲ್ಲಿ ಮುಂದಿದ್ದಾನೆ ನಾವು ಮಾಡುವ ಸೇವೆ ದೇವರಿಗೆ ಮಾಡುವ ಸೇವೆ.

—ಮದರ್ ತೆರೇಸಾ

ಹೃದಯ ಸಂಬಂಧ

ಮಾಧವರಾವ್ ಮುಧೋಳ್
'ರಮಾಶ್ರೀ' ೧೧೬೭-ಬಿ೧, ಎಚ್.ಐ.ಜಿ.
೧ನೇ ತಿರುವು, ಶ್ರೀರಾಂಪುರ ೨ನೇ ಹಂತ
ಮೈಸೂರು

ಅದೇಕೋ ಇತ್ತೀಚಿನ ದಿನಗಳಲ್ಲಿ ಅವಳು ಬಹಳ ನೆನಪಿಗೆ ಬರುತ್ತಿದ್ದಾಳೆ. ಜೀವನದಲ್ಲಿ ಅದೆಷ್ಟೋ ಜನರು ಭೇಟಿಯಾಗುತ್ತಾರೆ. ಆದರೆ ಅದರಲ್ಲಿ ಕೆಲವು ಮುಖಗಳು ಹೃದಯದ ಮೇಲೆ ಅಚ್ಚೊತ್ತಿದಂತೆ ಮೂಡಿ ಬಿಡುತ್ತವೆ. ರಜ್ಜೂಮಾಂಸಿಯ ಮುಖವು ಇಂಥದರಲ್ಲೊಂದು. ಅವಳು ನನ್ನ ಮನಸ್ಸಿನ ಮೇಲೆ, ಹೃದಯದ ಮೇಲೆ ಎಷ್ಟರ ಮಟ್ಟಿಗೆ ಪರಿಣಾಮ ಬೀರಿದ್ದಾಳೆಂದರೆ, ನಾನು ಮರೆಯಬೇಕೆಂದರೂ ಅವಳನ್ನು ಮರೆಯಲು ಸಾಧ್ಯವಾಗುತ್ತಿಲ್ಲ. ಅವಳನ್ನು ಕಂಡ ಆ ಮೊದಲಿನ ದಿವಸ ಇವತ್ತಿಗೂ ಅಚ್ಚಳಿಯದಂತೆ ನೆನಪಿದೆ.

ನಾವು ಆ ಓಣಿಯಲ್ಲಿ ಆಗಿನ್ನೂ ತೀರ ಹೊಸಬರು. ನಮಗೆ ಯಾರ ಗುರುತು ಪರಿಚಯವೂ ಇನ್ನೂ ಆಗಿರಲಿಲ್ಲ. ಒಂದು ದಿವಸ ಡ್ರಾಯಿಂಗ್ ರೂಮಿನಲ್ಲಿ ಕುಳಿತು ಪತ್ರಿಕೆಯ ಶೀರ್ಷಿಕೆಗಳನ್ನು ನೋಡುತ್ತಿದ್ದೆ. ತಾಯಿ ಅಡುಗೆಮನೆಯಲ್ಲಿದ್ದರು. ಅಕಸ್ಮಾತ್ತಾಗಿ ಕರೆಗಂಟೆ ಕೇಳಿಸಿತು. ತಕ್ಷಣ ಎದ್ದು ಬಾಗಿಲು ತೆರೆದೆ. ಅಪರಿಚಿತ ಹೆಂಗಸೊಬ್ಬಳು ಎದುರಿಗೆ ನಿಂತಿದ್ದಳು. ತೆಳುದೇಹ, ಐವತ್ತಕ್ಕೂ ಹೆಚ್ಚು ವಯಸ್ಸಿರಬಹುದು. ಬಿಳುಪು ಮುಖ. ಬತ್ತಿದ ಗಲ್ಲಗಳು, ಬಿಳಿ ಕೂದಲು. ಬಳೆಗಳಿರದ ಮುಂಗೈಗಳು. ನನ್ನನ್ನು ನೋಡುತ್ತಲು ಮುಗುಳು ನಕ್ಕಳು.

"ಹೇಳಿ! ತಾವು ಯಾರನ್ನು ಕಾಣಬೇಕಾಗಿದೆ?" ಎಂದು ಆ ಹೆಂಗಸನ್ನು ಆಪಾದ-ಮಸ್ತಕ ನೋಡುತ್ತ ಕೇಳಿದೆ.

"ನಿಮ್ಮ ತಾಯಿಯನ್ನು ಕಾಣಬೇಕಿತ್ತು" ಎಂದು ಬಹಳ ಮೃದುವಾದ ಧ್ವನಿಯಲ್ಲಿ ನನ್ನ ತಲೆಯನ್ನು ಸವರುತ್ತ ಅಕ್ಕರೆಯಿಂದ ಹೇಳಿದಳು

ನನ್ನ ತಿಳುವಳಿಕೆಯ ಪ್ರಕಾರ ಈ ಹಿರಿಯ ಹೆಂಗಸು ನಮ್ಮ ಬಳಗದವರಲ್ಲಿ ಯಾರೂ ಆಗಿರಲಿಲ್ಲ. "ಹಾಗಾದರೆ ಇವಳು ಯಾರಾಗಿರಬಹುದು?" ನಾನು ನಿಂತಲ್ಲಿಯೇ ಯೋಚಿಸುತ್ತಿದ್ದೆ.

"ಒಳಗೆ ಬಾ ಎಂದೂ ಕರೆಯುವುದಿಲ್ಲವೇ ಮಗು?" ಎಂದು ಅವಳು ಅಂದಾಗ ಅವಳ ನಸುಗೆಂಪು ಹಲ್ಲುಗಳು ಕಂಡವು.

"ಏನಂದಿರಿ?" ನನಗೆ ನಾಚಿಕೆಯಾದಂತಾಯಿತು. ಬಾಗಿಲು ತೆರೆದು ಒಂದು ಬದಿಗೆ

ಆಧಾರ: ಮಿಸ್ ಶಮೀಮ್ ಅವರ "ದಿಲ್ ಕೆ ರಿಶ್ತೆ" ಎಂಬ ಉರ್ದು ಕಥೆ.

ಸರಿದು, "ಬನ್ನಿ ಒಳಕ್ಕೆ" ಎಂದೆ. ಸೋಫಾದ ಕಡೆ ತೋರಿಸಿ, "ತಾವು ಕೂತ್ಕೊಳ್ಳಿ. ಅಮ್ಮನ್ನ ಈಗಲೇ ಕರೆಯುತ್ತೇನೆ" ಎಂದೆ.

ಆದರೆ ಅವಳು ನೆಲದ ಮೇಲೆಯೇ ಕಾಲು ಮುದುರಿಕೊಂಡು ಕುಳಿತಳು.

"ಯಾರು?.... ನೀಲೂ.... "ಅಮ್ಮಾ ಅಡುಗೆಮನೆಯಿಂದಲೇ ಕೇಳಿದರು.

"ಅಮ್ಮಾ! ನಿನ್ನನ್ನು ಯಾರೋ ನೋಡಲು ಬಂದಿದ್ದಾರೆ" ಎಂದು ಹೇಳುತ್ತ ಆ ಹಿರಿಯ ಹೆಂಗಸಿನತ್ತ ನೋಡಿದೆ. ಅವಳೂ ನನ್ನನ್ನೇ ನೋಡುತ್ತಿದ್ದಳು.

"ಅಂ! ನನ್ನನ್ನು ನೋಡೋದಕ್ಕೇ....? ....ಯಾರೂ?" ಎಂದು ಹೇಳುತ್ತಲೇ ಡ್ರಾಯಿಂಗ್ ರೂಮಿಗೆ ಬಂದಾಗ ಆ ಹಿರಿಯ ಹೆಂಗಸು ಅತ್ಯಂತ ಗೌರವದಿಂದ ಅಮ್ಮನಿಗೆ "ನಮಸ್ಕಾರ" ಎಂದಿದ್ದಳು.

ಅವಳ ವಂದನೆಗೆ ಪ್ರತಿವಂದನೆಯನ್ನು ಸಲ್ಲಿಸುತ್ತ ನಮ್ಮ ತಾಯಿ ಬಹಳ ಆಶ್ಚರ್ಯ ದಿಂದ, "ಕ್ಷಮಿಸಿ, ತಾವು ಯಾರು ಅನ್ನು ವುದು ಗೊತ್ತಾಗಲಿಲ್ಲ" ಅಂದರು.

ಇದನ್ನು ಕೇಳಿ ಆ ಹಿರಿಯ ಹೆಂಗಸು ಇಷ್ಟಗಲ ಬಾಯಿ ತೆರೆದು, "ಹೌದು! ತಾವು ಸರಿಯಾಗಿಯೇ ಹೇಳಿದಿರಿ ಬೇಗಂ ಸಾಹೆಬಾ! ನನ್ನ ಗುರುತು ತಮಗಿಲ್ಲ. ತಮ್ಮ ಗುರುತು ನನಗಿಲ್ಲಾ ಅಮ್ಮಾ ಅವರೆ! ನಿಜ. ನನ್ನ ಹೆಸರು ರಜಿಯಾ. ಓಣಿಯ ಚಿಕ್ಕವರು ದೊಡ್ಡವರು ಎಲ್ಲರೂ ನನ್ನನ್ನು ರಜ್ಜೂ ಮಾಂಸಿ ಅಂತಲೇ ಕರೆಯುತ್ತಾರೆ. ಹತ್ತಿರದ ಓಣಿಯಲ್ಲಿಯೇ ಇರುತ್ತೇನೆ. ಅವರಿವರ ಮನೆಗಳಲ್ಲಿ ಕಸಮುಸುರಿ ಮಾಡಿಕೊಂಡು ಹೊಟ್ಟೆ ತುಂಬಿಸಿಕೊಳ್ಳುತ್ತೇನೆ. ತಾವು ಈ ಓಣಿಯಲ್ಲಿ ಹೊಸದಾಗಿ ಬಂದಿರುವಿರೆಂದು ಕೇಳಿದೆ. ಅದಕ್ಕೇ ತಮ್ಮನ್ನು ನೋಡಿ ಕೊಂಡು ಹೋದರಾಯಿತೆಂದು ಬಂದಿದ್ದೆ." ಎಂದಳು.

ಆ ಹಿರಿಯ ಹೆಂಗಸು ಒಂದೇ ಉಸುರಿನಲ್ಲಿ ಎಲ್ಲ ವಿಷಯ ಹೇಳಿ ತೃಪ್ತಿಹೊಂದಿದ್ದಳು.

"ಒಳ್ಳೇದು ಮಾಡಿದೆ ಮಾಂಸಿ" ಎಂದು ಅಮ್ಮಾ ಬಾಯಿತುಂಬಾ ಸಂತೋಷದಿಂದ ಹೇಳಿದರು.

ನಾನು ಅಲ್ಲಿಂದ ನನ್ನ ರೂಮಿನೊಳಕ್ಕೆ ಹೋದೆ. ನನ್ನ ತಾಯಿ ಜೊತೆ ಅದೆಷ್ಟು ಹೊತ್ತು ಕುಳಿತು ಅವಳು ಮಾತನಾಡು ತ್ತಿದ್ದಳೊ ನನಗೆ ತಿಳಿಯದು.

ಆಮೇಲಿಂದ ಅವಳು ನಿತ್ಯ ನಮ್ಮ ಮನೆಗೆ ಬೆಳಿಗ್ಗೆ ಅಥವಾ ಸಂಜೆ ಬರುವುದಕ್ಕೆ ಪ್ರಾರಂಭಿಸಿದಳು. ಯಾವಾಗ ನಮ್ಮ ಮನೆಗೆ ಬಂದರೂ ಅವಳು ಒಂದಿಲ್ಲೊಂದು ಕೆಲಸ ಮಾಡುತ್ತಿರುವುದನ್ನೇ ನೋಡುತ್ತಿದ್ದೆ. ಕೆಲವು ಸಲ ಅಡುಗೆಮನೆಯಲ್ಲಿ ತಾಯಿಗೆ ಸಹಾಯ ಮಾಡುತ್ತಿದ್ದರೆ ಕೆಲವು ಸಲ ತರಕಾರಿ ಹೆಚ್ಚುತ್ತಿದ್ದಳು. ಕೆಲವು ಸಲ ಕಸ ಗುಡಿಸುತ್ತಿದ್ದರೆ, ಕೆಲವು ಸಲ ಪಾತ್ರೆ ತಿಕ್ಕು ತ್ತಿದ್ದಳು. ಈ ಇಳಿ ವಯಸ್ಸಿನಲ್ಲಿ ಕೂಡ ಅದೆಷ್ಟೋ ಕೆಲಸ ಮಾಡುತ್ತಿದ್ದರೂ ಆಯಾಸವನ್ನೇ ಪಟ್ಟುಕೊಳ್ಳುತ್ತಿರಲಿಲ್ಲ. ಅದೆಂಥ ವ್ಯಕ್ತಿತ್ವ ಕೆಯಿಂದ ದೇವರು ಅವಳ ಶರೀರವನ್ನು ಮಾಡಿದ್ದನೊ! ಅವಳ ಹಣೆಯ ಮೇಲೆ ಬೇಸರದ ಗೆರೆ ಮೂಡಿದುದನ್ನು ನಾನು ಎಂದೂ ನೋಡಿಲ್ಲ ಯಾವಾಗಲೂ ನಗುನಗುತ್ತಲೇ ಇರುತ್ತಿದ್ದಳು.

ಮೊದಮೊದಲು ನಾನು ಅವಳಿಂದ ದೂರ ದೂರವೇ ಇರುತ್ತಿದ್ದೆ. ಆದರೆ ಅವಳ ಹೃದಯ

ದಲ್ಲಿ ಏನು ಆಕರ್ಷಣೆ ಇದ್ದಿತೊ, ಅವಳ ಮಾತಿನಲ್ಲಿ ಯಾವ ಮೋಡಿ ಇತ್ತೋ ತಿಳಿಯದು. ನಾನು ಕೆಲವೇ ದಿನಗಳಲ್ಲಿ ಅವಳ ಅಂತಃಕರಣದ ಸೆರೆಯಾದೆ. ಯಾವುದಾದರು ಕೆಲಸದ ಒತ್ತಡದಿಂದ ಮನೆಗೆ ಅವಳು ಬಾರದಿದ್ದರೆ, ನನಗೆ ವಿಚಿತ್ರ ಬಗೆಯ ಚಡಪಡಿಕೆಯಾಗುತ್ತಿತ್ತು. ಪರಿಣಾಮವಾಗಿ ನಾನೇ ಸ್ವತಃ ಅವಳನ್ನು ಕಂಡು ಬರಲು ಅವಳ ಮನೆಗೆ ಹೋಗುತ್ತಿದ್ದೆ.

ಈ ಜಗತ್ತಿನಲ್ಲಿ ಅವಳಿಗೆ ತನ್ನವರೆಂಬುವರು ಯಾರೂ ಇರಲಿಲ್ಲ. ಆದರೂ ಓಣಿಯ ಹಿಂದುಗಳಾಗಲಿ, ಮುಸಲ್ಮಾನರಾಗಲಿ ಎಲ್ಲರೂ ಅವಳವರಾಗಿದ್ದರು. ಚಿಕ್ಕವರು ದೊಡ್ಡವರು ಎಲ್ಲರೂ ಅವಳಿಗೆ ಮರ್ಯಾದೆ ಕೊಡುತ್ತಿದ್ದರು.

ಅವಳು ಪ್ರತಿಯೊಬ್ಬರ ಸಹಕಾರಿ. ದುಃಖದಲ್ಲಿ ಭಾಗಿ, ಕಷ್ಟಸಹಿಷ್ಣುತೆಯ ಸಾಕಾರ ಮೂರ್ತಿ, ಕರುಣಾಮಯಿಯಾಗಿದ್ದಳು. ಅವಳ ಉಪಕಾರದ ಹೊರೆಗೆ ಋಣಿಯಾಗದವರೇ ಇರಲಿಲ್ಲ. ಅವಳು ಹೋಗದ ಮನೆ ಯಾವುದಿತ್ತು? ಪ್ರತಿಯೊಬ್ಬರ ಕ್ಷೇಮ ಸಮಾಚಾರವನ್ನು ತಿಳಿದುಕೊಳ್ಳುವುದು ಅವಳ ಅಭ್ಯಾಸವಾಗಿತ್ತು. ದಾರಿಯುದ್ದಕ್ಕೂ ಹೋಗುತ್ತಿರುವಾಗ ಎಲ್ಲರ ಕ್ಷೇಮಸಮಾಚಾರ ಕೇಳಿ ತಿಳಿದುಕೊಳ್ಳುತ್ತಿದ್ದಳು.

“ಏನು ರಹಿಮಾನ್ ಭಯ್ಯಾ ಈಗ ನಿಮ್ಮ ಆರೋಗ್ಯ ಹೇಗಿದೆ?”

“ಯಾಕೆ ಪಾರು? ನಿನ್ನ ಮಗುವಿನ ಜ್ವರ ವಾಸಿಯಾಗಿದೆಯೆ?”

“ಕರೀಮ್ ಮಿಯ್ಯಾ! ನಿನ್ನ ಕೆಮ್ಮು ಕಡಿಮೆಯಾಗಿದೆಯೆ?....” ಎಂದು.

ನಮ್ಮ ಮನೆಯಲ್ಲಿ ಯಾರಿಗಾದರು ಸ್ವಲ್ಪ ಹುಷಾರು ತಪ್ಪಿದರೆ ಮನೆಯವರಿಗಿಂತಲೂ ಅವಳಿಗೇ ಬಹಳ ಚಿಂತೆಯಾಗಿಬಿಡುತ್ತಿತ್ತು. ಸ್ವತಃ ತನ್ನ ಕ್ಷೇಮಸಮಾಚಾರ ಲೆಕ್ಕಿಸದೆ ಜ್ವರ ಬಂದವರ ಶುಶ್ರೂಷೆಗೆ ತೊಡಗುತ್ತಿದ್ದಳು. ಇಷ್ಟು ಶುದ್ಧ ಮನಸ್ಸಿನ ಆಶಾರಹಿತ ಹೆಂಗಸನ್ನು ಇಂದಿನವರೆಗೆ ನಾನು ನೋಡಿಲ್ಲ. ಯಾರದಾದರೂ ಮನೆಯಲ್ಲಿ ಆಗಬಾರದ ಸಾವು ಆದರೆ ತನ್ನ ಎಲ್ಲ ಕೆಲಸವನ್ನೂ ಅರ್ಧಕ್ಕೇ ಬಿಟ್ಟು ಅವರ ಮನೆಗೆ ಹೋಗಿಬಿಡುತ್ತಿದ್ದಳು. ಅವರ ಕಣ್ಣೀರು ಒರೆಸುತ್ತಿದ್ದಳು. ಸಮಾಧಾನ ಹೇಳುತ್ತಿದ್ದಳು. ಅವರ ಬೇಸರ ಕಳೆಯುವುದಕ್ಕೆ ರಾತ್ರಿಯೆಲ್ಲ ಅವರ ಮನೆಯಲ್ಲಿಯೇ ಉಳಿದುಬಿಡುತ್ತಿದ್ದಳು. ಅವಳ ತ್ಯಾಗಮಯ ಪ್ರೀತಿಯಲ್ಲಿ ಅದೆಷ್ಟು ದುಃಖ ಅದುಮಿಕೊಂಡಿರುತ್ತಿದ್ದಿತೆಂಬುದು ಹೇಳುವುದು ಕಷ್ಟ. ಎರಡನೆಯವರೇಕೆ, ಕಷ್ಟದಲ್ಲಿ ನಮ್ಮವರೇ ನಮ್ಮ ಜೊತೆ ಬಿಟ್ಟುಬಿಡುತ್ತಾರೆ. ಆದರೆ ರಜ್ಜೊ ಮಾಂಸಿ, ಜಾತಿ ಧರ್ಮದ ಭೇದ ಲೆಕ್ಕಿಸದೆ, ಚಿಕ್ಕವರು ದೊಡ್ಡವರ ಭೇದವೆಣಿಸದೆ ಪ್ರತಿಯೊಬ್ಬರ ದುಃಖವನ್ನೂ ಮನದಾಳದಲ್ಲಿರಿಸಿಕೊಂಡು, ಮುಂಬರುವ ಕಷ್ಟಸುಖಗಳನ್ನು ಗಣನೆಗೆ ತಾರದೆ ಬದುಕು ಸಾಗಿಸಿಕೊಂಡು ಹೊರಟಿದ್ದಳು.

ಒಂದು ದಿನ ಅವಳು ನಮ್ಮ ಮನೆಗೆ ಬಂದಾಗ ತುಂಬಾ ಬಳಲಿದಂತಿದ್ದಳು.

“ಏನು ಮಾಂಸಿ! ಸದಾ ಕಾಲ ಕೆಲಸ ಕೆಲಸ. ಕೊನೆಗೆ ಎಲ್ಲಿಯವರೆಗೆ ಎರಡನೆಯವರ ದುಃಖ ಹಂಚಿಕೊಳ್ಳುವುದರಲ್ಲಿ ರುತ್ತಿ? ಸ್ವಲ್ಪ ನಿನ್ನ ಆರೋಗ್ಯದ ಕಡೆಗೂ

ಲಕ್ಷ್ಯಕೊಡು. ಈಗ ನಿನ್ನ ವಯಸ್ಸು ದಾಟಿರಿಯು ನೂಕುನುಗ್ಗಲಿನಲ್ಲಿ ಏಟು ತಿನ್ನುವುದಲ್ಲ. ವಿರಾಮದಿಂದ ಮನೆಯಲ್ಲಿ ಕುಳಿತು ಊಟ ಮಾಡುವುದಿದೆ” ಎಂದು ಅಮ್ಮಾ ಬಹಳ ಗಂಭೀರವಾಗಿಯೇ ಹೇಳಿದರು.

“ನಾನು ಜೀವನದ ಕಷ್ಟಕಾರ್ಪಣ್ಯಗಳಲ್ಲೇ ಬೆಳೆದು ದೊಡ್ಡವಳಾಗಿದ್ದೇನೆ, ಅಮ್ಮಾ! ದುಃಖ, ಕಷ್ಟ, ಶೋಕ ಇವುಗಳೆಲ್ಲ ಏನು ಎಂಬುದನ್ನು ಅನುಭವಿಸಿಕೊಂಡಿದ್ದೇನೆ. ಅದಕ್ಕೋಸ್ಕರ ಬೇರೆಯವರ ದುಃಖ ನನ್ನಿಂದ ನೋಡುವುದು ಆಗುವುದಿಲ್ಲ, ಏನು ಮಾಡಲಿ? ಅವರಿಗೆ ಸಹಾಯ ಮಾಡಿದರೇ ನನ್ನ ಮನಸ್ಸಿಗೆ ಸಮಾಧಾನ, ತೃಪ್ತಿ ಸಿಕ್ಕುತ್ತದೆ” ಎಂದು ಅವಳು ಬಹಳ ದುಃಖಭರಿತ ಧ್ವನಿಯಲ್ಲಿ ಉಸುರಿದಳು.

“ಆದರೂ ಮಾಂಸಿ! ನಾಳೆಗೆ ಜಡ್ಡಾಗಿ ಮಲಗಿದೆಯೆಂದರೆ ಬಹಳ ಕಷ್ಟ” ಎಂದು ಅದೇ ಗಂಭೀರ ಸ್ವರದಲ್ಲಿ ನಮ್ಮ ಅಮ್ಮ ಹೇಳಿದರು,

“ನನ್ನದು ಕಲ್ಲುಹೃದಯ. ನನ್ನ ಜೀವಕ್ಕೆ ಏನೂ ಆಗುವುದಿಲ್ಲ, ಯಾಕೆ ನೀಲೂಬೇಬಿ?” ಎಂದು ನನ್ನತ್ತ ನೋಡಿ ಮುಗುಳು ನಗುವಳು. ನಾನು ನಿರುತ್ತರಳಾಗುವೆ.

ಕಾಲಕಳೆದಂತೆಲ್ಲ ರಜ್ಜೂ ಮಾಂಸಿಯೊಡನೆ ನಮ್ಮ ಸಂಬಂಧ ಇನ್ನೂ ಗಾಢವಾಗುತ್ತ ನಡೆಯಿತು.

ಇವತ್ತಿಗೂ ನನಗೆ ಆ ದಿವಸ ತುಂಬಾ ಚೆನ್ನಾಗಿ ನೆನಪಿನಲ್ಲಿದೆ. ಆದು ಪವಿತ್ರ ರಂಜಾನ್ ತಿಂಗಳು. ಸೂರ್ಯ ಅಸ್ತಮಿಸುವುದರಲ್ಲಿದ್ದ. ಸಂಜೆಯ ನಮಾಜಿನ ಸಮಯ ಸನ್ನಿಹಿತವಾಗಿತ್ತು. ನಮ್ಮ ತಾಯಿ ರಜ್ಜೂ ಮಾಂಸಿಗೆ ಊಟ ಕೊಟ್ಟು ಬರಲು ಹೇಳಿದ್ದರು. ಅವಳ ಮನೆಗೆ ಹೋಗಿದ್ದೆ. ಬಾಗಿಲು ಮುಚ್ಚಿತ್ತು.

“ರಜ್ಜೂ ಮಾಂಸಿ!.... ರಜ್ಜೂ ಮಾಂಸಿ!! ....” ಎಂದು ಎರಡುಮೂರು ಸಲ ಕೂಗಿದೆ. ಉತ್ತರ ಬರಲಿಲ್ಲ. ಸ್ವಲ್ಪ ಬಾಗಿಲು ತಳ್ಳಿದೆ. ಅದು ತೆರೆದೇ ಇತ್ತು. ಒಳಗೆ ಬಾಗಿ ನೋಡಿದೆ. ಮಾಂಸಿ ನಮಾಜು ಮಾಡುತ್ತಿದ್ದಳು. ಸಿಜ್ದಾ ಸ್ಥಿತಿಯಲ್ಲಿದ್ದಳು. ಅಂದರೆ ಕೈಗಳೂ ಹಾಗೂ ಮೊಣಕಾಲುಗಳನ್ನು ಊರಿ, ಮಸ್ತಕವನ್ನು ಭೂಮಿಗೆ ಹಚ್ಚಿ ಅನನ್ಯ ಭಕ್ತಿಯಿಂದ ಭಗವಂತನನ್ನು ಧ್ಯಾನಿಸುತ್ತಿದ್ದಳು. ನಾನು ಹತ್ತಿರವೇ ಇದ್ದ ಅವಳ ಹೊರಸಿನ ಮೇಲೆ ಕುಳಿತೆ. ಸಿಜ್ದಾದಿಂದ ಅವಳು ಹಣೆ ಮೇಲಕ್ಕೆ ಎತ್ತುವ ನಿರೀಕ್ಷೆಯಲ್ಲಿದ್ದೆ. ಎರಡು ಮೂರು ಕ್ಷಣಗಳು ಕಳೆದವು. ಅವಳು ಸಿಜ್ದಾದಿಂದ ಹಣೆ ಮೇಲೆತ್ತಲೇ ಇಲ್ಲ. ಅವಳು ಮೇಲೇಳಲೂ ಇಲ್ಲ. ನನಗೆ ಆಶ್ಚರ್ಯವಾಯಿತು. ಅವಳ ಭುಜವನ್ನು ಹಿಡಿದು ಸ್ವಲ್ಪ ಅಲ್ಲಾಡಿಸಿದೆ. ಕೂಡಲೇ ರಜ್ಜೂ ಮಾಂಸಿಯ ನಿರ್ಜೀವ ಶರೀರ ಒಂದು ಕಡೆಗೆ ಉರುಳಿತು. ಇದನ್ನು ಕಂಡು ನಾನು ಚೀರಿಕೊಂಡೆ. ನನಗೇನು ಗೊತ್ತು! ಅವಳು ದೇವರಿಗೆ ಸಲ್ಲಿಸುತ್ತಿರುವ ಕೊನೆಯ ನಮಾಜು ಅದು ಎಂದು!!


ಅವಳ ಕೊನೆಯ ದರ್ಶನಕ್ಕಾಗಿ ಇಡಿ ಓಣಿಯ ಜನರೆಲ್ಲ ಆ ಚಿಕ್ಕ ಕುಟೀರದಲ್ಲಿ ತುಂಬಿ ತುಳುಕುತ್ತಿದ್ದರು. ಪುರುಷರು, ಸ್ತ್ರೀಯರು, ಮಕ್ಕಳು ಎಲ್ಲರೂ ದುಃಖಿತರಾಗಿ ಅವಳ ಪಾರ್ಥಿವ ಶರೀರದ ಸುತ್ತ ನಿಂತಿದ್ದರು. ಇಡೀ ವಾತಾವರಣ ಶೋಕತಪ್ತವಾಗಿತ್ತು. ಪ್ರತಿಯೊಬ್ಬರ ಕಣ್ಣು

ಗಳಲ್ಲೂ ಅಶ್ರುಬಿಂದುಗಳು. ಎಲ್ಲರ ಹೃದಯಗಳೂ ಭಾರದಿಂದ ತುಂಬಿದ್ದವು.

ರಜ್ಜೂಮಾಂಸಿಯ ಮುಖದ ಮೇಲೆ ನಿಶ್ಚಲ ಶಾಂತಿ ನೆಲೆಸಿತ್ತು. ಅವಳು ತೀರಿಕೊಂಡಿಲ್ಲ, ಗಾಢನಿದ್ರೆಯಲ್ಲಿದ್ದಾಳೆಂದು ಅನಿಸುತ್ತಿತ್ತು.

ಅವಳು ಗತಿಸಿ ಹೋಗಿ ಅದೆಷ್ಟೋ ಕಾಲವಾಗಿದೆ. ಆದರೆ ಈಗಲೂ ಜನರ ಹೃದಯದಲ್ಲಿ ರಜ್ಜೂಮಾಂಸಿಯ ಬಗ್ಗೆ ಹಿಂದಿದ್ದ ಅದೇ ಪ್ರೇಮ, ಅದೇ ಸ್ಥಾನ, ಅದೇ ಗೌರವ ಇನ್ನೂ ಹಾಗೆಯೇ ಉಳಿದಿದೆ.

ಅವಳೊಡನೆ ನಮ್ಮ ರಕ್ತ ಸಂಬಂಧವೇನೂ ಇರಲಿಲ್ಲ. ಆದರೆ ಬೆಸೆದ ಹೃದಯ ಸಂಬಂಧ, ಎಂದೆಂದಿಗೂ ಅಳಿಯದಂತೆ ಶಾಶ್ವತವಾಗಿ ನಿಂತಿದೆ.



ನಿಮ್ಮ ಮರಣಾನಂತರ ನಿಮ್ಮ ಸಂಸ್ಥೆಯ ಗತಿ ಏನಾಗಬಹುದು? ಎಂದು ಮದರ್ ಅವರನ್ನು ಪ್ರಶ್ನಿಸಿದವರಿಗೆ 'ಮೊದಲು ನಾನು ಸಾಯಲಿ. ಅನಂತರ ನೀವು ನೋಡುವಿರಂತೆ' ಎಂದು ಮದರ್ ಸಹಜವಾಗಿಯೇ ಹೇಳುತ್ತಿದ್ದರು.

ಮೊನ್ನೆ ನಾನು ಕನಸಿನಲ್ಲಿ ಸ್ವರ್ಗದ ದ್ವಾರಕ್ಕೆ ತಲುಪಿದ್ದೆ, ಹಿಂದಿರುಗಿಹೋಗು ಭೂಮಿಗೆ, ಇಲ್ಲಿ ಕೊಳೆಗೇರಿಗಳು ಯಾವುವೂ ಇಲ್ಲ ಎಂದು ದ್ವಾರಪಾಲಕ ನನಗೆ ಗದರಿಸಿದ.

—ಮದರ್ ತೆರೆಸಾ

ಶಿಕ್ಷಣ ವಿಸ್ತರಣೆಯ ಹೊಸ ನೆಲೆಗಳು

ಡಾ|| ತಾಳ್ತಜೆ ವಸಂತಕುಮಾರ್
ಪ್ರಾಧ್ಯಾಪಕರು ಹಾಗೂ ಕನ್ನಡ ವಿಭಾಗದ
ಮುಖ್ಯಸ್ಥರು, ಮುಂಬಯಿ ವಿಶ್ವವಿದ್ಯಾನಿಲಯ
ವಿದ್ಯಾನಗರಿ, ಮುಂಬಯಿ-೪೦೦ ೦೯೮

ನಮ್ಮ ಸಂಸ್ಕೃತಿಯು ವಿದ್ಯಾವಿಹೀನರಾದವರನ್ನು ಪಶುಗಳಿಗೆ ಸಮಾನವಾಗಿ ಪರಿಗಣಿಸುತ್ತದೆ. ವಿದ್ಯೆಯು ಲಭ್ಯವಾಗುವ ಮಾಧ್ಯಮಗಳಲ್ಲಿ ಶಿಕ್ಷಣವು ಒಂದಾಗಿದೆ. "ಮೂಲಭೂತ ಪ್ರವರ್ತನೆಗಳಲ್ಲಿ ಆಗುವ ಬದಲಾವಣೆ, ಸಾಮರ್ಥ್ಯಗಳ ಪರಿಷ್ಕರಣೆ ಮತ್ತು ಜ್ಞಾನ ಸಂಪಾದನೆ"ಗಳು ಯಾವುದೇ ಶಿಕ್ಷಣದ ಪ್ರಮುಖ ಉದ್ದೇಶಗಳಾಗಿವೆ. ಈ ಶಿಕ್ಷಣದ ವಿಧಾನಗಳಲ್ಲಿ ಕ್ರಮಾಗತ (ಫಾರ್ಮಲ್), ಮುಕ್ತ (ಇನ್‌ಫಾರ್ಮಲ್) ಮತ್ತು ಕ್ರಮಾಗತವಲ್ಲದ (ನಾನ್-ಫಾರ್ಮಲ್) ಶಿಕ್ಷಣ ಪದ್ಧತಿಗಳು ಮುಖ್ಯವಾಗಿವೆ.

ಶಾಲೆ – ಕಾಲೇಜು – ವಿಶ್ವವಿದ್ಯಾನಿಲಯಗಳು ಕ್ರಮಾಗತ ಶಿಕ್ಷಣ ಪದ್ಧತಿಯನ್ನು ಅನುಸರಿಸುತ್ತವೆ. ಕ್ರಮಾಗತವಲ್ಲದ ವಿದ್ಯಾಭ್ಯಾಸದ ಸಂದರ್ಭದಲ್ಲಿ, ನಾವು ಅನೈಚ್ಛಿಕವಾಗಿ, ಅಪ್ರಯತ್ನಪೂರ್ವಕವಾಗಿ ಎಷ್ಟೋ ವಿಷಯಗಳನ್ನು ಕಲಿಯುತ್ತಿರುತ್ತೇವೆ, ಕಲಿಸುತ್ತಿರುತ್ತೇವೆ, ನಮ್ಮ ತಿಳಿವಳಿಕೆಯನ್ನು ಪರಿಷ್ಕರಿಸಿಕೊಳ್ಳುತ್ತಿರುತ್ತೇವೆ. ಇದನ್ನು ಪಾರಿಭಾಷಿಕವಾಗಿ 'ಸಾಂದರ್ಭಿಕ ಶಿಕ್ಷಣ' (ಇನ್ಸಿಡೆಂಟಲ್ ಎಜುಕೇಷನ್) ಎನ್ನಬಹುದು. ಇಲ್ಲಿ ಮಾಹಿತಿಗಳು, ಪರಿಜ್ಞಾನ, ಸಾಮರ್ಥ್ಯ, ಕೌಶಲ್ಯ ಹಾಗೂ ಮೌಲ್ಯಗಳು ಸಂವಹನಗೊಳ್ಳುತ್ತವೆ. ಇವೆರಡಲ್ಲದೆ, ನಿರ್ದಿಷ್ಟ ಉದ್ದೇಶದಿಂದ, ಒಂದೇ ಮನೋವೃತ್ತಿಯ ಜನಸಮುದಾಯವು ತೊಡಗಿಕೊಳ್ಳುವ ವಿದ್ಯಾಭ್ಯಾಸ ಪದ್ಧತಿಯನ್ನು "ಕ್ರಮಾಗತವಲ್ಲದ ಶಿಕ್ಷಣ ಪದ್ಧತಿ" ಎನ್ನುತ್ತಾರೆ. ಇದು ವಿಶೇಷತಃ ಮೂಲಭೂತ ತಿಳಿವಳಿಕೆ, ಎಚ್ಚರ (ಅವೇರ್‌ನೆಸ್) ಮತ್ತು ವೃತ್ತಿಪರ ಶಿಕ್ಷಣಗಳನ್ನು ಲಕ್ಷ್ಯದಲ್ಲಿ ಇರಿಸಿಕೊಳ್ಳುತ್ತದೆ.

ಈ ಮೂರು ಶಿಕ್ಷಣ ಪದ್ಧತಿಗಳ ಸ್ವರೂಪವನ್ನು ನಿರ್ಧರಿಸುವ ಮುಖ್ಯ ಅಂಶಗಳು ಹೀಗಿವೆ:

೧. ಶಿಕ್ಷಣ ವೆಚ್ಚ : ಶಿಕ್ಷಣ ಶುಲ್ಕ, ಪರೀಕ್ಷಾಶುಲ್ಕ, ಗ್ರಂಥಾಲಯ
: ಶುಲ್ಕ, ಪ್ರಯೋಗಾಲಯದ ಶುಲ್ಕ ಇತ್ಯಾದಿಗಳು ನಿಗದಿತ ಅಥವಾ ಅನಿಗದಿತವಾಗಿರುತ್ತವೆ. ಸರಕಾರದ ಅನುದಾನದ ಪ್ರಮಾಣ.

೨. ಶಿಕ್ಷಣ ಪದ್ಧತಿ—ಸಂರಚನೆ : ಪ್ರಾಥಮಿಕ, ಮಾಧ್ಯಮಿಕ, ಉಚ್ಚ ಶಿಕ್ಷಣ ಶ್ರೇಣಿಗಳು ಒಳ ವಿಭಾಗಗಳು. ವಿಷಯ ವಿಂಗಡಣಾಕ್ರಮಗಳು.

೩. ಶಿಕ್ಷಣ ವಿಧಾನ : ಬೋಧನೆ, ಕ್ಷೇತ್ರಕಾರ್ಯ, ಸ್ವ-ಕಲಿಕೆ, ಅಭ್ಯಾಸ ಯೋಜನೆ.

೪. ಉದ್ಯಮದೊಂದಿಗಿನ ಸಂಬಂಧ : ನಿರ್ದಿಷ್ಟ ಪದವಿಯೊಂದನ್ನು ಉದ್ಯೋಗದೊಂದಿಗೆ ಜೋಡಿಸುವ ಪದ್ಧತಿ.

ಉದಾ : ಕಾಲೇಜು ಅಧ್ಯಾಪಕರಿಗೆ ಅವರು ಕಲಿಸುವ ವಿಷಯದಲ್ಲಿ ಸ್ನಾತಕೋತ್ತರ ಪದವಿ.

೫. ಮೌಲ್ಯಮಾಪನ : ಶ್ರೇಣಿ ನಿರ್ಧಾರ. ಉಪಾಧಿಗಳ ಪ್ರಾಪ್ತಿ.

ಸ್ಥೂಲವಾಗಿ ಹೇಳುವುದಾದರೆ, ಕ್ರಮಾಗತವಲ್ಲದ ಶಿಕ್ಷಣ ಪದ್ಧತಿಯಲ್ಲಿ ಈ ಎಲ್ಲಾ ಅಂಶಗಳೂ ಗೌಣವಾಗಿರುತ್ತವೆ. ಅದು ಶಿಕ್ಷಣವನ್ನು ಅದರ ಪ್ರಯೋಜನಿಕ ನೆಲೆಯಲ್ಲಿ ಪರಿಗಣಿಸುತ್ತದೆ. ಅಂದರೆ, ಅದು ಹೆಚ್ಚು ಅಂತರ್ ಶಿಸ್ತೀಯ ಮತ್ತು ಅಂತರ್ ಶಾಸ್ತ್ರೀಯ ಮಾದರಿಗಳನ್ನು ಅವಲಂಬಿಸುತ್ತದೆ. ಅದು ನಿರ್ದಿಷ್ಟ ಪಠ್ಯಕ್ರಮವನ್ನು ಅನುಸರಿಸುತ್ತದಾದರೂ ಅಲ್ಲಿ ನಮನಶೀಲತೆಗೆ ಹೆಚ್ಚು ಆದ್ಯತೆಯಿರುತ್ತದೆ. ಅಂದರೆ ಸ್ಪರ್ಧಾತ್ಮಕ ಮನೋಭಾವದ ಬದಲಿಗೆ ಜ್ಞಾನಸಂಪಾದನೆಯ ಉದ್ದೇಶವಿರುವುದರಿಂದ ಅಧ್ಯಯನದ ವಾತಾವರಣವು ಹೆಚ್ಚು ಮುಕ್ತವಾಗಿರುತ್ತದೆ.

ಆಪೇರ್ಯವಾದ ಹಿಂದೂ ಶಿಕ್ಷಣ ಪರಂಪರೆಯಾಗಲಿ, ಬೌದ್ಧ ಶಿಕ್ಷಣ ಪದ್ಧತಿಯಾಗಲಿ ಕ್ರಮಾಗತವಲ್ಲದ ಈ ಬಗೆಯ ಶಿಕ್ಷಣ ಪದ್ಧತಿಗೆ ಒತ್ತುಕೊಟ್ಟವುಗಳೇ ಆಗಿವೆ.

ಆದುದರಿಂದ, ಇದನ್ನು ಒಂದು, "ಕ್ರಮಾಗತ ಶಿಕ್ಷಣ ಕ್ರಮದಿಂದ ಭಿನ್ನವಾದ, ಆದರೆ ವ್ಯವಸ್ಥಿತವಾದ, ಶಿಸ್ತುಬದ್ಧವಾದ ಶಿಕ್ಷಣ ಪದ್ಧತಿ" ಎಂದೂ, ಈ ಪದ್ಧತಿಯು ವಿದ್ಯಾರ್ಥಿಗಳನ್ನು "ಸಮಾನ ಆಸಕ್ತಿಯುಳ್ಳ, ನಿರ್ದಿಷ್ಟ ಶೈಕ್ಷಣಿಕ ಉದ್ದೇಶಗಳಿರುವ ಸಮಾಜದ ಘಟಕ"ಗಳೆಂದೂ ವಿವರಿಸಬಹುದಾಗಿದೆ. ಅದು ವಿಶೇಷತಃ ಕಾಲ-ದೇಶಗಳ ಮಿತಿಗೆ ಒಳಪಡುವುದಿಲ್ಲ. ಆದುದರಿಂದ, ಯುನೆಸ್ಕೋವು ಇದನ್ನು ಒಂದೇ ವಾಕ್ಯದಲ್ಲಿ "ವ್ಯಕ್ತಿಯ ಆತ್ಮವಿಕಸನಕ್ಕೆ ಸಹಕಾರಿಯಾಗಬಲ್ಲ ಯಾವುದೇ ಜ್ಞಾನಪ್ರಕಾರ"ವೆಂದು ಕರೆದುದು ಸಮಂಜಸವಾಗಿಯೇ ಇದೆ.

ಇಂಥ ಕ್ರಮಾಗತವಲ್ಲದ ಶಿಕ್ಷಣವನ್ನು ನೀಡುವ ಸಂಸ್ಥೆಗಳಲ್ಲಿ ಸ್ವಯಂ ಸೇವಾ ಸಂಸ್ಥೆಗಳು, ಸರಕಾರೀ ಸಂಸ್ಥೆಗಳು ಮತ್ತು ಖಾಸಗೀ ಸಂಸ್ಥೆಗಳು ಎಂಬುದಾಗಿ ವಿಭಾಗಿಸಬಹುದಾಗಿದೆ.

೧. ಸೇವಾಸಂಘಗಳ ವರ್ಗದಲ್ಲಿ ಯುವಕ ಸಂಘಗಳು. ಮಹಿಳಾ ಸಂಘಟನೆಗಳು, ಪ್ರಗತಿಪರವಾದ ನಿರ್ದಿಷ್ಟ ಉದ್ದೇಶಗಳನ್ನಿರಿಸಿಕೊಂಡ ಸಂಘ–ಸಮಿತಿಗಳು (ಉದಾ: ವೃಕ್ಷ ಸಂರಕ್ಷಕ ಸಂಘ), ಸಾಮಾಜಿಕ–ಸಾಂಸ್ಕೃತಿಕ ಸಂಘಟನೆಗಳು (ಉದಾ: ನೀನಾಸಂ.) ಬರುತ್ತವೆ. ಸಾಂಸ್ಕೃತಿಕ–ಶಾರೀರಿಕ ತರಬೇತಿಗಳು, ಪುನರ್ನಿವೇಶನದಂಥ ವಿಧಾಯಕ ಕಾರ್ಯಗಳು. ಸಾರ್ವಜನಿಕ ಹಿತಾಸಕ್ತಿಯ ಕಾರ್ಯಗಳಲ್ಲೂ ಇವು ಆನುಷಂಗಿಕವಾಗಿ ತೊಡಗಿಕೊಳ್ಳುತ್ತವೆ.

೨. ಸರಕಾರೀ ಇಲಾಖೆಗಳಾದ ಕ್ಷೇಮಾಭಿವೃದ್ಧಿ, ಆರೋಗ್ಯ, ಶಿಕ್ಷಣ, ಕೃಷಿ, ವಾರ್ತೆ ಮತ್ತು ಸಂಸ್ಕೃತಿ ಇಲಾಖೆಗಳು ನಿರ್ದಿಷ್ಟ ಕೌಶಲ್ಯಗಳಲ್ಲಿ ತರಬೇತಿ ನೀಡುವ ವೃತ್ತಿಪರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತವೆ. ಬಿಡುವಿನ ವೇಳೆಯನ್ನು ಉತ್ಪಾದಕ ಘಟಕವಾಗಿ ಪರಿವರ್ತಿಸುವ ಇಂಥ ಯೋಜನೆಗಳಿಗೆ ಸಮಕಾಲೀನ ಮಹತ್ವವಿದೆ. ಉದಾಹರಣೆಗೆ ಮೀನುಗಾರಿಕೆ, ಜೇನು ಸಾಕಣೆ, ಕೃಷಿ ಮುಂತಾದ ಉದ್ಯೋಗಸ್ಥರಿಗೆ ತಾಂತ್ರಿಕ ಪರಿಣತಿಯ ಕಲ್ಪನೆ ಮುಂತಾದ ವಿಧಾಯಕ ಉದ್ದೇಶಗಳನ್ನು ಇವು ಹೊಂದಿವೆ. ವಿಶ್ವವಿದ್ಯಾನಿಲಯಗಳ ವಿಭಾಗಗಳು, ವಿದ್ಯಾಸಂಸ್ಥೆಗಳು ಕೂಡಾ ಈ ನಿಟ್ಟಿನಲ್ಲಿ ಕಾರ್ಯಶೀಲವಾಗಿವೆ. ಉದಾಹರಣೆಗೆ, ಬರೋಡೆಯ ಎಂ. ಎಸ್. ವಿಶ್ವವಿದ್ಯಾಲಯದ ಗೃಹವಿಜ್ಞಾನ ವಿಭಾಗವು 'ಪ್ರಗತಿ' ಎನ್ನುವ ಸಂಘಟನೆಯ ಸಹಾಯದಿಂದ ಕಾರ್ಯಪ್ರವೃತ್ತವಾಗಿದೆ.

ನಿಯಮಿತವಾಗಿ ಆಸ್ಪತ್ರೆಗಳಿಗೆ, ಅನಾಥಾಲಯಗಳಿಗೆ, ವೃದ್ಧಾಶ್ರಮಗಳಿಗೆ ಭೇಟಿ ನೀಡಿ ಭಾವನಾತ್ಮಕವಾದ ಸುರಕ್ಷೆಯನ್ನು ನೀಡುವ ಕೆಲಸವನ್ನೂ ಇವು ಮಾಡುತ್ತವೆ. ಸದೃಢವಾದ ಸಮಾಜವನ್ನು ಕಟ್ಟುವಲ್ಲಿ ಇಂಥ ಯೋಗದಾನಗಳು ತೀರಾ ಅಗತ್ಯವಾದವುಗಳೇ ಆಗಿವೆ.

೩. ಖಾಸಗಿ ಸಂಸ್ಥೆಗಳು: ಖಾಸಗೀ ಸಂಸ್ಥೆಗಳ ವಲಯದಲ್ಲಿ, ಸಮೂಹ ಮಾಧ್ಯಮಗಳಲ್ಲಿ ಸಕ್ರಿಯವಾಗಿ ತೊಡಗಿಕೊಳ್ಳುವ ಸಂಘಗಳು, ಕಾರ್ಖಾನೆಗಳು, ಕೈಗಾರಿಕಾ ಕೇಂದ್ರಗಳು, ಉದ್ಯಮ ಸಂಸ್ಥೆಗಳು ಔದ್ಯೋಗಿಕ ಸಂಘಟನೆಗಳು ಇತ್ಯಾದಿಗಳು ಬರುತ್ತವೆ. ನಿರ್ದಿಷ್ಟ ಕ್ಷೇತ್ರದಲ್ಲಿ ಅಗತ್ಯವಿರುವ ಸುಧಾರಣೆಗಳು, ಸೇವಾ ವಿಸ್ತರಣೆಗಳು, ಸೇವಾವಧಿಯ ತರಬೇತಿ ಕಾರ್ಯಕ್ರಮಗಳು, ಸದಸ್ಯರ ಕ್ಷೇಮಾಭಿವೃದ್ಧಿ ಕಾರ್ಯಕ್ರಮಗಳತ್ತ ಇವುಗಳು ಲಕ್ಷ್ಯವನ್ನು ಹರಿಸುತ್ತವೆ.

ಇಂಥ ಕ್ರಮಾಗತವಲ್ಲದ ಶಿಕ್ಷಣ ವೆಚ್ಚವನ್ನು ಭರಿಸುವ ಆದಾಯದ ವಿವಿಧ ಮೂಲಗಳಲ್ಲಿ ಮುಖ್ಯವಾಗಿ ಅನುದಾನಗಳು,

ಸದಸ್ಯತ್ವ ಶುಲ್ಕ, ಶಿಕ್ಷಣ ಶುಲ್ಕ ಮತ್ತು ದೇಣಿಗೆಗಳನ್ನು ಹೆಸರಿಸಬಹುದಾಗಿದೆ.

ಈ ಶಿಕ್ಷಣ ಕ್ರಮವು ವಯಸ್ಕರು, ಬಾಲ ಕಾರ್ಮಿಕರು, ಶಾಲೆಯನ್ನು ಬಿಟ್ಟ ಅಥವಾ ಶಾಲೆಗೆ ಹೋಗದೇ ಇದ್ದ ಮಕ್ಕಳು, ಅಂಗವಿಕಲರು, ಬೇಕಾದಷ್ಟು ಬಿಡುವಿನ ವೇಳೆಯುಳ್ಳವರು, ಗೃಹಿಣಿಯರು ಮುಂತಾದವರ ದೃಷ್ಟಿಯಿಂದ ಹೆಚ್ಚು ಉಪಯುಕ್ತವಾಗಿದೆ.

ಈ ಹಿನ್ನೆಲೆಯಲ್ಲಿ, ಉಚ್ಚಶಿಕ್ಷಣ ಸಂಸ್ಥೆಗಳಾದ ವಿಶ್ವವಿದ್ಯಾನಿಲಯಗಳ ವಿಭಾಗಗಳು,ಕಾಲೇಜುಗಳು,ಸಮಾಜವಿಜ್ಞಾನದಂಥ ನಿರ್ದಿಷ್ಟ ಜ್ಞಾನಶಾಖೆಯ ಅಧ್ಯಯನ–ಅಧ್ಯಾಪನಕ್ಕೆ ಮೀಸಲಾದ ಸಂಸ್ಥೆಗಳು ಹೇಗೆ ಕಾರ್ಯಪ್ರವೃತ್ತವಾಗಬಹುದೆನ್ನುವುದನ್ನು ಯೋಚಿಸಬಹುದಾಗಿದೆ. ಈ ದೃಷ್ಟಿಯಿಂದ, ಇಂಥ ಘಟಕಗಳು ಬರಿಯ ಬೌದ್ಧಿಕ ಕ್ರಿಯೆಯ ದಂತಗೋಪುರಗಳಲ್ಲಿ ಉಳಿಯದೆ, ಹೆಚ್ಚು ಸಮಾಜ ಮುಖಿಗಳಾಗಬಹುದಾದ ಸಾಧ್ಯತೆಗಳನ್ನೂ ಪರಿಶೀಲಿಸಬಹುದಾಗಿದೆ. ಇನ್ನೂ ನಿಖರವಾಗಿ ಹೇಳುವುದಾದರೆ, ಗ್ರಾಮೀಣ ಪರಿಸರದಲ್ಲಿ ನಡೆಯುವ ಇಂಥ ಕಾರ್ಯಕ್ರಮಗಳಿಗೆ ಹೆಚ್ಚಿನ ಮಹತ್ವವಿದೆ.

ಈ ಹಂತದಲ್ಲಿ ಕೆಲವು ಪೂರ್ವಭಾವಿಯಾದ ತಯಾರಿಗಳನ್ನು ಮಾಡಿಕೊಳ್ಳಬೇಕಾಗುತ್ತದೆ.

೧. ನಿರ್ದಿಷ್ಟ ಉದ್ದೇಶಗಳ ಸ್ಪಷ್ಟ ಕಲ್ಪನೆ.

೨. ಶಿಕ್ಷಣಾರ್ಥಿಗಳ ಆರ್ಥಿಕ, ಸಾಂಸ್ಕೃತಿಕ, ಸಾಮಾಜಿಕ ಹಾಗೂ ಶೈಕ್ಷಣಿಕ ಸ್ಥಿತಿ ಹಾಗೂ ನಿರೀಕ್ಷೆಗಳ ತುಲನೆ.

೩. ಶಿಕ್ಷಕರ – ಶಿಕ್ಷಣ ವಿಧಾನದ – ಪಠ್ಯಕ್ರಮದ ನಿಷ್ಕರ್ಷೆ.

೪. ಶೈಕ್ಷಣಿಕ ಅವಧಿ.

೫. ಶಿಕ್ಷಣ ಶುಲ್ಕ, ಪರಿಸರ ಹಾಗೂ ಮೌಲ್ಯ ಮಾಪನಗಳ ನಿರ್ಧಾರ.

೬. ಉಪಾಧಿ ಪ್ರದಾನ. (ಪ್ರಮಾಣ ಪತ್ರ, ಪದವಿ, ಯೋಗ್ಯತಾ ಪತ್ರ ಇತ್ಯಾದಿ).

ಈ ಕ್ರಮಾಗತವಲ್ಲದ ಶಿಕ್ಷಣ ಕ್ರಮವು ಹಲವು ದೃಷ್ಟಿಗಳಿಂದ ಉಪಯುಕ್ತವಾಗಿದೆ. ಅಂದರೆ, ನಿರ್ದಿಷ್ಟ ವಿಷಯವೊಂದರಲ್ಲಿ ಗಂಭೀರ ಆಸಕ್ತಿಯುಳ್ಳವರು ಮಾತ್ರವೇ ಶಿಕ್ಷಣಾರ್ಥಿಗಳಾಗಿ ಬರುವುದರಿಂದ, ಶಿಕ್ಷಣದ ಮಟ್ಟವು ಗಣನೀಯವಾಗಿ ಸುಧಾರಿಸುತ್ತದೆ. ಶಿಕ್ಷಣ ಕ್ರಮವೂ ಹೆಚ್ಚು ಅಗತ್ಯಾನುಸಾರಿಯಾಗಿ ಅರ್ಥಪೂರ್ಣವಾಗುತ್ತದೆ. ಮಾತ್ರವಲ್ಲದೆ ವಿದ್ಯಾರ್ಥಿಗಳ ಸಂಖ್ಯೆ, ಗುಣಮಟ್ಟಗಳೆಲ್ಲವೂ ಆಯೋಜಕರ ಆಯ್ಕೆಯ ವಿಚಾರಗಳಾಗಿರುವುದರಿಂದ ನಿಯಂತ್ರಣ ಸುಲಭ ಸಾಧ್ಯವಾಗುತ್ತದೆ. ಶಿಕ್ಷಣದ ಸಮಯ, ಶುಲ್ಕ ಮುಂತಾದವುಗಳು ಕೂಡಾ ಶಿಕ್ಷಣಾರ್ಥಿಗಳ ಅನುಕೂಲವನ್ನು ಅವಲಂಬಿಸಿರುತ್ತವೆ. ಆದರೆ ಈ ಪದ್ಧತಿಗೆ ಕೆಲವು ಮಿತಿಗಳೂ ಇವೆ. ಮೊದಲನೆಯದಾಗಿ, ಈ ಶಿಕ್ಷಣ ಕ್ರಮವೇ ಐಚ್ಛಿಕ ಮಾದರಿಯದಾಗಿರುವುದರಿಂದ ಶಿಕ್ಷಕರ ಹಾಗೂ ವಿದ್ಯಾರ್ಥಿಗಳ ನೆಲೆಗಳಿಂದ ಆಸಕ್ತಿಯನ್ನು ಹಿಡಿದಿಡುವ ಕಾರ್ಯವು ನಿರಂತರವಾಗಿ ನಡೆಯುತ್ತಿರಬೇಕಾಗುತ್ತದೆ. ಇಲ್ಲಿ ವ್ಯಕ್ತಿಪರವಾದ ತರಬೇತಿಗೆ ಆದ್ಯತೆ

ಯಿರುವುದು ನಿಜವಾದರೂ ಹೀಗೆ ಪಡೆಯುವ ಪ್ರಮಾಣ ಪತ್ರಗಳಿಗೆ ಮಾರುಕಟ್ಟೆಯಲ್ಲಿ ಎಷ್ಟು ಬೆಲೆಯಿದೆಯೆನ್ನುವುದು ಕೂಡಾ ಸಂದೇಹಾಸ್ಪದವಾಗಿಯೇ ಉಳಿಯುತ್ತದೆ. ಈ ಪರಿಸ್ಥಿತಿಯಲ್ಲಿ, ಗ್ರಾಮೀಣ ಪರಿಸರದಲ್ಲಿ ಈ ಶಿಕ್ಷಣ ಕ್ರಮದ ಕೆಲವು ಸಾಧ್ಯತೆಗಳನ್ನು ಪರಿಶೀಲಿಸಬಹುದಾಗಿದೆ.

೧. ತಾಂತ್ರಿಕ ಪರಿಜ್ಞಾನ ಹಾಗೂ ತರಬೇತಿ ಶಿಬಿರಗಳು.

(ಛಾಯಾಗ್ರಹಣ, ಕೃಷಿ ತಂತ್ರಜ್ಞಾನ, ಉರುವಲುಗಳ ಬಳಕೆ, ಆಹಾರ ಪದಾರ್ಥಗಳ ಸಂರಕ್ಷಣೆ, ಹಸ್ತಕೃತಿ ವಿಜ್ಞಾನ ಇತ್ಯಾದಿ).

ಇವುಗಳಿಗೆ ತತ್ವ ಮತ್ತು ಪ್ರಯೋಗ ಈ ಎರಡೂ ಮುಖಗಳಿರುವುದರಿಂದ ವಿಷಯ ತಜ್ಞರಿಂದ ತರಗತಿಗಳೂ ಪ್ರಾತ್ಯಕ್ಷಿಕೆಗಳೂ ಜೊತೆ ಜೊತೆಯಾಗಿಯೇ ನಡೆಯಬೇಕಾಗುತ್ತವೆ. ನಿರ್ದಿಷ್ಟಮಟ್ಟದ ಪೂರ್ವ ಪರಿಜ್ಞಾನ ಶಿಕ್ಷಣಾರ್ಥಿಗಳಿಗೂ ಬೇಕಾಗುತ್ತದೆ.

೨. ಸಾಮಾಜಿಕ ಎಚ್ಚರವನ್ನು ಮೂಡಿಸುವ ಕಮ್ಮಟಗಳು: ಪರಿಸರ ಸಂರಕ್ಷಣೆ, ಏಡ್ಸ್‌ನಂಥ ಮಾರಕ ರೋಗಗಳ ಬಗೆಗಿನ ಸ್ಪಷ್ಟ ಕಲ್ಪನೆ. ನೇತ್ರದಾನ–ರಕ್ತದಾನಗಳಂಥ ಉಪಯುಕ್ತ ಯೋಜನೆಗಳನ್ನು ಸಮಾಜಕ್ಕೆ ಪರಿಚಯಿಸುವ ಕಾರ್ಯವೂ ಸದ್ಯಕಾಲೀನ ಅಗತ್ಯವಾಗಿದೆ. ಈ ವಿಚಾರಗಳ ಬಗೆಗೆ ರೂಢಮೂಲವಾಗಿರುವ ಅಜ್ಞಾನವೂ ತಪ್ಪು ತಿಳಿವಳಿಕೆಗಳೂ ಜನಸಾಮಾನ್ಯರನ್ನು ಹಾದಿ ತಪ್ಪಿಸುತ್ತವೆ. ಉದಾಹರಣೆಗೆ, 'ಪರಿಸರ ಸಂರಕ್ಷಣೆ'ಯ ಬಗೆಗೆ ಅಷ್ಟಿಷ್ಟು ತಿಳಿವಳಿಕೆಯಿರುವವರೂ ಕೂಡಾ ಅದನ್ನು ಅರಣ್ಯ ಸಂಪತ್ತು, ಹೆಚ್ಚೆಂದರೆ ವನ್ಯಜೀವಿ ಸಂಪತ್ತಿನ ಸಂರಕ್ಷಣೆಗೆ ಸೀಮಿತಗೊಳಿಸುತ್ತಾರೆ. ವಾಸ್ತವವಾಗಿ 'ಪರಿಸರ'ಕ್ಕೆ ಭೌತಿಕ, ಸಾಮಾಜಿಕ, ಭಾವನಾತ್ಮಕ, ಆರ್ಥಿಕ ಮುಂತಾದ ಹಲವು ನೆಲೆಗಳಿವೆ. 'ಪರಿಸರ ಸಂರಕ್ಷಣೆ'ಯೆನ್ನುವ ಪರಿಕಲ್ಪನೆಯು ವ್ಯಾಪಕಾರ್ಥದಲ್ಲಿ ಇವೆಲ್ಲವನ್ನೂ ಒಳಗೊಳ್ಳುತ್ತದೆ. ಅಂದರೆ ಕಾಗದದ ತುಣುಕೊಂದನ್ನು ಮುದುರಿ ಕಸದ ಬುಟ್ಟಿಗೆ ಎಸೆಯುವ, ಕಂಡಕಂಡಲ್ಲಿ ಕ್ಯಾಕರಿಸಿ ಉಗಿಯುವ, ಇತರರಿಗೆ ಹಾನಿಯಾಗುವ ಧೂಮಪಾನದಂಥ ಕಾರ್ಯಗಳಲ್ಲಿ ತೊಡಗಿಕೊಳ್ಳುವ ಸಾಮಾನ್ಯ ಕ್ರಿಯೆಗಳೂ ಕೂಡಾ ಪರಿಸರ ನಾಶಕ್ಕೆ ಕಾರಣವೆನ್ನುವ ಅರಿವನ್ನು ಮೂಡಿಸುವ ಕಾರ್ಯಗಳು ನಡೆಯಬೇಕಾಗಿವೆ. ಈ ದೃಷ್ಟಿಯಿಂದ, ಬೀದಿ ನಾಟಕಗಳು, ಸೃಷ್ಟಿಶೀಲ ಕಲೆಗಳು, ಜ್ಞಾನಸತ್ರಗಳು ಕೂಡಾ ಸಹಕಾರಿಗಳಾಗಬಲ್ಲುವು.

೩. ವೃತ್ತಿಪರ ಮಾಹಿತಿ–ಶಿಕ್ಷಣಗಳು: ಇಲ್ಲಿ ಎರಡು ಅಂಶಗಳು ಮುಖ್ಯವಾಗುತ್ತವೆ. ವೃತ್ತಿಪರ ಶಿಕ್ಷಣ ವಿಷಯಗಳ ಬಗೆಗಿನ ತಿಳಿವಳಿಕೆಯನ್ನು ಕೊಡುವುದು, ಇದರ ಒಂದು ಮುಖವಾದರೆ, ಇನ್ನೊಂದು ಮುಖ ಅಂಥ ಶಿಕ್ಷಣಗಳ ನೇರವಾದ ಅವಕಾಶಗಳ ಕಲ್ಪನೆ. ಪತ್ರಿಕೋದ್ಯಮದಂಥ ಸ್ವ-ಉದ್ಯೋಗದ ಮಾದರಿಗಳೂ ಇವುಗಳ ಕಕ್ಷೆಯ ಒಳಗೇ ಬರುತ್ತವೆ.

೪. ರಂಗಕಲೆಗಳ ತರಬೇತಿ ಶಿಬಿರಗಳು, ರಸಗ್ರಹಣ ಶಿಬಿರಗಳು.

೫. ಸಾಂಸ್ಕೃತಿಕಾಂಶಗಳ ಸಂರಕ್ಷಣೆ, (ಉದಾಹರಣೆಗೆ, ಸಿಖ್ಖರು ತಮ್ಮ ಎಳೆಯ ತಲೆಮಾರಿನ ಸದಸ್ಯರಿಗಾಗಿ, ಅವರ ಮುಂಡಾಸನ್ನ ಕ್ರಮಬದ್ಧವಾಗಿ ಕಟ್ಟುವ ವಿಧಾನದ ಬಗ್ಗೆ ಶಿಕ್ಷಣವನ್ನು ಕೊಡುತ್ತಾರೆ–ಮನೆಗಳಲ್ಲಲ್ಲ–ಸಾಮೂಹಿಕ ತರಬೇತಿ ಕೇಂದ್ರಗಳಲ್ಲಿ!)

೬. ಸಾಹಿತ್ಯಿಕ ತರಬೇತಿ ಕೇಂದ್ರಗಳು: ಸಾಹಿತ್ಯ ವಿಮರ್ಶೆ, ಸಂಶೋಧನ ವಿಧಾನ, ತುಲನಾತ್ಮಕ ಅಧ್ಯಯನಗಳ ಸಾಧ್ಯತೆಗಳತ್ತ ಇವುಗಳು ಲಕ್ಷ್ಯವನ್ನು ವಹಿಸಬಹುದು.

ಈ ಪಟ್ಟಿಯನ್ನು ಎಷ್ಟೋ ಬೆಳೆಸಬಹುದಾಗಿದೆ. ಈ ಅಂಶಗಳನ್ನು ಕೇವಲ ಕೆಲವು ಸಾಧ್ಯತೆಗಳಾಗಿ ಮಾತ್ರ ಇಲ್ಲಿ ಪರಿಚಯಿಸಲಾಗಿದೆ. ನಮ್ಮ ಉಚ್ಚ ಶಿಕ್ಷಣ ಕೇಂದ್ರಗಳು ಈ ದಿಸೆಯಲ್ಲಿ ಗಮನ ಹರಿಸಬೇಕೆಂದು ಸೂಚಿಸುವುದರ ಕಾರಣವೆಂದರೆ, ಅಲ್ಲಿರುವ ಅಧ್ಯಯನದ ಶಿಸ್ತು ಈ ಕ್ರಮಾಗತವಲ್ಲದ ಶಿಕ್ಷಣ ಕ್ಷೇತ್ರವನ್ನೂ ಪ್ರವೇಶಿಸಬೇಕಾದ ಅಗತ್ಯಕ್ಕೆ ಒತ್ತುಕೊಡುವುದು. ಗಾಂಧೀಜಿಯವರೂ ಸೇರಿದಂತೆ ಅನೇಕ ಪಾಶ್ಚಾತ್ಯ-ಪೌರ್ವಾತ್ಯ ಶಿಕ್ಷಣವೇತ್ತರು ಈ ರೀತಿಯ ಶಿಕ್ಷಣ ಕ್ರಮದ ಸಂತುಲಿತ ರೂಪವನ್ನು ಸಮರ್ಥಿಸಿದ್ದಾರೆ, ಸ್ವಾಗತಿಸಿದ್ದಾರೆ. ಈ ದಿಸೆಯಲ್ಲಿ ನಮ್ಮ ಶಿಕ್ಷಣ ಸಂಸ್ಥೆಗಳು ಕಾರ್ಯಪ್ರವೃತ್ತವಾಗುವುದರಿಂದ, ಅವುಗಳು ಬಹು ಮಹತ್ವದ ಸಾಮಾಜಿಕ ಜವಾಬ್ದಾರಿಯೊಂದನ್ನು ನಿರ್ವಹಿಸಿದಂತಾಗುತ್ತದೆ.

ಶಿಕ್ಷಣದ ಗುರಿ

"ಮಕ್ಕಳಲ್ಲೂ ಮನುಷ್ಯರಲ್ಲೂ ಸುಪ್ತವಾಗಿರುವ ದೈಹಿಕ, ಮಾನಸಿಕ ಮತ್ತು ಆಧ್ಯಾತ್ಮಿಕವಾದ ಶ್ರೇಷ್ಠ ಗುಣಗಳನ್ನೆಲ್ಲ ಸಮಗ್ರವಾಗಿ ಪ್ರಕಟಗೊಳ್ಳುವಂತೆ ಮಾಡುವುದೇ ಶಿಕ್ಷಣ. ಅಕ್ಷರಜ್ಞಾನ ಮಾತ್ರವೇ ಅದರ ಗುರಿಯಲ್ಲ. ಪ್ರಾರಂಭವೂ ಅಲ್ಲ. ಅದೊಂದು ಮಾಧ್ಯಮಮಾತ್ರ. ಒಂದು ಉಪಯುಕ್ತ ಕೈಕೆಲಸ ಕಲಿಸುವುದರಿಂದಲೇ ನಾನು ಮಕ್ಕಳ ಶಿಕ್ಷಣವನ್ನು ಪ್ರಾರಂಭಿಸಿಯೇನು....ಅವರು ಕೈಗೊಳ್ಳುವ ಕೆಲಸದ ಪ್ರತಿಯೊಂದು ಹೆಜ್ಜೆ ಏಕೆ ಮತ್ತು ಹೇಗೆ ಎಂದು ವೈಜ್ಞಾನಿಕ ರೀತಿಯಲ್ಲಿ ತಿಳಿಸಬೇಕು....ಶಿಕ್ಷಣದಲ್ಲಿ ಸಾಂಸ್ಕೃತಿಕ ಬೆಳವಣಿಗೆಗೆ ಮಾತ್ರವೇ ನಾನು ಹೆಚ್ಚು ಪ್ರಾಧಾನ್ಯ ನೀಡುತ್ತೇನೆ."

(ಮಹಾತ್ಮರ ಮನೋರಂಗ ಪು. ೩೬೯)

ಅಶಕ್ತಿಯ ಆಗರವಾಗಿಸುವ ಅನೀಮಿಯಾ

ಡಾ|| ಕರವೀರಪ್ರಭು ಕ್ಯಾಲಕೊಂಡ
೨೦೪, ಶಸ್ತ್ರಚಿಕಿತ್ಸಾ ವಿಭಾಗ, ಕೆ.ಎಂ.ಸಿ ಆಸ್ಪತ್ರೆ
ಹುಬ್ಬಳ್ಳಿ-೫೮೦೦೨೨

ರಕ್ತ ಪ್ರಾಣಿ ಪ್ರಪಂಚದ ಜೀವ ಸಲೆಯ ಮೂಲ ಆಧಾರ ಜೀವವಾಹಿನಿಯಾಗಿ ಸರ್ವಾಂತರಯಾಮಿಯಾಗಿ ದೇಹದೆಲ್ಲಡೆ ಇರುವ ಕೆಂಪು ದ್ರವ. ಅದಕ್ಕೆ ಜಾತಿ ಮತ, ದೇಶ ಭಾಷೆ, ಪ್ರಾಂತಗಳ ಸೋಂಕಿಲ್ಲ. ರಕ್ತಕ್ಕೆ ಕೆಂಪು ಬಣ್ಣ ನೀಡಿದ್ದೆ ಕೆಂಪು ರಕ್ತ ಕಣಗಳು. ಪ್ರಾಣವಾಯುವನ್ನು ದೇಹದ ಎಲ್ಲ ಜೀವಕೋಶಗಳಿಗೂ ಹೊತ್ತು ಒಯ್ಯುವ ಮಹತ್ವದ ಹೊಣೆ ಇವುಗಳಿಗಿದೆ. ಒಂದು ಘನ ಮಿಲಿ ಲೀಟರಿನಂತಹ ರಕ್ತದಲ್ಲಿ (ಒಂದು ತೊಟ್ಟಿಗಿಂತ ಕಡಿಮೆ) ಸುಮಾರು ೪ ರಿಂದ ೫ ದಶಲಕ್ಷದಷ್ಟು ಕೆಂಪು ರಕ್ತ ಕಣಗಳಿರುತ್ತವೆ. ಕಣ್ಣಿಗೆ ಕಾಣದ ತಟ್ಟೆ ಆಕಾರದ ಈ ಸೂಕ್ಷ್ಮಕೋಶ ಮಾನವ ದೇಹದ ಉದ್ದಗಲಗಳಲ್ಲಿ ನಿರ್ವಹಿಸುವ ಮಹತ್ತರ ಕಾರ್ಯ ಅಚ್ಚರಿಗೊಳಿಸುವಂತ ಹದ್ದು. ದೇಹದ ಮೂಲೆ ಮೂಲೆಗೂ ತನ್ನ ವ್ಯಾಯಳತೆಗಿಂತ ಕಿರಿದಾದ ರಕ್ತ ನಾಳ ಗಳಲ್ಲೂ ಇವು ತೆವಳುತ್ತ, ಬಳಕುತ್ತ, ಸಾಗಿ ತಮ್ಮ ಕಾರ್ಯನಿರ್ವಹಿಸುತ್ತವೆ. ಇಂಥ ದಕ್ಷತೆ ಕಾರ್ಯತತ್ಪರತೆಯ ಜೊತೆಗಾರರು ಇರುವುದರಿಂದಲೇ ರಕ್ತಕ್ಕೆ ಬಹಳ ಪ್ರಾಮುಖ್ಯತೆ. ಗಾತ್ರದಲ್ಲಿ ಪುಟ್ಟವಾಗಿದ್ದರೂ ಕೆಂಪು ರಕ್ತ ಕಣಗಳು ಸಂಖ್ಯೆಯಲ್ಲಿ ಏನೂ ಕಡಿಮೆ ಇಲ್ಲ. ಒಬ್ಬ ಪ್ರೌಢನ ದೇಹದ ಎಲ್ಲಾ ಕೆಂಪು ರಕ್ತ ಕಣಗಳನ್ನು ಒಂದರ ಬದಿಗೊಂದರಂತೆ ಹರವಿದರೆ ಇಡೀ ಒಂದು ಟೆನಿಸ್ ಮೈದಾನವನ್ನೆ ವ್ಯಾಪಿಸ ಬಹುದು. ಆಮ್ಲಜನಕವನ್ನು ಹಿಡಿದಿಟ್ಟು ಕೊಳ್ಳುವ ಹಿಮೋಗ್ಲೋಬಿನ್ ಇರುವುದು ಕೆಂಪು ರಕ್ತಕಣದಲ್ಲೆ. ಈ ಕಣಕ್ಕೆ ಕೆಂಪು ಬಣ್ಣ ಕೊಟ್ಟದ್ದು, ಕೆಂಪು ರಕ್ತ ಕಣ ದೊಳಗಿರುವ ಹಿಮೋಗ್ಲೋಬಿನ್ ಕಡಿಮೆ ಆದರೆ ವ್ಯಕ್ತಿ ರಕ್ತಹೀನತೆ ಅಥವಾ ಅನೀಮಿಯಾದಿಂದ ನರಳಬಹುದು, ಶಾಸ್ತ್ರೋಕ್ತವಾಗಿ ರಕ್ತಹೀನತೆ ಎಂದರೆ ದೇಹದಲ್ಲಿಯ ಹಿಮೋಗ್ಲೋಬಿನ್ ಪ್ರಮಾಣದಲ್ಲಿ ಉಂಟಾಗುವ ಇಳಿತ. ಇದಕ್ಕೆ ಇಂತಹದೇ ಕಾರಣವೆಂದು ನಿಗದಿ ಇಲ್ಲ. ಕೆಂಪು ರಕ್ತ ಕಣಗಳು ಅಮರವಲ್ಲ ಇವುಗಳ ಸರಾಸರಿ ಆಯುಷ್ಯ ೧೨೦ ದಿನಗಳು, ರಕ್ತ ಕಣಗಳನ್ನು ಉತ್ಪಾದಿಸುವ ಎಲುಬಿನ ಮಜ್ಜಾನೆಯಲ್ಲಿ ನ್ಯೂನ್ಯತೆಗಳಿದ್ದರೆ, ಕೆಂಪು ರಕ್ತಕಣಗಳ ತಯಾರಿಕೆಯಲ್ಲಿ ಅಗತ್ಯ ಕಚ್ಚಾ ವಸ್ತುಗಳಾದ 'ಬಿ' ಮತ್ತು 'ಸಿ' ಜೀವ ಸತ್ವಗಳು, ಲವಣಾಂಶಗಳು, ಕಬ್ಬಿಣಾಂಶ, ಪೋಷಕಾಂಶಗಳು ಆಹಾರ ದಲ್ಲಿ ಸಾಕಷ್ಟು ಸಿಗದೆ ಕೆಂಪು ರಕ್ತ ಕಣಗಳ

ತಯಾರಿಕೆ ಕುಗ್ಗಬಹುದು ಸದ್ದಿಲ್ಲದೆ ರಕ್ತ ಹೀನತೆ ಹೆಜ್ಜೆ ಹಾಕುವದು.

ರಕ್ತ ಕಣಗಳು ಸಾಕಷ್ಟು ಇದ್ದು ಅವುಗಳಲ್ಲಿ ಹಿಮೋಗ್ಲೋಬಿನ್ ಕೆಲಸ ಸರಿಯಾಗಿ ಸಾಗದಿದ್ದರೆ ಅಥವಾ ಕೊಕ್ಕೆ ಹುಳು, ಜಠರ ಅಥವಾ ಕರುಳಿನ ಹುಣ್ಣು, ಮೂಲವ್ಯಾಧಿ ಮತ್ತು ಮೇಲಿಂದ ಮೇಲಾಗುವ ಮುಟ್ಟು, ಹೆರಿಗೆಯು ಕಾರಣಗಳಿಂದಾಗಿ ರಕ್ತ ಉತ್ಪಾದನೆಗಿಂತ ಹೆಚ್ಚು ರಕ್ತ ನಷ್ಟವಾಗುತ್ತಿದ್ದರೆ ರಕ್ತಹೀನತೆಗೆ ರಂಗು ಬರಬಹುದು. ಚಳಿ ಜ್ವರ ಮುಂತಾದ ಸೋಂಕು ರೋಗಗಳಿಂದಲೂ ರಕ್ತ ಕಣಗಳು ಅಸುನೀಗುವದರಿಂದಲೂ ಅನೀಮಿಯಾ ಅಪ್ಪಿಕೊಳ್ಳುವುದು.

ರಷ್ಯಾದ ಅರ್ಮೇನಿಯಾದಲ್ಲಿ ಈ ದಶಕದ ಅತೀ ದೊಡ್ಡ ದುರಂತವೆನಿಸಿದ ಭೂಕಂಪದಿಂದ ಸುಮಾರು ೫೦,೦೦೦ಕ್ಕಿಂತ ಹೆಚ್ಚು ಪ್ರಾಣಹಾನಿ ಸಂಭವಿಸಿದ ದೇಶ ಭಾಷೆಗಳ ಸೀಮೆಯ ಸಿಮೋಲ್ಲಂಘನಮಾಡಿ ತನುಮನ ಧನ ಸಹಾಯಗಳನ್ನು ಮಾಡಿ ಪ್ರೇಮದಿಂದ ಮಾನವ ಕುಲ ಉಪಚಾರ ನಡೆಸಿತ್ತು. ಇದಕ್ಕಿಂತ ಹೆಚ್ಚು ದಾರುಣವಾಗಿ ವರ್ತಿಸುತ್ತಿರುವ ರಕ್ತಹೀನತೆ ಎಂಬ ರೋಗಕ್ಕೆ ಹೀಗೆಯೇ ಪ್ರತಿಕ್ರಿಯಿಸಿದ್ದರೆ ಎಷ್ಟು ಚನ್ನಾಗಿರುತ್ತಿತ್ತು. ರಕ್ತಹೀನತೆ ಜಗತ್ತಿನ ಸುಮಾರು ನಾಲ್ಕಾಣೆ ಜನರನ್ನು ಅನುದಿನ ಪೀಡಿಸುತ್ತಿರುವ ರೋಗ ನಮ್ಮ ದೇಶದ ಗರ್ಭಿಣಿ ಸ್ತ್ರೀಯರಲ್ಲೂ, ಶಾಲಾ ಬಾಲಕರಲ್ಲೂ ಇದು ಸರ್ವಸಾಮಾನ್ಯ ರೈತವರ್ಗದ ಮುಕ್ಕಾಲುಪಾಲು ಜನತೆ ರಕ್ತ ಹೀನತೆ ರೋಗದಿಂದಬಳಲುತ್ತಾರೆ. ಅಂದಾಗ ಇದರ ಭೀಕರತೆಯನ್ನು ಯಾರಾದರೂ ಊಹಿಸಬಹುದು.

ರಕ್ತಹೀನತೆ ಭಾರತಾದ್ಯಂತ ಸರ್ವಾಂತರಯಾಮಿಯಾಗಿರಲೂ ಕಾರಣಗಳೇನಿರಬಹುದು? ಮುಖ್ಯವಾಗಿ ಇದಕ್ಕೆ ಮೂರು ಅಂಶಗಳು ಕಾರಣ—ಅಜ್ಞಾನ, ಅಂಧಶ್ರದ್ಧೆ ಮತ್ತು ಆಹಾರ. ರಕ್ತದಲ್ಲಿಯ ಕೆಂಪುರಕ್ತ ಕಣಗಳಲ್ಲಿ ಒಂದು ಭಾಗ ಪ್ರತಿದಿನ ನಾಶವಾಗುವವು. ನಾಶಗೊಂಡ ಕಣಗಳೊಳಗಿನ ಹಿಮೋಗ್ಲೋಬಿನ್ ಮತ್ತೆ ಅದರ ಜೊತೆಗಾರ ಕಬ್ಬಿಣ ಬಿಡುಗಡೆಗೊಂಡು ರಕ್ತ ಸೇರುತ್ತವೆ. ಹಿಮೋಗ್ಲೋಬಿನ್‌ನಲ್ಲಿರುವ ಕಬ್ಬಿಣದ ಅಂಶದಲ್ಲಿಯ ಅಲ್ಪಭಾಗ ಬೆವರು ಮತ್ತು ಮೂತ್ರದ ಮೂಲಕ ವಿಸರ್ಜಿಸಲ್ಪಟ್ಟು ಉಳಿದದ್ದನ್ನು ರಕ್ತ ಉತ್ಪಾದಿಸಲು ಮತ್ತೆ ದೇಹ ಬಳಸಿಕೊಳ್ಳುತ್ತದೆ. ಹೀಗಿದ್ದು ಕಬ್ಬಿಣ ದೇಹಕ್ಕೆ ಬೇಕೆಬೇಕು. ಹೊಸ ಕೆಂಪು ರಕ್ತಕಣ ಉತ್ಪಾದಿಸಲು ನಷ್ಟವಾದ ರಕ್ತ ತುಂಬಿಕೊಳ್ಳಲು ಒಬ್ಬ ಪ್ರೌಢನಿಗೆ ದಿನಂಪ್ರತಿ ಸುಮಾರು ೫ ರಿಂದ ೧೫ ಮಿಲಿಗ್ರಾಂ ನಷ್ಟು ಕಬ್ಬಿಣದ ಅವಶ್ಯಕತೆ ಇದೆ. ಒಬ್ಬ ಭಾರತೀಯನ ಆಹಾರ ಸಮತೋಲನವಾಗಿದ್ದರೆ ಇಷ್ಟೊಂದು ಕಬ್ಬಿಣ ಅದರಲ್ಲಿಯೆ ಸಿಗುತ್ತಿತ್ತು. ಆದರೆ ಪರಿಸ್ಥಿತಿ ಹಾಗಿಲ್ಲ. ಮಾಂಸಾಹಾರಿಗಳಿಗೆ ರಕ್ತಹೀನತೆ ಬರುವದು ಕಡಿಮೆ ಎನ್ನುವವರೂ ಇದ್ದಾರೆ ಅದು ಸರಿಯಲ್ಲಾ ಏಕೆಂದರೆ ಮಾಂಸಾಹಾರದಲ್ಲಿರುವದಕ್ಕಿಂತ ಹೆಚ್ಚಿನ ಕಬ್ಬಿಣಾಂಶ ಸಸ್ಯಾಹಾರದಿಂದಲೂ ಪಡೆಯಬಹುದು.

೧೦೦ಕ್ಕೆ ೭೦ ಮಂದಿ ದರಿದ್ರರಾಗಿರುವ ನಮ್ಮಲ್ಲಿ ಅನೀಮಿಯಾಕ್ಕೆ ಆಹಾರವೇ ಕಾರಣವಾಗಲು ಬಡತನ ಭೂತ ಪ್ರಮುಖ ಪಾತ್ರ ವಹಿಸುವದು, ಗರ್ಭಿಣಿ, ಬಾಣಂತಿಯರಲ್ಲಿ ಬಹುಮಂದಿಗು ಈ ಕಾಯಿಲೆಯು

ಕಾಟ ಇರುತ್ತದೆ. ಅವರಿಗೆ ಉಳಿದವರಿಗಿಂತಲೂ ಹೆಚ್ಚಿನ ಆಹಾರ ಮತ್ತು ಕಬ್ಬಿಣದ ಅಂಶ ಬೇಕು. ಆದರೆ ಮನೆಯ ಮಂದಿಯೆಲ್ಲಾ ಉಂಡ ಬಳಿಕ ಉಳಿದದ್ದನ್ನೇ ಬಳಿದು ತಿನ್ನಬೇಕು ಎನ್ನುವ ಸಂಪ್ರದಾಯಸ್ಥ ಭಾರತೀಯ ನಾರಿ ಜೊತೆಗೆ ಗರ್ಭಿಣಿಯರು ಒಳ್ಳೆಯ ಆಹಾರ ಸೇವಿಸಿದರೆ ಮಗು ಅತಿಯಾಗಿ ಬೆಳೆದು ಪ್ರಸವಕ್ಕೆ ತೊಂದರೆ ಆಗುವದೆಂಬ ಅನಗತ್ಯ ಭಯ ಬೇರೆ. ಹೀಗಾಗಿ ಸರಕಾರ ಉಚಿತವಾಗಿ ಹಂಚುವ ಕಬ್ಬಿಣದ ಅಂಶವನ್ನೊಳಗೊಂಡ ಗುಳಿಗೆಗಳು ಮಕ್ಕಳ ಆಟಕ್ಕೆ ಗೋಲಿಗಳಾಗಿಯೋ ಮಣ್ಣಿನ ಬೊಂಬೆಗಳ ಕಣ್ಣುಗಳಾಗಿಯೋ ಬಳಕೆ ಆಗುತ್ತವೆ. ರಕ್ತಹೀನತೆ ಉಳಿಯಲು, ಬೆಳೆಯಲು ಹಾದಿ ಮಾಡುತ್ತವೆ.

ಗರ್ಭಕೋಶದಲ್ಲಿರುವ ಕೂಸು ಉಸಿರುಗಟ್ಟುವಂತಹ ವಾತಾವರಣದಲ್ಲಿ ಬೆಳೆಯುತ್ತಿರುವದರಿಂದ, ಕೆಂಪು ರಕ್ತಕಣಗಳ ಉತ್ಪಾದನೆ ಹೆಚ್ಚಾಗಿ ದೇಹಕ್ಕೆ ಬೇಕಾಗುವ ಆಮ್ಲಜನಕವನ್ನು ಪೂರೈಸಲು ಸಾಧ್ಯವಾಗುತ್ತವೆ. ಹೀಗಾಗಿ ಹುಟ್ಟಿದ ಕೂಸುಗಳಲ್ಲಿ ಹಿಮೋಗ್ಲೋಬಿನ್ ಪ್ರಮಾಣ ೧೮ ಗ್ರಾಂ ಇರುತ್ತವೆ. ಹುಟ್ಟಿದ ನಂತರ ಮಗು ಸ್ವತಂತ್ರವಾಗಿ ಉಸಿರಾಡಲು ಪ್ರಾರಂಭಿಸುವದರಿಂದಾಗಿ ಹಿಮೋಗ್ಲೋಬಿನ್ ಆಮ್ಲಜನೀಕರಣ ಪರಿಣಾಮಕಾರಿಯಾಗಿ ಆಗುವುದರಿಂದಾಗಿ ದೇಹದಲ್ಲಿಯ ಹಿಮೋಗ್ಲೋಬಿನ್ ಮಟ್ಟ ಇಳಿಯುವದು ನಿತ್ರಾಣಗೊಂಡ ಕೆಂಪು ರಕ್ತಕಣಗಳ ನಿರ್ಮೂಲನೆಯ ಜೊತೆಗೆ ಅವುಗಳ ಉತ್ಪತ್ತಿಯಲ್ಲೂ ಗಮನಾರ್ಹವಾಗಿ ಇಳಿಮುಖವಾಗುವುದು. ಇವೆಲ್ಲವುಗಳ ಧೃಢೀಕೃತ ಪರಿಣಾಮದಿಂದಾಗಿ ಹಿಮೋಗ್ಲೋಬಿನ್ ಮಟ್ಟ ಕಡಿಮೆ ಆಗುವುದು. ಮಗು ಹುಟ್ಟಿದ ೧೦, ೧೫ ದಿನಗಳ ನಂತರ ಇಳಿಮುಖವಾಗಲು ಪ್ರಾರಂಭಿಸಿದ ಹಿಮೋಗ್ಲೋಬಿನ್ ಪ್ರಮಾಣ ಮಗುವಿಗೆ ೩ ತಿಂಗಳು ತುಂಬುವದರೊಳಗೆ ಹುಟ್ಟಿದಾಗಿದ್ದ ಹಿಮೋಗ್ಲೋಬಿನ್ ಪ್ರಮಾಣದ ಅರ್ಧಕ್ಕೆ ಮುಟ್ಟುವುದು. ಹೊರಗಿನ ಆಹಾರವನ್ನು ಕೊಡುವಲ್ಲಿ ವಿಳಂಬ ಮಾಡಿದಲ್ಲಿ ಹಿಮೋಗ್ಲೋಬಿನ್ ಪ್ರಮಾಣ ಮತ್ತಷ್ಟು ಇಳಿದು ಮಗು ಬಿಳಚಿಕೊಳ್ಳುವುದು. ತಾಯಿ ಹಾಲಿನಲ್ಲಿ ಕಬ್ಬಿಣಾಂಶ ಕಡಿಮೆ ಇರುವದೇ ಇದಕ್ಕೆ ಮುಖ್ಯ ಕಾರಣ. ಸಮಾಜದ ಕೆಲವೊಂದು ವರ್ಗದ ಜನರು ಎರಡು ವರ್ಷಗಳವರೆಗೆ ಕೇವಲ ಎದೆ ಹಾಲನ್ನೇ ಕೊಡುವ ಸಂಪ್ರದಾಯದಲ್ಲಿರುವದರಿಂದಾಗಿ, ಅಂಥವರ ಮಕ್ಕಳ ರಕ್ತಹೀನತೆಯಿಂದ ಬಳಲುವುದು ಸರ್ವಸಾಮಾನ್ಯವಾಗುವುದು.

ಮಹಿಳೆಯರು ಪ್ರತಿ ತಿಂಗಳು ಮುಟ್ಟಾದಾಗ ೩೦ ಮಿಲಿ ಗ್ರಾಂನಷ್ಟು ಕಬ್ಬಿಣಾಂಶವನ್ನು ಕಳೆದುಕೊಳ್ಳುವರು. ಹೀಗಾಗಿ ಈ ನಷ್ಟವನ್ನು ಸರಿಪಡಿಸಲು ಪ್ರತಿ ದಿನದ ಆವಶ್ಯಕತೆಯ ಜೊತೆಗೆ ೧ ಮಿಲಿ ಗ್ರಾಂನಷ್ಟು ಹೀರಿಕೆಯ ಕಬ್ಬಿಣಾಂಶ ಹೆಚ್ಚಾಗಿ ಬೇಕಾಗುವುದು. ಗರ್ಭಧರಿಸಿದ ನಂತರ ಮುಟ್ಟಿನಲ್ಲಿ ನಷ್ಟವಾಗುವ ಕಬ್ಬಿಣಾಂಶಕ್ಕೆ ಕಡಿವಾಣಬೀಳುವುದು. ಆದರೆ ಗರ್ಭಕೋಶದಲ್ಲಿ ಬೆಳೆಯುವ ಮತ್ತೊಂದು ಜೀವಕ್ಕೆ ಅದಕ್ಕೆ ಬೇಕಾಗುವ ಲವಣಾಂಶ, ಪೋಷಕಾಂಶಗಳನ್ನು ಪೂರೈಸುವಲ್ಲಿ ಮಧ್ಯಸ್ಥಿಕೆ ವಹಿಸುವ ಮಾಂಸಕ್ಕೆ,

ಹೆರಿಗೆ ವೇಳೆಯಲ್ಲಾಗುವ ರಕ್ತಸ್ರಾವದಿಂದಾಗುವ ಕಬ್ಬಿಣಾಂಶದ ನಷ್ಟ ಸರಿಪಡಿಸುವುದಕ್ಕೆ ಪೂರ್ವ ತಯಾರಿಗಾಗಿ ಗರ್ಭಾವಧಿ ಕಾಲದಲ್ಲಿ ಕಬ್ಬಿಣಾಂಶ ಬೇಡಿಕೆ ಹೆಚ್ಚುವುದು. ಹೀಗಾಗಿ ಮೂಲಭೂತವಾಗಿ ಸ್ವೀಕರಿಸಬೇಕಾಗಿರುವ ದಿನಂಪ್ರತಿ ೧ ಮಿಲಿಗ್ರಾಂ ಕಬ್ಬಿಣಾಂಶದ ಜೊತೆಗೆ ೨.೫ ಮಿಲಿಗ್ರಾಂ ಕಬ್ಬಿಣಾಂಶ ಹೆಚ್ಚಿಗೆ ತೆಗೆದುಕೊಳ್ಳಬೇಕಾಗುವುದು ಅಂದರೆ ಆ ವೇಳೆಯಲ್ಲಿ ದಿನನಿತ್ಯದ ಬೇಡಿಕೆ ೩.೫ ಮಿಲಿಗ್ರಾಂ ಆಗುವುದು. ಹೀಗಾಗಿ ವಯಸ್ಕರಲ್ಲಿ ಗಂಡಸರಿಗಿಂತ ಹೆಂಗಸರಲ್ಲಿ ರಕ್ತಹೀನತೆಯು ಹಾವಳಿ ಹೆಚ್ಚು.

ರೋಗದ ಲಕ್ಷಣಗಳು

ವಯಸ್ಸು ಮತ್ತು ಲಿಂಗಕ್ಕನುಗುಣವಾಗಿ ಇರಬೇಕಾದ ಹಿಮೋಗ್ಲೋಬಿನ್ ಪ್ರಮಾಣಕ್ಕಿಂತ ಕಡಿಮೆ ಇರುವ ಸ್ಥಿತಿಗೆ ರಕ್ತಹೀನತೆ ಎನ್ನುವರು. ರಕ್ತಹೀನತೆಯಿಂದುಂಟಾಗುವ ತೊಡಕು ತೊಂದರೆಗಳು, ಚಿಹ್ನೆಗಳು, ರಕ್ತಹೀನತೆಯು ತೀವ್ರತೆಯನ್ನಷ್ಟೇ ಅವಲಂಬಿಸಿರದೆ, ತ್ವರಿತಗತಿಯ ಬೆಳವಣಿಗೆಯು ಪ್ರಭಾವ ಪ್ರಮುಖಪಾತ್ರ ವಹಿಸುವುದು.

ನಮ್ಮ ದೇಹದ ಪ್ರತಿ ಅಂಗಾಂಗಕ್ಕೂ ಪ್ರಾಣವಾಯುವನ್ನು ಹೊತ್ತೊಯ್ಯುವ ಹಿಮೋಗ್ಲೋಬಿನ್ ಪ್ರಮಾಣವೇ ದೇಹದಲ್ಲಿ ಕಡಿಮೆ ಆದಾಗ ಅಂಗಾಂಗಗಳು ಆಮ್ಲಜನಕದ ಕೊರತೆಯಿಂದ ಬಳಲುತ್ತವೆ. ಹೀಗಾಗಿ ಮೆದುಳಿಗೆ ರಕ್ತ ಸಾಲದೆ ಕಣ್ಣುಗಳು ಕತ್ತಲಿಟ್ಟಂತಾಗುತ್ತವೆ. ಕೈಕಾಲುಗಳು ಜುಂ ಜುಂ ಎನ್ನತೊಡಗುತ್ತವೆ. ಮೊದಲಿಗಿಂತಲೂ ಕಡಿಮೆ ಕೆಲಸಮಾಡಿದರು ಹೃದಯ ಪುಪ್ಪುಸಗಳು ಹೆಚ್ಚು ಕೆಲಸ ಮಾಡಬೇಕಾಗಿರುವುದರಿಂದಾಗಿ ಶೀಘ್ರವಾಗಿ ಆಯಾಸವಾಗಿ ಉಬ್ಬಸ ಬಂದಂತಾಗುತ್ತದೆ. ಹಿಮೋಗ್ಲೋಬಿನ್ ಕೊರತೆಯಿಂದ ರಕ್ತದ ಕೆಂಪು ಕಡಿಮೆ ಆಗಿ ವ್ಯಕ್ತಿ ಬಿಳಚಿಕೊಳ್ಳಲಾರಂಭಿಸುತ್ತಾನೆ. ರಕ್ತಹೀನತೆಯ ಗುರುತು ಹಿಡಿಯಲು ನಾಲಿಗೆ ತೋರಿಸಿ ಎಂದೋ, ಕಣ್ಣರೆಪ್ಪೆ ಎಳೆದೋ, ಉಗುರು ಕಣ್ಣುಗಳನ್ನು ಹತ್ತಿರಕ್ಕೆ ವೈದ್ಯರು ನೋಡುವುದು ಇದಕ್ಕೆ. ರಕ್ತಹೀನತೆ ಇದ್ದಾಗ ಅಂಥೆಡೆಗಳಲ್ಲಿ ಬಿಳುಪೇರುವದು ಸಾಮಾನ್ಯ. ಉಗುರುಗಳ ನಸುಗೆಂಪು ಬಣ್ಣ ನಶಿಸಿ ಚಪ್ಪಟೆಯಾಗುತ್ತವೆ. ರಕ್ತಹೀನತೆ ಗರಿಷ್ಠ ಮಟ್ಟ ಮುಟ್ಟಿದಾಗ ಉಗುರುಗಳು ಚಮಚೆಯಂತೆ ಬಾಗುವವು ನಯನಾಜೂಕು ಮಾಯವಾಗಿ ಗೆರೆಗಳು ಕಾಣಿಸುವವು.

ಬಡತನ, ಅಜ್ಞಾನ ಹೆಚ್ಚಾಗಿರುವ ರೈತವರ್ಗದಲ್ಲಿ ರಕ್ತಹೀನತೆಯು ಹಾವಳಿ ಹೆಚ್ಚು. ಕಾರಣ ಈ ಮಣ್ಣಿನ ಮಕ್ಕಳಿಗೆ ದಿನದ ಬಹುಕಾಲ ಮಣ್ಣಿನೊಡನಾಟ ತಪ್ಪಿದ್ದಲ್ಲ. ಊಟ, ತಿಂಡಿ, ನಿದ್ರೆ, ವಿಶ್ರಾಂತಿ ಎಲ್ಲವೂ ಮಣ್ಣಿನ ಮಡಿಲಲ್ಲಿಯೆ ನಡೆಯುವುದುಂಟು. ಹೀಗಾಗಿ ತೇವವಾದ ಹೊಲ, ತೋಟಪಟ್ಟಿ, ಬಯಲಿನಂತಹ ಮಣ್ಣಿನಲ್ಲಿ ಹಾಜರಿದ್ದು ಪುಷ್ಕಳವಾಗಿ ಮೊಟ್ಟೆಗಳನ್ನು ಇಡುವ ಕೊಕ್ಕೆಹುಳಗಳಿಗೆ ಇವರು ಸುಲಭದ ಗುರಿ. ಮಣ್ಣಲ್ಲಿ ಕೆಲಸಕ್ಕಿಳಿದ ರೈತನ ಪಾದದಲ್ಲಿ ರಂಧ್ರಕೊರೆದು ಒಳಹೊಕ್ಕು ರಕ್ತಪ್ರವಾಹದಲ್ಲಿ ಈಜುತ್ತಾ ಇವು ಸಣ್ಣಕರುಳನ್ನು ಸೇರುತ್ತವೆ, ಇಲ್ಲಿ ಲಕ್ಷ ಲಕ್ಷ ಸಂಖ್ಯೆಯಲ್ಲಿ ಆಲದಮರಕ್ಕೆ ಬಾವಲಿಗಳು

ಜೋತಾಡಿದಂತೆ ಜೋತಾಡುತ್ತವೆ. ಅಲ್ಲೂ ರಂಧ್ರ ಕೊರೆದು ರಕ್ತಾಹಾರಗಳನ್ನು ಹೀರುತ್ತವೆ. ಮತ್ತೆ ಅಲ್ಲಿಂದ ಜಿಗಿದು ಬೇರೆಡೆ ಸೇರಿ ರಂಧ್ರವನ್ನು ರಕ್ತ ಸೋರುತ್ತಿರುವಂತೆಯೇ ಇಳಿಸಿಬಿಡುತ್ತವೆ. ಕೊಕ್ಕೆ ಹುಳಗಳ ಈ ದಾಂಧಲೆಯ ಪ್ರಮಾಣ ನುರಿತ ಶಾಸ್ತ್ರಜ್ಞರಿಗೂ ನಿಲುಕದಂತಹದು. ಲಕ್ಷ ತೂತುಗಳಿಂದ ರಕ್ತ ಸೋರಿದರೆ ರಕ್ತಹೀನತೆ ಬಾರದೆ ಇದ್ದೀತೆ? ಕಾರಣ ಮಣ್ಣಿನಲ್ಲಿ ಕೆಲಸಮಾಡುವವರು ವರ್ಷಕ್ಕೊಮ್ಮೆಯಾದರೂ ವೈದ್ಯಪರೀಕ್ಷೆ ಮಾಡಿಸುವದು ಒಳ್ಳೆಯದು. ಕೆರೆಕಟ್ಟೆಯ ಬದುವಿನ ಬದಲು ಶಾಸ್ತ್ರೋಕ್ತ ಕಕ್ಕಸಿನ ಉಪಯೋಗ ಕೊಕ್ಕೆ ಹುಳಗಳ ಕಾಟಕ್ಕೆ ಕಡಿವಾಣ ಹಾಕಬಹುದು. ಹೊಲದಲ್ಲಿ ಕೆಲಸಮಾಡುವಾಗ ಚಪ್ಪಲಿ,ಬೂಟು ಧರಿಸುವದು ಕುಕ್ಕೆಹುಳದ ಮುತ್ತಿಗೆ ಮೆಟ್ಟಿಹಾಕಲು ಉತ್ತಮವಿಧಾನ ಆದರೂ, ಈ ಉಪದೇಶ ನಮ್ಮ ರೈತಾಪಿ ಜನರಿಗೆ ಎಷ್ಟರಮಟ್ಟಿಗೆ ಹಿಡಿಸೀತು?

ಉಪಚಾರ

ಕೊಕ್ಕೆ ಹುಳುವಿನ ಉಚ್ಚಾಟನೆ, ರಕ್ತಮೂಲವ್ಯಾಧಿ, ಕರಳು ಹುಣ್ಣುಗಳಿಗೆ ಉಪಚಾರ ಇವು ಮೊದಲ ಆದ್ಯತೆ ಪಡೆಯಬೇಕಾದ ರಕ್ತಹೀನತೆಯ ಉಪಚಾರಗಳು. ಸಮತೋಲ ಆಹಾರ ಒದಗಿಸಿ ಕಬ್ಬಿಣ ಮತ್ತು ಇತರ ಜೀವಸತ್ವಗಳು ಧಾರಾಳವಾಗಿರುವಂತಹ ಆಹಾರ ಬಳಸುವುದು ಸೂಕ್ತ. ರಕ್ತಹೀನತೆ ಸಾಂಕ್ರಾಮಿಕವೆನ್ನುವಷ್ಟು ಸಾಮಾನ್ಯವಾಗಿ ಇರುವ ಸಮುದಾಯಗಳಲ್ಲಿ ಎಲ್ಲರಿಗೂ ಕಬ್ಬಿಣದಂಶ ಬೆರತ ಉಪ್ಪು ದೊರೆಯುವಂತೆ ಮಾಡಬಹುದು.

ಇದೆಲ್ಲಾ ಯಾಕೆ? ಮಾರುಕಟ್ಟೆಯಲ್ಲಿ ಕಾಸಿಗೊಂದು ಕೊಸರಿಗೊಂದು ಎನ್ನುವಂತೆ ರೆಡಿಮೇಡ್ ಹಿಮೋಗ್ಲೋಬಿನನ್ನೆ ನೀಡುವ ಟಾನಿಕ್ ದೊರೆಯುತ್ತದಲ್ಲಾ? ಅದನ್ನೆ ಕುಡಿದರಾಯಿತು ಎಂದು ಸಮಾಧಾನ ಪಡಬೇಡಿ. ಹೀಗೆ ಸಿದ್ಧ ಹಿಮೋಗ್ಲೋಬಿನನ್ನು ನಮ್ಮ ದೇಹ ಹೀರಿಕೊಳ್ಳಲಾರದು ಎಂಬುದನ್ನು ನೆನಪಿಡಿ. ಔಷಧ ಕಂಪನಿಗಳ ಪ್ರತಿನಿಧಿಗಳ ಬಣ್ಣದ ಮಾತಿಗೆ ಮರುಳಾಗಿ, ಕೊಡುವ ಕಣ್ಣುಕೋರೈಸುವ ಕಾಣಿಕೆಗಳಿಗೆ ವೈದ್ಯರು ಸೊಪ್ಪು ಹಾಕಿದಲ್ಲಿ ಬಡ ಭಾರತೀಯರ ಕಿಸೆ ಖಾಲಿಯಾಗುವದು ರಕ್ತಹೀನತೆಗೆ ರಂಗುಗಟ್ಟುವದು ವೈದ್ಯರ ಹೆಸರಿಗೆ ಮಸಿ ಬಳಿಯುವದು ಕಾರಣ ವೈದ್ಯರು ವಿಚಾರಿಸಿ, ಆತ್ಮವಿವೇಚನೆ ಮಾಡಿಕೊಂಡು ರೋಗಿಗಳಿಗೆ ಔಷಧಿಬರೆದು ಕೊಡುವದನ್ನು ಮಾಡಬೇಕು. ವೈದ್ಯರು ಕಬ್ಬಿಣಾಂಶ ಔಷಧಿ ಸೇವಿಸಿ ಎಂದು ಹೇಳಿದ್ದಾರಲ್ಲಾ ಎಂದು ಲೀಟರುಗಟ್ಟಲೇ ಕುಡಿದರು ಹೊಳೆಯಲ್ಲಿ ಹುಣಸಿಹಣ್ಣು ತೊಳೆದಂತಾಗುವದು. ಜೊತೆಗೆ ಕಬ್ಬಿಣವೇ ದೇಹದಲ್ಲಿ ಹೆಚ್ಚಾಗಿ ರಕ್ತಹೀನತೆ ಗುಣಮುಖವಾಗುವ ಬದಲು, ಸಿಡರೋಸಿಸ್ ಎಂಬ ಹೊಸ ರೋಗ ಅಡರಿಕೊಳ್ಳಬಹುದು. ಆದ್ದರಿಂದ ಅಗತ್ಯಬಿದ್ದಾಗ ವೈದ್ಯರ ಸಲಹೆ ಪ್ರಕಾರ, ಹೇಳಿದಷ್ಟು ಪ್ರಮಾಣದಲ್ಲಿ, ಹೇಳಿದಷ್ಟು ಕಾಲಾವಧಿಯವರೆಗೆ ಮಾತ್ರ ಸೇವಿಸಬೇಕು. ಅತಿಯಾದಲ್ಲಿ ಅಮೃತವೂ ವಿಷವಾಗುವುದು ಅಲ್ಲವೇ?

ಎಲೆಕ್ಟ್ರಾನ್ ಆವಿಷ್ಕಾರ

ಡಾ|| ಎ. ಪಿ. ರಾಧಾಕೃಷ್ಣ
ಭೌತಶಾಸ್ತ್ರ ವಿಭಾಗ
ಸಂತಫಿಲೋಮಿನಾ ಕಾಲೇಜ್
ದರ್ಭೆ, ಪುತ್ತೂರು–೫೭೪ ೨೦೨

ಎಲೆಕ್ಟ್ರಾನ್ ಒಂದು ಪ್ರಾಥಮಿಕ ಕಣ. ಪರಮಾಣುಕೋಟಿಯ ಹೊರಗಳಲ್ಲಿ ನಿರಂತರ ಪರಿಕ್ರಮಣೆ ಇದರ ಗುಣ. ಕೋಟಿಯ ಒಳಗಿದೆ ಪರಮಾಣು ಬೀಜ: ಪ್ರೋಟಾನ್ ನ್ಯೂಟ್ರಾನ್ ಮುಂತಾದ ಇತರ ಪ್ರಾಥಮಿಕ ಕಣಗಳ ಬಲವದ್ಬಂಧಿತ ಒಕ್ಕೂಟ. ಪ್ರೋಟಾನ್ ಒಂದು ಧನ ವಿದ್ಯುದಾವಿಷ್ಟ ಕಣ, ಎಲೆಕ್ಟ್ರಾನ್ ಋಣ ವಿದ್ಯುದಾವಿಷ್ಟ. ಯಾವುದೇ ಪರಮಾಣುವಿನಲ್ಲಿ ಪ್ರೋಟಾನ್ ಸಂಖ್ಯೆಯು ಎಲೆಕ್ಟ್ರಾನ್ ಸಂಖ್ಯೆಯೂ ಸಮವಾಗಿದ್ದು ನಿವ್ವಳ ವಿದ್ಯುದಾವೇಶ ಶೂನ್ಯವಾಗಿರಬೇಕಾದದ್ದು ಸಹಜ ಸಂತುಲಿತ ಸ್ಥಿತಿ. ಇಲ್ಲದಾಗ? ಓದಿ ಈ ಪತ್ತೇದಾರಿ ಕತೆಯನ್ನು, ಗೋಚರ ವಿದ್ಯುತ್ಪ್ರಕಾಶದ ಹಿನ್ನೆಲೆಯಲ್ಲಿರುವ ಅಗೋಚರ ಶಕ್ತಿಯ ಲೀಲೆಯನ್ನು ಎಲೆಕ್ಟ್ರಾನ್ ಆವಿಷ್ಕಾರದ ಶತಮಾನ ಇಸವಿ ೧೯೯೭. ಎಂದೇ ಈ ಲೇಖನ. ಬರೆದವರು ಭೌತವಿಜ್ಞಾನ ಪ್ರಾಧ್ಯಾಪಕರು.

ನೂರು ವರ್ಷಗಳ ಹಿಂದೆ. ೧೮೯೭, ಏಪ್ರಿಲ್ ೩೦, ಶುಕ್ರವಾರದ ಸಂಜೆ. ಇಂಗ್ಲೆಂಡಿನ ರಾಯಲ್ ಸೊಸೈಟಿಯ ಉಪನ್ಯಾಸ ಕೊಠಡಿಯಲ್ಲಿ ವಿಜ್ಞಾನಿಗಳ ಗಡಣ ನೆರೆದಿದೆ—ಕೇಂಬ್ರಿಜ್ ವಿಶ್ವವಿದ್ಯಾನಿಲಯಕ್ಕೆ ಸೇರಿದ ಕ್ಯಾವೆಂಡಿಶ್ ಸಂಶೋಧನಾಲಯದ ನಿರ್ದೇಶಕ ಜೆ. ಜೆ. ಥಾಮ್ಸನ್ (೧೮೫೬–೧೯೪೦) ಅವರ ಉಪನ್ಯಾಸಕ್ಕೆ. ಸಂಶೋಧನ ಲೇಖನಗಳ ಮೂಲಕ ಅದಾಗಲೇ ವಿದ್ವತ್ ಪ್ರಪಂಚದಲ್ಲಿ ತನ್ನ ಛಾಪನ್ನು ಸ್ಥಾಪಿಸಿದ ಥಾಮ್ಸನ್, ಉತ್ಕೃಷ್ಟ ಉಪನ್ಯಾಸಕರಾಗಿದ್ದರು. ಸ್ವಂತಿಕೆ ನಳನಳಿಸುತ್ತಿದ್ದ ಅವರ ಉಪನ್ಯಾಸಗಳಲ್ಲಿ ಭೌತವಿಜ್ಞಾನದ ಕ್ಲಿಷ್ಟ ಪರಿಕಲ್ಪನೆಗಳೆಲ್ಲ ಬೆರಗಾಗುವ ಬಗೆಯಲ್ಲಿ ಸರಳವಾಗುತ್ತಿದ್ದುವು; ನೂತನ ಹೊಳವುಗಳು ಅಲ್ಲಿ ಮಿಂಚಿ ಮಾಯವಾಗುತ್ತಿದ್ದುವು. ಎಂದೇ ಥಾಮ್ಸನ್ ಉಪನ್ಯಾಸದ ಬಗ್ಗೆ ಹೆಚ್ಚಿನ ನಿರೀಕ್ಷೆ. ಜೆ. ಜೆ. ಎಂದೇ ಇವರು ಪ್ರಸಿದ್ಧರು. ಜೆ.ಜೆ. ನುಡಿ ಎಂದರೆ ಭೌತವಿಜ್ಞಾನದ ದೃಢ ಪದಗತಿ ಎಂದೇ ವಿಜ್ಞಾನಿಗಳು ಭಾವಿಸಿದ್ದರು.

ಆ ದಿನವೂ--ಎಂದಿನಂತೆ—ಶ್ರೋತೃಗಳನ್ನು ಜೆ.ಜೆ. ನಿರಾಶೆಗೊಳಿಸಲಿಲ್ಲ. ಕಳೆದ ನಾಲ್ಕೈದು ವರ್ಷಗಳಿಂದ ಕ್ಯಾಥೋಡ್ ಕಿರಣಗಳ ಬಗ್ಗೆ ತಾವು ನಡೆಸಿದ ಪ್ರಯೋಗಗಳನ್ನು ಹಂತ ಹಂತವಾಗಿ ವಿವರಿಸುತ್ತ, ಅಂತಿಮವಾಗಿ ಫಲಿತಾಂಶವನ್ನು ಪ್ರಕಟಿಸಿ

ದಾಗ ಸಭೆಯಲ್ಲಿ ವಿದ್ಯುತ್ಸಂಚಾರ! "ಪರಮಾಣುವಿಗಿಂತಲೂ ಸೂಕ್ಷ್ಮವಾದ ಮತ್ತು ವಿದ್ಯುದಾವೇಶಯುಕ್ತ ಕಣಗಳನ್ನು ನಾನು ಆವಿಷ್ಕರಿಸಿದ್ದೇನೆ. ಕ್ಯಾಥೋಡ್ ಕಿರಣಗಳು ಈ ಚಿಕ್ಕ ಕಣಗಳ ಅನುಸ್ಯೂತ ಪ್ರವಾಹ. ವಿದ್ಯುತ್ತಿನ ಹರಿವಿಗೂ ಈ ಕಣಗಳೇ ಕಾರಣ."

ಪರಮಾಣು ಎಂದರೆ ವಸ್ತುವಿನ ಸಾಧ್ಯ ಸೂಕ್ಷ್ಮತಮರೂಪ ಮತ್ತು ಅವಿಭಾಜ್ಯ ಘಟಕವೆಂದು ನಂಬಲಾಗಿದ್ದ ದಿನಗಳಲ್ಲಿ ಪರಮಾಣುವಿಗಿಂತಲೂ ಸೂಕ್ಷ್ಮತರ ಕಣಗಳಿವೆ ಎಂಬ ನೂತನ ಪರಿಕಲ್ಪನೆಯನ್ನು ಪ್ರವರ್ತಿಸುವ ಅಸಾಧಾರಣ ಎದೆಗಾರಿಕೆಯನ್ನು ಥಾಮ್ಸನ್ ಪ್ರದರ್ಶಿಸಿದರು. ವಿದ್ಯುದಾವೇಶಗಳು (ಎಲೆಕ್ಟ್ರಿಕ್ ಚಾರ್ಜ್‌ಸ್) ಅವುಗಳ ಚಲನೆಯಿಂದ ಉಂಟಾಗುವ ವಿದ್ಯುತ್ ಪ್ರವಾಹ, ವಿದ್ಯುತ್ ಪ್ರವಾಹದಿಂದ ಸೃಷ್ಟಿಯಾಗುವ ಕಾಂತತ್ವ, ಕಾಂತಕ್ಷೇತ್ರ ವ್ಯತ್ಯಸ್ತವಾದಾಗ ಸೃಷ್ಟಿಯಾಗುವ ವಿದ್ಯುತ್ತು—ಒಟ್ಟಾರೆ ವಿದ್ಯುತ್ತು ಮತ್ತು ಕಾಂತತ್ವದ ಅವಿನಾ ಸಂಬಂಧದ ಬಗ್ಗೆ ಸಾಕಷ್ಟು ಮಾಹಿತಿ ಲಭ್ಯವಾಗಿದ್ದರೂ 'ವಿದ್ಯುದಾವೇಶದ ಮೂಲ ಘಟಕವೇನು?' ಎಂಬ ಪ್ರಶ್ನೆಗೆ ಸ್ಪಷ್ಟ ಉತ್ತರವಿರಲಿಲ್ಲ. ಆದರೆ ಇದೀಗ ಜೆ.ಜೆ. ಉತ್ತರಿಸಿದರು.

ಅವರು ಆವಿಷ್ಕರಿಸಿದ ಆ ಚಿಕ್ಕ ಕಣಗಳೇ ಎಲೆಕ್ಟ್ರಾನುಗಳು. ಈ ಶತಮಾನದಲ್ಲಿ ಭೌತವಿಜ್ಞಾನ ಪ್ರವರ್ಧಿಸಿದ ಬಗೆ ಬೆರಗು ಹುಟ್ಟಿಸುತ್ತದೆ—ಅಷ್ಟೊಂದು ಆವಿಷ್ಕಾರಗಳು—ಸಾಗರದಲ್ಲಿ ಉಕ್ಕೇರಿ ಬರುವ ಅಲೆಗಳಂತೆ—ಒಂದರ ಬೆನ್ನೇರಿ ಇನ್ನೊಂದು. ಈ ಹೆಚ್ಚಿನ ಆವಿಷ್ಕಾರಗಳಿಗೆ ಎಲೆಕ್ಟ್ರಾನ್ ಆವಿಷ್ಕಾರ ಸ್ಫೂರ್ತಿ ನೀಡಿದೆ. ಹಾಗಾಗಿಯೆ 'ಎಲೆಕ್ಟ್ರಾನ್ ಆವಿಷ್ಕಾರ ಮಾನವನ ಅಸಾಧಾರಣ ಬುದ್ಧಿಮತ್ತೆಯ ಪ್ರಚಂಡ ಜಿಗಿತ' ಎಂದು ಸಮಕಾಲೀನ ಡಚ್ ಭೌತವಿಜ್ಞಾನಿ ಎಚ್. ಎ. ಲೊರೆಂಟ್ಝ್ (೧೮೫೩–೧೯೨೮) ವರ್ಣಿಸಿದ್ದು.

ಯಾರು ಈ ಥಾಮ್ಸನ್?

ಜೊಸೆಫ್ ಜಾನ್ ಥಾಮ್ಸನ್ (ಜೆ. ಜೆ. ಥಾಮ್ಸನ್) ಅರ್ಥಾತ್ ಜೆ. ಜೆ. ಒಬ್ಬ ಪುಸ್ತಕ ವ್ಯಾಪಾರಿಯ ಮಗ; ೧೮೫೬ ಡಿಸೆಂಬರ್ ೧೮ ರಂದು ಇಂಗ್ಲೆಂಡಿನ ಮ್ಯಾಂಚೆಸ್ಟರಿನಲ್ಲಿ ಜನನ. ತೀರ ಎಳವೆಯಲ್ಲಿಯೇ ಗಣಿತ ಮತ್ತು ಭೌತವಿಜ್ಞಾನಗಳಲ್ಲಿ ಅಸಾಧಾರಣ ಪ್ರೌಢಿಮೆ. ಕಾಲೇಜು ಮೆಟ್ಟಲೇರಿದಾಗ ಇನ್ನೂ ಹದಿನಾಲ್ಕರ ಪೋರ. ತಂದೆಗೆ ತನ್ನ ಮಗ ಎಂಜನಿಯರಿಂಗ್ ಅಧ್ಯಯನಿಸಿ ತಂತ್ರವಿದನಾಗಬೇಕೆಂಬ ಆಸೆಯಾದರೆ, ಎಳೆಯ ಜೆ.ಜೆಗೆ ಶುದ್ಧ ವಿಜ್ಞಾನ ಮತ್ತು ಗಣಿತದಲ್ಲಿ ತೀವ್ರ ಆಸಕ್ತಿ. ಈ ಮಧ್ಯೆ ತಂದೆಯ ಅಕಾಲ ಮರಣದೊಂದಿಗೆ ಕುಟುಂಬಕ್ಕೆ ಬಡಿದ ಆರ್ಥಿಕ ಹೊಡೆತದಿಂದಾಗಿ ದುಬಾರಿಯಾದ ಎಂಜನಿಯರಿಂಗ್ ಬದಲಿಗೆ 'ಅಗ್ಗದ' ಗಣಿತ ಮತ್ತು ಭೌತವಿಜ್ಞಾನಗಳ ಅಧ್ಯಯನ ಅನಿವಾರ್ಯವಾಯಿತು. ಜೆ.ಜೆ. ೧೮೭೬ರಲ್ಲಿ ವಿದ್ಯಾರ್ಥಿ ವೇತನದೊಂದಿಗೆ ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಟ್ರಿನಿಟಿ ಕಾಲೇಜನ್ನು ಪ್ರವೇಶಿಸಿದರು. ಅಂದು ಪ್ರಪಂಚದ ಶ್ರೇಷ್ಠ ವಿಶ್ವವಿದ್ಯಾಲಯಗಳಲ್ಲೊಂದಾದ ಕೇಂಬ್ರಿಜ್‌ನ ಟ್ರಿನಿಟಿ ಕಾಲೇಜಿನಲ್ಲಿ

ಅಪ್ರತಿಮ ಪ್ರತಿಭೆಗಳಿಗಷ್ಟೇ ಅವಕಾಶ ವಿತ್ತು.

ವಿದ್ಯಾರ್ಥಿ ಜೀವನದಲ್ಲೇ ಜೆ.ಜೆ. ಗಹನ ಸಂಶೋಧನ ಲೇಖನಗಳನ್ನು ಪ್ರಕಟಿಸಿದರು. —ಭವ್ಯ ಭವಿಷ್ಯತ್ತಿನ ಮುನ್ಸೂಚನೆಯಾಗಿ ಲೋಹದ ಗೋಲಕ್ಕೆ ವಿದ್ಯುದಾವೇಶಗಳನ್ನು ಊಡಿದಾಗ ಗೋಲದ ತೂಕದಲ್ಲಿ ವ್ಯತ್ಯಾಸ ವಾಗುವ ಸಾಧ್ಯತೆ ಬಗ್ಗೆ ಲೇಖನ ಪ್ರಕಟಿಸಿದರು. ಪರಮಾಣುಗಳೆಂದರೆ ಅಗೋಚರ ಈಥರ್ ಮಾಧ್ಯಮದಲ್ಲಿರುವ ಸುಳಿಗಳಿರಬಹುದೆಂದು ಊಹಿಸುವ ಸಿದ್ಧಾಂತವನ್ನು ಇನ್ನೊಂದು ಲೇಖನದಲ್ಲಿ ವಿಮರ್ಶಿಸುತ್ತ "ನಾವೇಕೆ ಈಥರ್ ಮಾಧ್ಯಮದ ಕಲ್ಪನೆಯನ್ನೇ ತ್ಯಜಿಸಬಾರದು" ಎಂದು ಪ್ರಶ್ನಿಸಿದರು. ಹಾಗೆ ತ್ಯಜಿಸಿ (೧೯೦೫) ವಿಶ್ವವಿಖ್ಯಾತರಾದವರು ಆಲ್ಬರ್ಟ್ ಐನ್‌ಸ್ಟೈನ್ (೧೮೭೯–೧೯೫೫). ಮೈಕೆಲ್ಸನ್ (೧೮೫೨–೧೯೩೧) ಮತ್ತು ಮೋರ್ಲಿ (೧೮೩೮–೧೯೨೩) ಯವರ ಐತಿಹಾಸಿಕವಾದ 'ಶೂನ್ಯ ಫಲಿತಾಂಶ' ಪ್ರಯೋಗವಾಗಲಿ, ಆಲ್ಬರ್ಟ್ ಐನ್‌ಸ್ಟೈನರ ಸಾಪೇಕ್ಷತಾ ಸಿದ್ಧಾಂತವಾಗಲಿ ಇನ್ನೂ ಮಂಡಿಸಲ್ಪಟ್ಟಿರಲಿಲ್ಲ. ಅಂದರೆ ಸಮಕಾಲೀನ ಜ್ಞಾನ ದಿಗಂತ ದಾಚೆಗೆ ತನ್ನ ಚಿಂತನೆಯನ್ನು ಆ ಹದಿ ಹರೆಯದಲ್ಲೆ ಥಾಮ್ಸನ್ ವಿಸ್ತರಿಸಿದ್ದರು. ಇದು ಸಾಧ್ಯವಾಗುವುದು ಪ್ರಚಂಡ ಪ್ರತಿಭೆಗೆ ಅರ್ಥಾತ್ ಜೀನಿಯಸ್‌ಗೆ ಮಾತ್ರ.

ಟ್ರಿನಿಟಿಯಿಂದ ಅತ್ಯುನ್ನತಾಂಕಗಳೊಂದಿಗೆ ಪದವಿ ಪಡೆದು ಕ್ಯಾವೆಂಡಿಶ್ ಸಂಶೋಧನಾಲಯಕ್ಕೆ ಅಡಿ ಇರಿಸಿದರು— ಭೌತವಿಜ್ಞಾನದಲ್ಲಿ ಉನ್ನತ ಸಂಶೋಧನೆಯ ಅವಕಾಶ ಅರಸುತ್ತ (೧೮೭೯). ಭೌತವಿಜ್ಞಾನದ—ಅದರಲ್ಲೂ ಮುಖ್ಯವಾಗಿ ವಿದ್ಯುತ್ತಿನ ಅಧ್ಯಯನಕ್ಕಾಗಿ ಕ್ಯಾವೆಂಡಿಶ್ ಅಸ್ತಿತ್ವಕ್ಕೆ ಬಂದಿತ್ತು (೧೮೭೪). ವಿದ್ಯುತ್ಕಾಂತ ಸಿದ್ಧಾಂತವನ್ನು ಮಂಡಿಸಿದ, ಹತ್ತೊಂಬತ್ತನೆಯ ಶತಮಾನದ ಅಪ್ರತಿಮ ಸೈದ್ಧಾಂತಿಕ ಭೌತವಿಜ್ಞಾನಿ ಜೇಮ್ಸ್ ಕ್ಲರ್ಕ್ ಮ್ಯಾಕ್ಸ್‌ವೆಲ್ (೧೮೩೧-೧೮೭೯) ಕ್ಯಾವೆಂಡಿಶ್‌ನ ಪ್ರಥಮ ನಿರ್ದೇಶಕ. ಇದೊಂದು ಪ್ರಪಂಚದ ಸರ್ವಶ್ರೇಷ್ಠ ಸಂಶೋಧನ ಕೇಂದ್ರವಾಗಬೇಕೆಂಬ ಕನಸು ಮ್ಯಾಕ್ಸ್‌ವೆಲ್‌ಗೆ. ಕನಸು ನನಸಾಗುವ ಮೊದಲೇ ಮ್ಯಾಕ್ಸ್‌ವೆಲ್ ನಿಧನರಾದಾಗ (೧೮೭೯), ಸಂಶೋಧನಾಲಯದ ಚುಕ್ಕಾಣಿ ಹಿಡಿದವರು—ಲಾರ್ಡ್ ರ್‍ಯಾಲೆ (೧೮೪೨–೧೯೧೯). ಬೆಳಕಿನ ಚದರಿಕೆ ಬಗ್ಗೆ ಬಲು ಸುಂದರ ವಿವರಣೆ ನೀಡಿದ ಇವರ ಕಾಲದಲ್ಲಿ ಕ್ಯಾವೆಂಡಿಶ್ ಹಲವು ಪ್ರತಿಭಾವಂತರನ್ನು ಆಕರ್ಷಿಸಿತು. ಅಂಥವರಲ್ಲಿ ಥಾಮ್ಸನ್ ಕೂಡ ಒಬ್ಬರು.

ದೈಹಿಕ ಅನಾರೋಗ್ಯದ ಕಾರಣದಿಂದ ೧೮೮೪ ರಲ್ಲಿ ಕ್ಯಾವೆಂಡಿಶ್ ನಿರ್ದೇಶಕತ್ವಕ್ಕೆ ರ್‍ಯಾಲೆ ರಾಜಿನಾಮೆ ನೀಡಬೇಕಾಯಿತು. ಇವರು ತಮ್ಮ ಉತ್ತರಾಧಿಕಾರಿಯಾಗಿ ಜೆ.ಜೆ.ಯವರನ್ನೇ ಸೂಚಿಸಿದರು. ಆಗಷ್ಟೇ ಸಂಶೋಧನ ಕ್ಷೇತ್ರದಲ್ಲಿ ತಳಊರತೊಡಗಿದ ಈ ಇಪ್ಪತ್ತೆಂಟರ ತರುಣನಿಂದ 'ಕ್ಯಾವೆಂಡಿಶ್ ಪರಂಪರೆ'ಯನ್ನು ಉಳಿಸಿ, ಬೆಳೆಸಲು ಸಾಧ್ಯವಾದೀತೇ? ಎಂಬ ಸಂಶಯ ತಲೆ ನೆರೆತ ಹಲವರಿಗೆ. ಆದರೆ ಜೆ. ಜೆ. ಯವರ ಸಾಮರ್ಥ್ಯದ ಬಗ್ಗೆ ರ್‍ಯಾಲೆಗೆ ಇದ್ದ ದೃಢ ವಿಶ್ವಾಸ ಹುಸಿಯಾಗಲಿಲ್ಲ.

ಥಾಮ್ಸನ್ ಉತ್ಸಾಹದ ಊಟೆಯಾಗಿದ್ದರು; ಸ್ಫೂರ್ತಿಯ ಆಕರವಾಗಿದ್ದರು.

ವಾಸ್ತವವಾಗಿ ಇವರೆಂದೂ ಉತ್ಕೃಷ್ಟ ಪ್ರಾಯೋಗಿಕ ಭೌತವಿಜ್ಞಾನಿಯಾಗಿರಲಿಲ್ಲ! ಇವರ ನಿಜ ಸಾಮರ್ಥ್ಯವಿದ್ದದ್ದು—ಗಣಿತ ಮತ್ತು ಸೈದ್ಧಾಂತಿಕ ಭೌತವಿಜ್ಞಾನದಲ್ಲಿ ಆದರೆ ತನ್ನ ಪ್ರಯೋಗಗಳು ಹೇಗಿರಬೇಕು? ಅವು ಯಾವ ದಿಶೆಯಲ್ಲಿ ಸಾಗಬೇಕು? ಪ್ರಯೋಗ ಫಲಿತಾಂಶಗಳು ಹೇಗಿರಬಹುದು? ಆ ಫಲಿತಾಂಶಗಳ ಪರಿಣಾಮವೇನು?—ಎನ್ನುವ ಬಗ್ಗೆ ಅದ್ಭುತ ದೂರದೃಷ್ಟಿ ಇವರದಾಗಿತ್ತು. ಜೆ.ಜೆ.ಯವರ ಶಿಷ್ಯ, ನೊಬೆಲ್ ಪ್ರಶಸ್ತಿ ವಿಜೇತ ಬ್ರಿಟಿಷ್ ಭೌತ ವಿಜ್ಞಾನಿ ಆ್ಯಸ್ಟನ್ (೧೮೭೭–೧೯೪೫) ಬಣ್ಣಿಸಿದ್ದಾರೆ. "ಪ್ರಯೋಗದ ಫಲಿತಾಂಶಗಳು ಪ್ರಕಟವಾದಾಗ ಕೋಡಿ ಬಿರಿದು ಹರಿಯುತ್ತಿದ್ದ ಅವರ ಉತ್ಸಾಹ—ಮಕ್ಕಳಂತೆ—ಕ್ಯಾವೆಂಡಿಶ್‌ನಲ್ಲಿದ್ದ ಎಲ್ಲರನ್ನೂ ಆವಾಹಿಸುತ್ತಿತ್ತು—ಕೆಲವೊಮ್ಮೆ ಮುಜುಗರವಾಗುವಷ್ಟರ ಮಟ್ಟಿಗೆ! ಪ್ರಾಯೋಗಿಕ ಉಪಕರಣಗಳ ಬಳಿ ಜೆ. ಜೆ. ಬಂದರೆ ಸಾಕು, ಎಲ್ಲಿ ಅವು ಕುಸಿದು ಬೀಳುತ್ತವೋ ಎಂಬ ಹೆದರಿಕೆ? ಆದರೆ ಉಪಕರಣಗಳಲ್ಲಿ ಗಂಭೀರ ತೊಂದರೆ ಹಣಿಕಿ, ಪರಿಹರಿಸಲಾಗದೆ ಪ್ರಯೋಗ ನಿರತನಾದವ ಪೂರ್ಣ ಹತಾಶನಾದಾಗ, ಅವರು ಸಹಾಯಕ್ಕೆ ಬರುತ್ತಿದ್ದರು. ಮೇಜಿನ ಮೇಲೆ ಕೈಯೂರಿ, ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಚಿಂತಿಸುತ್ತಿದ್ದರು. ಚಿಕ್ಕ ಕಾಗದದ ಚೂರಿನಲ್ಲಿ, ಪಿಎಚ್‌ಡಿ ನಿಬಂಧದ ಬೆನ್ನಲ್ಲಿ, ಹಳೆಯ ಲಕೋಟೆ ಮೇಲೆ ಅಥವಾ ಪ್ರಯೋಗಾಲಯಕ್ಕೆ ಸಂಬಂಧಿಸಿದ ಚೆಕ್ ಪುಸ್ತಕದ ಬದಿಯಲ್ಲಿ—ಕೆಲವೊಂದು ಚಿತ್ರ ಮತ್ತು ಗಣಿತೋಕ್ತಿ ಬರೆದು ಚುಟುಕು ಸಲಹೆ ನೀಡುತ್ತಿದ್ದರು. ಅಷ್ಟು ಸಾಕಾಗುತ್ತಿತ್ತು—ಜಾದೂಗಾರನ ಟೊಪ್ಪಿಯಿಂದ ಮೊಲವೊಂದು ಕುಪ್ಪಳಿಸಿ ಹೊರಹಾರಿದ ಹಾಗೆ—ಸ್ಫುರಣಗೊಂಡ ಆ ಸಲಹೆ ಪ್ರಯೋಗದಲ್ಲಿ ಹಣಿಕಿದ ಸಮಸ್ಯೆಗೆ ಕಾರಣವೇನೆಂದು ವಿವರಿಸುವುದಲ್ಲದೇ, ಯುಕ್ತ ನಿವಾರಣೆಯನ್ನೂ ಸೂಚಿಸುತ್ತಿತ್ತು. ಉಪಕರಣವನ್ನು ಬಳಸದೇ ಅದರ ಕಾರ್ಯದ ಬಗ್ಗೆ ಅರಿಯುವ ಈ ಅಂತರ್ಬೋಧೆ ಅಸಾಧಾರಣ ಜೀನಿಯಸ್‌ಗೆ ಮಾತ್ರ ಸಾಧ್ಯವೆಂದು ನನ್ನ ನಂಬಿಕೆ."

ಥಾಮ್ಸನ್ ಕಾಲದಲ್ಲಿ ಪ್ರಪಂಚದ ಬೇರೆ ಬೇರೆ ಕಡೆಯಿಂದ ತರುಣ ಪ್ರತಿಭೆಗಳು ಕ್ಯಾವೆಂಡಿಶ್‌ಗೆ ಬಂದರು—ಭೌತ ವಿಜ್ಞಾನದಲ್ಲಿ ಉನ್ನತ ಸಂಶೋಧನೆಗಾಗಿ. ಡೆನ್ಮಾರ್ಕಿನಿಂದ ನೀಲ್ಸ್‌ಬೋರ್ (೧೮೮೫–೧೯೬೨), ನ್ಯೂಝಿಲ್ಯಾಂಡಿನಿಂದ ರುದರ್‌ಫರ್ಡ್ (೧೮೭೧–೧೯೩೭), ಸ್ಕಾಟ್ಲೆಂಡಿನಿಂದ ವಿಲ್ಸನ್ (೧೮೬೯–೧೯೫೯), ಜರ್ಮನಿಯಿಂದ ಹೈಸೆನ್‌ಬರ್ಗ್ (೧೯೦೧–೧೯೭೬), ಕ್ಯಾವೆಂಡಿಶ್‌ಗೆ ಆಗಮಿಸಿದರು; ಆಧುನಿಕ ಭೌತವಿಜ್ಞಾನದ ನಿರ್ಮಾಪಕರಾಗಿ ಅರಳಿದರು. ಇವರೆಲ್ಲರ ಪಾಲಿಗೆ ಥಾಮ್ಸನ್ 'ಜೆ.ಜೆ' ಎಂದೇ ಪ್ರಿಯರಾಗಿದ್ದರು. ಇವರ ಹನ್ನೆರಡು ಮಂದಿ ಶಿಷ್ಯರು ನೊಬೆಲ್ ಪ್ರಶಸ್ತಿ ಪುರಸ್ಕೃತರು. ಈ ತನಕ ೩೭ ಮಂದಿ ನೊಬೆಲ್ ಪ್ರಶಸ್ತಿ ವಿಜೇತರು ಕ್ಯಾವೆಂಡಿಶ್‌ನಿಂದ ಬಂದವರು!

ಅನಿಲ ನಳಿಗೆಯ ಸಮಸ್ಯೆ

ಅನಿಲ ನಳಿಗೆಯಲ್ಲಿ ವಿದ್ಯುತ್ ವಿಸರ್ಜನೆಯ ವಿದ್ಯಮಾನ ಅಂದು (೧೮೯೦)

ಭೌತವಿಜ್ಞಾನಿಗಳ ನೆಚ್ಚಿನ ಸಮಸ್ಯೆಯಾಗಿತ್ತು. ಕಡಿಮೆ ಒತ್ತಡದಲ್ಲಿ ಅನಿಲವನ್ನು ಭರ್ತಿಸಿದ ಗಾಜಿನ ನಳಿಗೆಯೊಳಗೆ ಎರಡು ವಿದ್ಯುತ್ ಧ್ರುವಗಳು (ಎಲೆಕ್ಟ್ರೋಡ್‌ಗಳು), ಒಂದು ಆ್ಯನೋಡ್ (ಬ್ಯಾಟರಿಯ ಧನ ಧ್ರುವಕ್ಕೆ ಜೋಡಿಸಿದೆ), ಇನ್ನೊಂದು ಕ್ಯಾಥೋಡ್ (ಬ್ಯಾಟರಿಯ ಋಣ ಧ್ರುವಕ್ಕೆ ಜೋಡಿಸಿದೆ) ನಳಿಗೆಯಲ್ಲಿ ವಿದ್ಯುತ್ ಹಾಯಿಸಿದಾಗ ನಳಿಗೆಯಿಂದ ಬೇರೆ ಬೇರೆ ಬಣ್ಣದ ಬೆಳಕುಗಳು ಹೊಮ್ಮುತ್ತವೆ—ಭರ್ತಿಸಿದ ಅನಿಲ ಮತ್ತು ಒತ್ತಡವನ್ನು ಅವಲಂಬಿಸಿ. ಈ ಸುಂದರ ವಿದ್ಯಮಾನವನ್ನು ಪ್ರಪ್ರಥಮವಾಗಿ ಗಮನಿಸಿ ಅಧ್ಯಯನಿಸಿದವರು ಜರ್ಮನಿಯ ಭೌತವಿಜ್ಞಾನಿ ಪ್ಲುಕರ್ (೧೮೦೧–೧೮೬೮).

ಆದರೆ ಪ್ಲುಕರ್‌ರಿಗೆ ಆಶ್ಚರ್ಯವಾದದ್ದು—ಅತ್ಯಂತ ಕಡಿಮೆ ಒತ್ತಡದಲ್ಲಿ ಕ್ಯಾಥೋಡಿನ ನೇರ ಎದುರು ಬದಿ, ಆ್ಯನೋಡಿನ ಸಮೀಪ ನಳಿಗೆಯ ಒಳಮೈಯಲ್ಲಿ ಮಿನುಗುತ್ತಿರುವ ಹಸುರುಬಣ್ಣದ ಮಂದ ಪ್ರಕಾಶವನ್ನು ಕಂಡಾಗ. ಈ ವಿಸ್ಮಯವನ್ನು ವಿವರಿಸಲು ಪ್ಲುಕರ್ ವಿಫಲರಾದರು. ಯುಕ್ತ ವಿವರಣೆ ನೀಡಿದವರು ಪ್ಲುಕರ್‌ನ ಶಿಷ್ಯ ಗೋಲ್ಡ್‌ಸ್ಟೈನ್ (೧೮೫೦-೧೯೩೦). ನಳಿಗೆಯಲ್ಲಿ ಕ್ಯಾಥೋಡಿನಿಂದ ಆ್ಯನೋಡಿನೆಡೆಗೆ ಪ್ರವಹಿಸುವ ವಿಶಿಷ್ಟ ಕಿರಣಗಳು ನಳಿಗೆಯ ಒಳಮೈಮೇಲೆ ಪಾತವಾಗಿ ಮಂದ ಪ್ರಕಾಶವನ್ನು (ವೈಜ್ಞಾನಿಕ ಪರಿಭಾಷೆಯಲ್ಲಿ ಈ ವಿದ್ಯಮಾನಕ್ಕೆ ಸಂದೀಪ್ತಿ ಎನ್ನುತ್ತಾರೆ) ಸೃಜಿಸುತ್ತವೆಂದು ವಿವರಿಸಿದ ಗೋಲ್ಡ್‌ಸ್ಟೈನ್ ಆ ಕಿರಣಗಳನ್ನು ಕ್ಯಾಥೋಡ್ ಕಿರಣಗಳೆಂದು ಹೆಸರಿಸಿದರು (೧೮೭೬).

ಮುಂದಿನ ವರ್ಷಗಳಲ್ಲಿ ಬ್ರಿಟಿಷ್ ಭೌತವಿಜ್ಞಾನಿ ವಿಲಿಯಮ್ ಕ್ರೂಕ್ (೧೮೩೨–೧೯೧೯), ಜರ್ಮನಿಯ ವಿಜ್ಞಾನಿಗಳಾದ ಫಿಲಿಪ್‌ಲೆನಾರ್ಡ್ (೧೮೬೨–೧೯೪೭), ಹೆನ್ರಿಕ್‌ಹರ್ಟ್ಸ್ (೧೮೫೭–೧೮೯೪) ಮೊದಲಾದವರು ನಡೆಸಿದ ಪ್ರಯೋಗಗಳು ಕ್ಯಾಥೋಡ್ ಕಿರಣಗಳ ಬಗ್ಗೆ ಇನ್ನಷ್ಟು ಮಾಹಿತಿ ಒದಗಿಸಿದುವು. ಕ್ಯಾಥೋಡ್ ಕಿರಣಗಳು ಸರಳ ರೇಖೆಯಲ್ಲಿ ಚಲಿಸುತ್ತಿದ್ದುವು. ಕಿರಣಗಳಿಗೆ ಒಡ್ಡಿದ ವಸ್ತುವಿನ ಉಷ್ಣತೆ ತುಸು ಏರುತ್ತಿತ್ತು. ಕಿರಣಗಳ ಹಾದಿಯಲ್ಲಿ ಇರಿಸಿದ ಚಿಕ್ಕ ಗಾಳಿಚಕ್ರ ಗರಗರನೆ ತಿರುಗುತ್ತಿತ್ತು—ಗಾಳಿ ಬೀಸುತ್ತಿದೆಯೋ ಎನ್ನುವಂತೆ. ತೆಳ್ಳಗಿನ ಲೋಹದ ಹಾಳೆಯನ್ನು ತೀರ ಸುಲಭದಲ್ಲಿ ತೂರಿ ಸಾಗುವ ಇವುಗಳ ಹಾದಿಯಲ್ಲಿ ದಪ್ಪನೆಯ ಲೋಹದ ಹಾಳೆ ಇರಿಸಿದಾಗ ಅಲ್ಲೇ ತಡೆಯಲ್ಪಟ್ಟು ನೆರಳು ಸೃಷ್ಟಿಯಾಗುತ್ತಿತ್ತು. ಛಾಯಾಗ್ರಾಹಕ ಫಲಕಗಳು ಕ್ಯಾಥೋಡ್ ಕಿರಣಗಳಿಂದ ಮಬ್ಬಾಗುತ್ತಿದ್ದುವು—ಬೆಳಕಿಗೆ ಒಡ್ಡಲ್ಪಟ್ಟರೆ ಹೇಗೋ ಹಾಗೆ. ಕಾಂತಕ್ಷೇತ್ರದಲ್ಲಿ ಬಾಗುವ ಈ ಕಿರಣಗಳು ವಿದ್ಯುತ್ ಕ್ಷೇತ್ರದಲ್ಲಿ ನೇರ ಪಥದಲ್ಲಿ ಚಲಿಸುತ್ತವೆ ಎಂದು ಹೆನ್ರಿಕ್ ಹರ್ಟ್ಸ್ ಪ್ರಾಯೋಗಿಕವಾಗಿ ನಿರೂಪಿಸಿದರು.

ಈ ಎಲ್ಲ ಪ್ರಯೋಗ ಫಲಿತಾಂಶಗಳು ಇನ್ನಷ್ಟುಗೊಂದಲ ಸೃಷ್ಟಿಸಿದುವು. ಕೆಲವು ಫಲಿತಾಂಶಗಳು ಕ್ಯಾಥೋಡ್ ಕಿರಣಗಳು ವಿದ್ಯುತ್ಕಾಂತ ವಿಕಿರಣವಾಗಿರಬಹುದೆಂದು ನಿರೂಪಿಸಿದರೆ, ಇನ್ನು ಕೆಲವು ಕಣಗಳ ಪ್ರವಾಹವಿರಬಹುದೆಂಬ ಸೂಚನೆ ನೀಡಿದುವು. ಕ್ಯಾಥೋಡ್ ಕಿರಣಗಳ ಬೆನ್ನು

ಹತ್ತಿದ ವಿಜ್ಞಾನಿಗಳಲ್ಲಿ ಎರಡು ಪಂಗಡಗಳಾದುವು. ಜರ್ಮನಿಯ ಭೌತವಿಜ್ಞಾನಿಗಳು ಕ್ಯಾಥೋಡ್ ಕಿರಣಗಳೆಂದರೆ ಶಕ್ತಿ ಅಲೆಗಳೆಂದು ತೀರ್ಮಾನಿಸಿದರು. ಬ್ರಿಟಿಷ್, ಫ್ರೆಂಚ್ ಭೌತವಿಜ್ಞಾನಿಗಳ ಅನುಸಾರ ಇವು ಕಣಗಳ ಪ್ರವಾಹ. ಯಾರು ಸರಿ? ತೀರ್ಮಾನಿಸುವವರಾರು? ಜೆ.ಜೆ. ಎಂಬ ಯುಗಪುರುಷನ ಆಗಮನಕ್ಕೆ ಭೂಮಿಕೆ ಸಿದ್ಧವಾಗಿತ್ತು.

ಎಲೆಕ್ಟ್ರಾನ್ ಆವಿಷ್ಕಾರ

ಅನಿಲ ನಳಿಗೆಯಲ್ಲಿ ಕೆಲವು ಮುಖ್ಯ ಬದಲಾವಣೆಗಳನ್ನು ಅಳವಡಿಸಿ ಜೆ.ಜೆ. ಪ್ರಯೋಗ ಪ್ರಾರಂಭಿಸಿದರು. ನಳಿಗೆಯ ಮಧ್ಯಭಾಗದಲ್ಲಿ ತುಸು ಅಂತರವಿರುವಂತೆ ಸಮಾಂತರವಾಗಿ ಎರಡು ಲೋಹದ ಪಟ್ಟಿಗಳನ್ನಿರಿಸಿ ಅವನ್ನು ಬ್ಯಾಟರಿಗೆ ಜೋಡಿಸಿದರು—ಕ್ಯಾಥೋಡ್ ಕಿರಣಗಳ ಮೇಲೆ ವಿದ್ಯುತ್ ಕ್ಷೇತ್ರದ ಪರಿಣಾಮವನ್ನು ಅಧ್ಯಯನಿಸಲು. 'ಕ್ಯಾಥೋಡ್ ಕಿರಣಗಳ ಮೇಲೆ ವಿದ್ಯುತ್ ಕ್ಷೇತ್ರದ ಯಾವ ಪರಿಣಾಮವೂ ಇಲ್ಲ, ಅವು ನೇರ ರೇಖೆಯಲ್ಲೇ ಚಲಿಸುತ್ತವೆ' ಎಂಬ ಹರ್ಟ್ಸ್ ಅವರ ತೀರ್ಮಾನ ಸರಿಯಲ್ಲವೆಂದು ಜೆ.ಜೆ. ಊಹಿಸಿದರು. ಪ್ರಯೋಗದಲ್ಲಿ ಹರ್ಟ್ಸ್ ರೂಪಿಸಿದ ನಳಿಗೆಯ ನಿರ್ವಾತತ್ವದ ಬಗ್ಗೆ ಇವರಿಗೆ ಸಂದೇಹ. ಏಕೆಂದರೆ ಹರ್ಟ್ಸ್ ಪ್ರಯೋಗಗಳನ್ನು ಮಾಡಿದ ದಿನಗಳಲ್ಲಿ ಉತ್ತಮ ನಿರ್ವಾತ ಯಂತ್ರಗಳು ಲಭ್ಯವಿರಲಿಲ್ಲ. ಆದರೆ ಈಗ ಕಾಲ ಬದಲಾಗಿತ್ತು. ಥಾಮ್ಸನ್ ಅನಿಲ ನಳಿಗೆಯನ್ನು ನಿರ್ವಾತ ಯಂತ್ರಕ್ಕೆ ಜೋಡಿಸಿ ಎಷ್ಟು ಸಾಧ್ಯವೋ ಅಷ್ಟು—ಪರಿಪೂರ್ಣವೆನ್ನುವ ಮಟ್ಟಿಗೆ—ನಿರ್ವಾತಗೊಳಿಸಿದರು ಮತ್ತು ಪ್ರಯೋಗ ಮುಂದುವರಿಸಿದರು. ಜೆ.ಜೆ. ಊಹೆ ತಪ್ಪಲಿಲ್ಲ. ಈ ಬಾರಿ ಕ್ಯಾಥೋಡ್ ಕಿರಣಗಳು ನಳಿಗೆಯ ವಿದ್ಯುತ್ ಕ್ಷೇತ್ರದಲ್ಲಿ ಬಾಗಿದ ಪಥದಲ್ಲಿ ಸಾಗುತ್ತಿತ್ತು—ನೇರ ರೇಖೆಯ ಬದಲಾಗಿ. ಕಿರಣಗಳ ಮೇಲೆ ಕಾಂತಕ್ಷೇತ್ರದ ಪರಿಣಾಮವನ್ನು ಅಧ್ಯಯನಿಸಲು ಅನಿಲ ನಳಿಗೆಯ ಇಕ್ಕೆಲಗಳಲ್ಲಿ ದಂಡಕಾಂತಗಳನ್ನಿರಿಸಿ ಪ್ರಯೋಗವನ್ನು ಪುನರಾವರ್ತಿಸಿದರು. ಈ ಬಾರಿ ಕೂಡ ಕಿರಣಗಳು ಬಾಗಿದುವು. ಈ ಎಲ್ಲ ಪ್ರಯೋಗ ಫಲಿತಾಂಶಗಳಿಂದ ಜೆ.ಜೆ. ಅರ್ಥವನ್ನು ಸೋಸಿದರು: ಕ್ಯಾಥೋಡ್ ಕಿರಣಗಳು ಈ ಹಿಂದೆ ಊಹಿಸಿದಂತೆ ವಿದ್ಯುತ್ಕಾಂತ ಕಿರಣವಲ್ಲ. ಪ್ರಾಯಶಃ ಯಾವುದೋ ಕಣಗಳ ನಿರಂತರ ಪ್ರವಾಹವಿರಬೇಕು.

ವಿದ್ಯುತ್ಕಾಂತ ಕ್ಷೇತ್ರದಲ್ಲಿ ಕ್ಯಾಥೋಡ್ ಕಿರಣಗಳು ಬಾಗುವ ದಿಶೆಯ ಆಧಾರದ ಮೇಲೆ ಇವು ಹೊಂದಿರುವ ಕಣಗಳು ಋಣಾವಿಷ್ಟವೆಂದು ಜೆ.ಜೆ. ನಿರ್ಧರಿಸಿದರು. ಕ್ಯಾಥೋಡ್ ಕಿರಣಗಳ ಬಾಗುವಿಕೆಯ ಪ್ರಮಾಣ, ಕಿರಣಗಳಿಗೆ ಒಡ್ಡಿದ ವಿದ್ಯುತ್ ಮತ್ತು ಕಾಂತಕ್ಷೇತ್ರಗಳ ತೀವ್ರತೆಯನ್ನು ಪರಿಗಣಿಸಿ ಈ ಕಣಗಳ ವಿದ್ಯುದಾವೇಶ ಮತ್ತು ರಾಶಿಯ ಅನುಪಾತವನ್ನು $\left(\frac{e}{m}\right)$ ಗುಣಿಸಿದರು. ಇದರ ಬೆಲೆ: ೧.೭೫೮×೧೦^{೧೧} ಕೂಲಂಬ್/ಕೆ.ಜಿ. ಕಣಗಳ ದ್ರವ್ಯರಾಶಿ ಮತ್ತು ವಿದ್ಯುದಾವೇಶವನ್ನು ಕೂಡ ಪ್ರತ್ಯೇಕವಾಗಿ ಅಳೆದರು. ಈ ಕಣಗಳ

ದ್ರವ್ಯರಾಶಿ (೯.೧×೧೦^{-೩೧} ಕೆ.ಜಿ) ಪರಮಾಣುಗಳಲ್ಲಿ ಅತ್ಯಂತ ಕಡಿಮೆ ದ್ರವ್ಯರಾಶಿಯ ಹೈಡ್ರೊಜನ್ ಪರಮಾಣುವಿಗಿಂತಲೂ ಸುಮಾರು ೧೮೦೦ ಪಟ್ಟು ಕಡಿಮೆ.

ನಳಿಗೆಯಲ್ಲಿ ಬೇರೆ ಬೇರೆ ಅನಿಲಗಳನ್ನು ಭರ್ತಿಸಿ, ಬೇರೆ ಬೇರೆ ಲೋಹಗಳನ್ನು ಕ್ಯಾಥೋಡುಗಳಾಗಿ ಬಳಸಿಕೊಂಡು ಪ್ರಯೋಗಗಳನ್ನು ಪುನರಾವರ್ತಿಸಿದರು. ಆದರೆ ಪ್ರತಿಬಾರಿಯೂ ಕಣಗಳ ವಿದ್ಯುದಾವೇಶ ಮತ್ತು ದ್ರವ್ಯರಾಶಿಯ ಅನುಪಾತ ಸ್ಥಿರಾಂಕವೇ ಆಗಿತ್ತು. ಅಂದರೆ ಕ್ಯಾಥೋಡ್ ಕಿರಣಗಳ ಮೂಲ ಯಾವುದೇ ಇರಲಿ, ಅವು ಹೊಂದಿರುವ ಕಣಗಳು ಒಂದೇ ಎಂಬುದು ಸುಸ್ಪಷ್ಟ. ಪರಮಾಣುವಿಗಿಂತಲೂ ಸೂಕ್ಷ್ಮವಾದ ಈ ಕಣಗಳು ಪರಮಾಣುವಿನ ಘಟಕವಾಗಿರಬೇಕೆಂದು ಜೆ.ಜೆ. ತೀರ್ಮಾನಿಸಿದರು. ವಾಸ್ತವವಾಗಿ ಕಣಗಳಿಗೆ ಎಲೆಕ್ಟ್ರಾನ್ ಎಂಬ ಹೆಸರಿಟ್ಟವರು ಇವರಲ್ಲ! ಐರ್ಲೆಂಡಿನ ಭೌತವಿಜ್ಞಾನಿ ಜಾರ್ಜ್ ಜೋನ್‌ಸ್ಟನ್ ಸ್ಟೋನಿ (೧೮೨೯–೧೯೧೧), ವಿದ್ಯುತ್ತಿಗೆ ವಿದ್ಯುದಾವೇಶ ಉಳ್ಳ ಸೂಕ್ಷ್ಮ ಕಣಗಳ ನಿರಂತರ ಪ್ರವಾಹ ಕಾರಣವಿರಬಹುದೆಂದು ಊಹಿಸಿ ಆ ಕಣಗಳನ್ನು ಎಲೆಕ್ಟ್ರಾನುಗಳೆಂದು ಕರೆದರು. (೧೮೯೦) ಜೆ.ಜೆ. ಆವಿಷ್ಕರಿಸಿದ್ದು— ಸ್ಟೋನಿ ಊಹಿಸಿದ ಕಣಗಳನ್ನು ಎಲೆಕ್ಟ್ರಾನುಗಳನ್ನು.

ಪರಮಾಣು ಪ್ರತಿರೂಪ

ಎಲೆಕ್ಟ್ರಾನ್ ಆವಿಷ್ಕಾರಕ್ಕಿಂತ ಕೇವಲ ಒಂದು ವರ್ಷದ ಮೊದಲು ಎರಡು ನೂತನ ವಿದ್ಯಮಾನಗಳು ತೀರ ನಾಟಕೀಯವಾಗಿ ಆವಿಷ್ಕರಿಸಲ್ಪಟ್ಟುವು. ಜರ್ಮನಿಯ ಭೌತವಿಜ್ಞಾನಿ ವಿಲ್‌ಹೆಲ್ಮ್ ಕೊನ್ರಾಡ್ ರಂಟ್ಜನ್ (೧೮೪೫–೧೯೨೩) ಅನಿಲ ನಳಿಗೆಯಲ್ಲಿ ವಿದ್ಯುತ್ ವಿಸರ್ಜನೆ ಬಗ್ಗೆ ಅಧ್ಯಯನಿಸುತ್ತಿದ್ದಾಗ, ನಳಿಗೆಯಿಂದ ಹೊಮ್ಮುತ್ತಿರುವ ನೂತನ ವಿಕಿರಣ—ಎಕ್ಸ್-ಕಿರಣಗಳನ್ನು ಅಚಾನಕ್ಕಾಗಿ ಆವಿಷ್ಕರಿಸಿದರು (೧೮೯೫, ಡಿಸೆಂಬರ್). ಎಕ್ಸ್-ಕಿರಣಗಳ ಅಧ್ಯಯನಕ್ಕೆ ತೊಡಗಿದ ಫ್ರೆಂಚ್ ಭೌತವಿಜ್ಞಾನಿ ಆ್ಯಂಟೋಯಿನ್ ಹೆನ್ರಿ ಬೆಕೆರೆಲ್ (೧೮೫೨–೧೯೦೮) ಯುರೇನಿಯಮ್ ಅದುರಿನಿಂದ ಅನೈಚ್ಛಿಕವಾಗಿ ಶಕ್ತಿಶಾಲಿ ವಿಕಿರಣಗಳು ಉತ್ಸರ್ಜನೆಗೊಳ್ಳುತ್ತಿರುವ ಪ್ರಕ್ರಿಯೆಯನ್ನು (ವಿಕಿರಣ ಪಟುತ್ವ ಅಥವಾ ರೇಡಿಯೋ ಆ್ಯಕ್ಟಿವಿಟಿ) ನಾಟಕೀಯವಾಗಿ ಆವಿಷ್ಕರಿಸಿದರು (೧೮೯೬, ಮಾರ್ಚ್ ೯) ಇದೀಗ ಎಲೆಕ್ಟ್ರಾನಿನ ಸರದಿ. ಶಕ್ತಿಶಾಲಿಯಾದ ಎಲೆಕ್ಟ್ರಾನುಗಳು ಲೋಹದ ಹಾಳೆ ಮೇಲೆ ಪಾತವಾದಾಗ ಎಕ್ಸ್-ಕಿರಣಗಳು ಸೃಷ್ಟಿಯಾಗುತ್ತವೆಂದು ಪ್ರಯೋಗಗಳಿಂದ ಸ್ಪಷ್ಟವಾದರೆ, ವಿಕಿರಣಪಟುತ್ವದಲ್ಲಿ ಪರಮಾಣುವಿನಿಂದ ಉತ್ಸರ್ಜನೆಗೊಳ್ಳುವ ಮೂರು ಬಗೆಯ ವಿಕಿರಣಗಳಲ್ಲಿ ಋಣಾವಿಷ್ಟ ವಿಕಿರಣ (ಉಳಿದವೆರಡು-ಧನಾವಿಷ್ಟ ಮತ್ತು ಆವೇಶರಹಿತ) ಹೊಂದಿರುವ ಕಣಗಳು— ಎಲೆಕ್ಟ್ರಾನುಗಳೆಂದು ಪ್ರಯೋಗಗಳು ಸಾರಿದುವು. ಒಟ್ಟಿನಲ್ಲಿ ಈ ಮೂರೂ ಆವಿಷ್ಕಾರಗಳು ಅಗೋಚರ ಪರಮಾಣುವಿನ ಅನಂತ ವಿಸ್ಮಯಗಳಿಗೆ ಸೇಸೆ ಪ್ರೇಷಿಸಿದುವು; ನೂತನ ಭೌತವಿಜ್ಞಾನಕ್ಕೆ ನಾಂದಿ ಹಾಡಿದುವು.

ಅಂದು ಕ್ಯಾವೆಂಡಿಶ್‌ನಲ್ಲಿ ಪರಮಾಣು ಸಂಬಂಧಿತ ಸಂಶೋಧನ ಚಟುವಟಿಕೆಗಳು ಜೆ.ಜೆ. ನೇತೃತ್ವದಲ್ಲಿ ಭರದಿಂದ ಸಾಗುತ್ತಿತ್ತು. "ಅಗೋಚರ ಪರಮಾಣು ಹೇಗಿರಬಹುದು?" ಎಂಬ ಪ್ರಶ್ನೆಗೆ "ಪ್ರಾಯಶಃ ಹೀಗಿರಬಹುದು" ಎಂದು ಉತ್ತರಿಸಲು ಪರಮಾಣುವಿನ ಮಾದರಿ ಅಥವಾ ಪ್ರತಿರೂಪ ಅವಶ್ಯವಾಗಿತ್ತು. ಅಂಥ ಒಂದು ಮಾದರಿಯನ್ನು ೧೯೦೪ ರಲ್ಲಿ ಜೆ.ಜೆ. ಮಂಡಿಸಿದರು. ಇದು 'ಭೃಂಗದ ಬೆನ್ನೇರಿ ಬಂದ ಕಲ್ಪನಾ ವಿಲಾಸವಲ್ಲ', ಲಭ್ಯ ಪ್ರಾಯೋಗಿಕ ಫಲಿತಾಂಶಗಳ ಆಧಾರದಲ್ಲಿ ಪರಮಾಣುವಿನ ರಚನೆಯನ್ನು ಸ್ಥೂಲವಾಗಿ ವಿವರಿಸುವ ಪ್ರಯತ್ನ.

ಥಾಮ್ಸನ್ ಮಂಡಿಸಿದ ಪರಮಾಣು ಪ್ರತಿರೂಪದ ಪ್ರಕಾರ ಗೋಲಾಕಾರದ ಪರಮಾಣುವಿನಲ್ಲಿ ಧನಾವಿಷ್ಟ ದ್ರವ್ಯವಿದೆ. ಈ ದ್ರವ್ಯದಲ್ಲಿ ಧನಾವೇಶಗಳನ್ನು ಸರಿದೂಗಿಸಿ ಒಟ್ಟು ಪರಮಾಣುವನ್ನು ವಿದ್ಯುತ್ತಟಸ್ಥವಾಗಿರಿಸುವಷ್ಟು ಸಂಖ್ಯೆಯಲ್ಲಿ ಎಲೆಕ್ಟ್ರಾನುಗಳಿವೆ—ಬಚ್ಚಂಗಾಯಿಯಲ್ಲಿ ತಿರುಳು ಮತ್ತು ಆ ತಿರುಳಿನಲ್ಲಿ ಹುದುಗಿರುವ ಬೀಜಗಳ ಹಾಗೆ. ಪ್ರತಿರೂಪವೇನೊ ಸುಂದರ; ಆದರೆ ಒಡ್ಡಿದ ಸಮಸ್ಯೆಗಳು ಅಪಾರ. ಸ್ವಯಂ ಥಾಮ್ಸನ್ನರ ಶಿಷ್ಯರಾದ ರುದರ್‌ಫರ್ಡ್ ನಡೆಸಿದ ಆಲ್ಫಾ ಕಣಗಳ ಚದರಿಕೆಯ ಪ್ರಯೋಗ ಫಲಿತಾಂಶಗಳು ಜೆ.ಜೆ. ಹೇಳಿದಂತೆ ಪರಮಾಣುಗಳು ಇರಲಾರವೆಂಬ ಸೂಚನೆ ನೀಡಿದುವು. ವಿಜ್ಞಾನದಲ್ಲಿ ವ್ಯಕ್ತಿ ಮುಖ್ಯವಲ್ಲ. ಅಂತಿಮವಾಗಿ ತಥ್ಯವೊಂದೇ ಮುಖ್ಯ. ಇಷ್ಟಾದರೂ ಅಷ್ಟೇ. ಜೆ.ಜೆ.ಯವರ ಹಿರಿಮೆ, ಗರಿಮೆ, ಅಂತಸ್ತುಗಳೇನೇ ಇರಲಿ, ಅವರು ಮಂಡಿಸಿದ ಪರಮಾಣು ಪ್ರತಿರೂಪವನ್ನು ತಿರಸ್ಕರಿಸಿ, ರುದರ್‌ಫರ್ಡ್ ಹೊಸದೊಂದು ಪ್ರತಿರೂಪವನ್ನು ನೀಡಿದರು. ರುದರ್‌ಫರ್ಡ್ ಪ್ರಣೀತ ಪರಮಾಣು ಪ್ರತಿರೂಪದ ಅನುಸಾರ ಪರಮಾಣುವಿಗೆ ಅದರ ದ್ರವ್ಯವೆಲ್ಲ ಗಿಡಿದಿರುವ ಧನಾವಿಷ್ಟ ಕೇಂದ್ರವಿದೆ. ಈ ಕೇಂದ್ರಕ್ಕೆ ಪರಮಾಣು ಬೀಜ ಅಥವಾ ನ್ಯೂಕ್ಲಿಯಸ್ ಎಂದು ಹೆಸರು. ನ್ಯೂಕ್ಲಿಯಸ್ ಸುತ್ತ ವಿವಿಧ ಕಕ್ಷೆಗಳಲ್ಲಿ ಋಣಾವಿಷ್ಟ ಎಲೆಕ್ಟ್ರಾನುಗಳು ಪರಿಭ್ರಮಿಸುತ್ತಿವೆ—ಸೂರ್ಯನ ಸುತ್ತ ಪರಿಭ್ರಮಿಸುತ್ತಿರುವ ಗ್ರಹಗಳಂತೆ. ಈ ಪರಮಾಣು ಪ್ರತಿರೂಪ ಆಲ್ಫಾ ಕಣಗಳ ಚದರಿಕೆ ಪ್ರಯೋಗದ ಫಲಿತಾಂಶಗಳನ್ನು ವಿವರಿಸಲು ಶಕ್ತವಾದರೂ, ಪರಮಾಣುವಿನ ಸ್ಥಿರತೆ, ಪರಮಾಣುವಿನ ರೋಹಿತದಲ್ಲಿ ಗೋಚರಿಸುವ ರೇಖೆಗಳು....ಇತ್ಯಾದಿಗಳಿಗೆ ಸಮರ್ಪಕ ವಿವರಣೆ ನೀಡಲು ವಿಫಲವಾಯಿತು.

ಭೌತವಿಜ್ಞಾನದಲ್ಲಿ ಉನ್ನತ ಸಂಶೋಧನೆಗಾಗಿ ಡೆನ್ಮಾರ್ಕಿನಿಂದ ಕ್ಯಾವೆಂಡಿಶ್‌ಗೆ ಬಂದ (೧೯೧೧) ನೀಲ್ಸ್ ಬೋರ್, ರುದರ್‌ಫರ್ಡ್‌ರ ಪರಮಾಣು ಪ್ರತಿರೂಪಕ್ಕೆ ಶಕಲಸಿದ್ಧಾಂತದ ಪರಿಕಲ್ಪನೆಗಳನ್ನು ಅಳವಡಿಸಿ ಪರಿಪೂರ್ಣಕ್ಕೆ ಸನ್ನಿಹಿತ ಪ್ರತಿರೂಪವನ್ನು ಮಂಡಿಸಿದರು. (೧೯೧೩) ಥಾಮ್ಸನ್—ರುದರ್‌ಫರ್ಡ್—ಬೋರ್, ಈ ಮೂವರದು ಎಣೆ ಇಲ್ಲದ ಪ್ರತಿಭೆ. ಒಟ್ಟು ಸೇರಿದಾಗ ಮತ್ತೆ ಕೇಳಬೇಕೇ? ಅಲ್ಲಿ ನಡೆಯುತ್ತಿದ್ದ ಚಿಂತನ ಮಂಥನದಲ್ಲಿ ಹೊಸ ಹೊಸ ಪರಿಕಲ್ಪನೆಗಳು ಅನಾವರಣಗೊಳ್ಳುತ್ತಿದ್ದುವು. ಪರಮಾಣು

ಭೌತವಿಜ್ಞಾನಕ್ಕೆ ನೂತನ ಆಯಾಮ ನಿರ್ಮಾಣವಾಗುತ್ತಿತ್ತು.

ಸರಳತೆಯ ಸಾಕಾರ

ಎಲೆಕ್ಟ್ರಾನಿನ ಆವಿಷ್ಕಾರಕ್ಕಾಗಿ ೧೯೦೬ ರಲ್ಲಿ ಥಾಮ್ಸನ್ ನೊಬೆಲ್ ಪ್ರಶಸ್ತಿ ಪಡೆದರು. ಇದರೊಂದಿಗೆ ಹಲವು ಪ್ರಶಸ್ತಿ, ಗೌರವಗಳು ಇವರನ್ನು ಅರಸಿ ಬಂದುವು. ಇಂಗ್ಲೆಂಡಿನ ಅತ್ಯುನ್ನತ ಪ್ರಶಸ್ತಿಯಾದ 'ನೈಟ್‌ಹುಡ್' ಪ್ರಶಸ್ತಿಯನ್ನು ೧೯೦೮ರಲ್ಲಿ ಇವರಿಗೆ ಸಲ್ಲಿಸಿ ಬ್ರಿಟಿಷ್ ಸರಕಾರ ಗೌರವಿಸಿತು. ಈ ಎಲ್ಲ ಸಂಭ್ರಮಗಳಲ್ಲಿ ತಮ್ಮ ಶೇಷಾಯುಷ್ಯವನ್ನು ಕಳೆದು ಸಾಯುಜ್ಯ ಹೊಂದಬಹುದಿತ್ತು. ಆದರೆ ಜೆ.ಜೆ. ಜಾಯಮಾನ ಅದಾಗಿರಲಿಲ್ಲ. ಏಕೆಂದರೆ ಅವರ ಉಸಿರೇ ಭೌತವಿಜ್ಞಾನವಾಗಿತ್ತು.

ಧನಾವಿಷ್ಟ ಕಿರಣಗಳನ್ನು ಬಳಸಿಕೊಂಡು ಪರಮಾಣುಗಳನ್ನು ಬೇರ್ಪಡಿಸುವ ಬಗ್ಗೆ ಸೂಚನೆ ನೀಡಿದರು (೧೯೧೦), ಇದನ್ನು ಅನುಸರಿಸಿದ ಇವರ ಶಿಷ್ಯ ಆ್ಯಸ್ಟನ್ 'ರಾಶಿ ರೋಹಿತ ದರ್ಶಕ'ವೆಂಬ ಉಪಕರಣವನ್ನು ಉಪಜ್ಞಿಸಿದರು. ಒಂದೇ ಧಾತುವಿನ ಬೇರೆ ಬೇರೆ ಬಗೆಯ ಪರಮಾಣುಗಳ (ಸಮಸ್ಥಾನಿಗಳು) ಪತ್ತೆ ಈ ಉಪಕರಣದಿಂದ ಸಾಧ್ಯವಾಯಿತು. ಆವಿಷ್ಟ ಕಣಗಳ ಪತ್ತೆಗೆ ಉಪಕರಣವನ್ನು ನಿರ್ಮಿಸುವ ಸಲಹೆಯನ್ನು ಜೆ.ಜೆ. ನೀಡಿದರು (೧೯೦೩). ಸಲಹೆ ಸ್ವೀಕರಿಸಿದ ಇವರ ಶಿಷ್ಯ ವಿಲ್ಸನ್ ಅಂಥ ಉಪಕರಣವನ್ನು ನಿರ್ಮಿಸಿದರು ಕೂಡ (೧೯೧೧). ಪ್ರಾಥಮಿಕ ಕಣಗಳ ಅನ್ವೇಷಣೆಯಲ್ಲಿ ಈ ಉಪಕರಣ ಮುಖ್ಯಪಾತ್ರ ವಹಿಸಿತು. ಜೆ.ಜೆ.ಯವರ ಈ ಉಭಯ ಶಿಷ್ಯರೂ ಆ್ಯಸ್ಟನ್ (೧೯೨೨ ರಲ್ಲಿ) ಮತ್ತು ವಿಲ್ಸನ್ (೧೯೨೭ರಲ್ಲಿ) ನೊಬೆಲ್ ಪ್ರಶಸ್ತಿ ಪಡೆದರು.

ಜೆ.ಜೆ.ಯವರ ಪತ್ನಿ–ರೋಸ್‌ಪೆಗೆಟ್, ಭೌತವಿಜ್ಞಾನದ ಅಧ್ಯಯನಕ್ಕೆ ಬಂದ ಈಕೆ ಲಗ್ಗೆ ಹಾಕಿದ್ದು ಥಾಮ್ಸನ್ನರ ಹೃದಯಕ್ಕೆ! ಇವರಿಬ್ಬರ ಮಗ, ಜಾರ್ಜ್ ಪೆಗೆಟ್ ಥಾಮ್ಸನ್ (೧೮೯೨–೧೯೭೫) ತಂದೆಯ ಗರಡಿಯಲ್ಲಿ ಪಳಗಿ ಭೌತವಿಜ್ಞಾನದಲ್ಲಿ ಹೊಸ ಎತ್ತರ ಏರಿದರು. ತಂದೆ ಜೆ.ಜೆ. ಎಲೆಕ್ಟ್ರಾನುಗಳು ಕಣವೆಂದು ಹೇಳಿದರೆ, ಮಗ ಜಿ.ಪಿ. "ಅವು ಕಣಗಳೇ ಆಗಬೇಕಾಗಿಲ್ಲ. ಅಲೆಯ ರೂಪದಲ್ಲೂ ಇರುತ್ತವೆ", ಎಂದು ಪ್ರಾಯೋಗಿಕವಾಗಿ ನಿರೂಪಿಸಿದರು (೧೯೨೭) ಪರಮಾಣು ಪ್ರಪಂಚದ ವ್ಯವಹಾರಗಳೇ ಹೀಗೆ. ಆ ಸೂಕ್ಷ್ಮಾತಿಸೂಕ್ಷ್ಮ ಪ್ರಪಂಚದಲ್ಲಿ ಅನಿಶ್ಚಿತತೆ ಸಹಜ ಸ್ವಭಾವ. ಜರ್ಮನಿಯಿಂದ ಕ್ಯಾವೆಂಡಿಶ್‌ಗೆ ಬಂದ ಹೈಸೆನ್ ಬರ್ಗ್ ಪ್ರವರ್ತಿಸಿದ ಅನಿಶ್ಚಿತತಾ ತತ್ತ್ವ ಪರಮಾಣು ಮತ್ತು ನ್ಯೂಕ್ಲಿಯರ್ ಭೌತವಿಜ್ಞಾನದ ಅಭಿವರ್ಧನೆಗೆ ನೂತನ ಮುಂಚಿಕೆ ಒದಗಿಸಿತು. ಎಲೆಕ್ಟ್ರಾನಿನ ತರಂಗ ಅಥವಾ ದ್ವಂದ್ವ ಸ್ವಭಾವದ ಆವಿಷ್ಕಾರಕ್ಕಾಗಿ ಜಿ.ಪಿ. ಥಾಮ್ಸನ್ ನೊಬೆಲ್ ಪ್ರಶಸ್ತಿ ಪಡೆದರು (೧೯೩೭) ಎಲೆಕ್ಟ್ರಾನಿನ ಸಂವೇಗ ಮತ್ತು ಸ್ಥಾನವನ್ನು ಏಕಕಾಲದಲ್ಲಿ ನಿಖರವಾಗಿ ಅಳೆಯಲು ಸಾಧ್ಯವಾಗದು—ಅನಿಶ್ಚಿತತೆ ಅಲ್ಲಿ ಹಣಕುತ್ತದೆ—ಎನ್ನುವ ನವಸಿದ್ಧಾಂತವನ್ನು ಮಂಡಿಸಿದ ಹೈಸೆನ್‌ಬರ್ಗ್ ಆ ಮೊದಲೇ ೧೯೩೨ ರಲ್ಲಿ ನೊಬೆಲ್ ಪ್ರಶಸ್ತಿ ಪಡೆದಿದ್ದರು.

ಸರಳತೆಯ ಸಾಕಾರಮೂರ್ತಿ ಜೆ.ಜೆ. ಬಾಹ್ಯ ಆಡಂಬರ, ಡೌಲುಗಳಿಗೆ ಕಿಂಚಿತ್ತೂ ಬೆಲೆ ನೀಡಿದವರಲ್ಲ. ಭಾರವಾದ ಬೂಟು, ಅಗಲ ಹ್ಯಾಟು, ದೊಗಳೆ ಪ್ಯಾಂಟು, ದಪ್ಪನೆಯ ಸರಾಯಿ—ಇವರ ನಿತ್ಯದ ಪೋಷಾಕು. ಇದಕ್ಕೊಪ್ಪುವಂತೆ ಪೊದೆ ಮೀಸೆ. ಥಾಮ್ಸನ್ ಒಂದೇ ಸರಾಯಿಯನ್ನು ನಿತ್ಯವೂ ಧರಿಸುತ್ತಿದ್ದರು. ಒಂದು ದಿನ ಇವರು ಸಂಶೋಧನಾಲಯಕ್ಕೆ ತೆರಳಿದ ಬೆನ್ನಲ್ಲೇ, ಇವರ ಪತ್ನಿ ಪೆಗೆಟ್ ಕೋಣೆಗೆ ಬಂದಾಗ ಎಂದಿನ ಆ ಸರಾಯಿ ಕುರ್ಚಿಯ ಬಳಿ ತೂಗಾಡುತ್ತಿರುವುದನ್ನು ಕಂಡಾಗ ಗಾಬರಿಯಾದರು. ಪ್ರಾಯಶಃ ಪ್ರೊಫೆಸರ್ ಮಹಾಶಯರು ಯಾವುದೋ ಗುಂಗಿನಲ್ಲಿ ತಲ್ಲೀನರಾಗಿ, ಸರಾಯಿ ಧರಿಸದೆ ನೇರ ಹೋದರೇನೋ ಎಂಬ ಗುಮಾನಿಯಿಂದ ಹೊರ ಧಾವಿಸಿದರು—ಕರೆಯಲೆಂದು. ಆದರೆ ಬಚಾವ್, ಜೆ.ಜೆ. ದೂರದಲ್ಲಿ ಧಾವಿಸುತ್ತಿದ್ದರು—ಹೊಸ ಸರಾಯಿಯೊಂದಿಗೆ!

ಮೂವತ್ತೈದು ವರ್ಷಗಳ ಕಾಲ ಕ್ಯಾವೆಂಡಿಶ್‌ನ ಸರ್ವಾಂಗೀಣ ಅಭಿವೃದ್ಧಿಗೆ ತನ್ನನ್ನು ಪೂರ್ಣವಾಗಿ ಸಮರ್ಪಿಸಿಕೊಂಡ ಥಾಮ್ಸನ್, ೧೯೧೯ರಲ್ಲಿ ಹೊಣೆಯನ್ನು ರುದರ್ಫರ್ಡ್‌ರಿಗೆ ಹಸ್ತಾಂತರಿಸಿದರು. ಕ್ಯಾವೆಂಡಿಶ್‌ನ ನಿರ್ದೇಶಕತ್ವದಿಂದ ವಿರಮಿಸಿದರೂ, ಭೌತವಿಜ್ಞಾನದ ಉಪನ್ಯಾಸ ಮತ್ತು ಸಂಶೋಧನೆಯಿಂದ ವಿರಮಿಸಲಿಲ್ಲ. ತನ್ನ ಕೊನೆ ದಿನದ ತನಕವೂ ಟ್ರಿನಿಟಿ ಕಾಲೇಜಿನಲ್ಲಿ ಭೌತವಿಜ್ಞಾನವನ್ನು ಬೋಧಿಸಿದರು; ತರುಣ ಸಂಶೋಧಕರಿಗೆ ಮಾರ್ಗದರ್ಶನ ನೀಡಿದರು.

ನ್ಯೂಟನ್ (೧೬೪೨–೧೭೨೭) ಬಳಿಕ ಥಾಮ್ಸನ್ ಅವರಂತೆ ಬ್ರಿಟಿಷ್ ಭೌತವಿಜ್ಞಾನವನ್ನು ಆವಾಹಿಸಿದವರು ಇನ್ನೊಬ್ಬರಿಲ್ಲ. ಪರಮಾಣು ಭೌತವಿಜ್ಞಾನದ ಈ ದ್ರಷ್ಟಾರ, ೧೯೪೦ ಆಗಸ್ಟ್ ೩೦ರಂದು ನಿಧನರಾದರು. ಇವರ ಸಮಾಧಿಯನ್ನು ವಿಜ್ಞಾನದ ಸಾರ್ವಕಾಲಿಕ ಶ್ರೇಷ್ಠ ವಿಜ್ಞಾನಿಯಾದ ನ್ಯೂಟನ್ನನ ಸಮಾಧಿಯ ಬಳಿ ನಿರ್ಮಿಸಿ ಪ್ರಪಂಚ ತನ್ನ ಚರಮಾಂಜಲಿಯನ್ನು ಅರ್ಪಿಸಿತು.

ಎಲೆಕ್ಟ್ರಾನ್ ಆವಿಷ್ಕಾರ ಭವಿಷ್ಯದಲ್ಲಿ ಜನಜೀವನದ ಮೇಲೆ ಬೀರಬಹುದಾದ ಪ್ರಭಾವದ ಬಗ್ಗೆ ಥಾಮ್ಸನ್ ಸೇರಿದ ಹಾಗೆ, ಅಂದು ಯಾರಿಗೂ ಸ್ಪಷ್ಟ ಕಲ್ಪನೆ ಇರಲಿಲ್ಲ. ಹುಟ್ಟಿದ ಕೂಸಿನ ಭವಿಷ್ಯವನ್ನು ಕಣಿ ನುಡಿಯಲು ಎಂದಾದರೂ ಸಾಧ್ಯವೆ? ವಾಸ್ತವವಾಗಿ ಅಂದು ಎಲೆಕ್ಟ್ರಾನ್ ಆವಿಷ್ಕಾರದ ಸವಿ ನೆನಪಿಗಾಗಿ ಕ್ಯಾವೆಂಡಿಶ್‌ನಲ್ಲಿ ಏರ್ಪಾಡಾಗಿದ್ದ ಬೋಜನ ಕೂಟದಲ್ಲಿ ಹಲವು ಭೌತವಿಜ್ಞಾನಿಗಳು 'ಇದೊಂದು ನಿಷ್ಪ್ರಯೋಜಕ ಕಣ' ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರಂತೆ. ಆದರೆ ವರ್ತಮಾನದ ಚಿತ್ರ ಬೇರೆಯೇ.

ಇಂದು ಎಲೆಕ್ಟ್ರಾನಿಕ್ ಯುಗ. ಎಲ್ಲಿ ನೋಡಿದರಲ್ಲಿ ಎಲೆಕ್ಟ್ರಾನಿಕ್ ಉಪಕರಣಗಳು—ರೇಡಿಯೋ, ಟಿ.ವಿ, ಕಂಪ್ಯೂಟರ್....ಇವುಗಳಲ್ಲೆಲ್ಲ ಎಲೆಕ್ಟ್ರಾನುಗಳು ಪ್ರವಹಿಸುತ್ತಿವೆ, ಲಾಸ್ಯವಾಡುತ್ತಿವೆ—ನಮ್ಮ ಅಂಕೆಗೆ ಅನುಗುಣವಾಗಿ! ಕೆಲವೇ ಕೆಲವು ಡಾಲರ್ ವೆಚ್ಚದ ಅನಿಲ ನಳಿಗೆಗಳ ಬದಲಿಗೆ, ಬಿಲಿಯ ಡಾಲರ್ ವೆಚ್ಚದ ವೇಗೋತ್ಕರ್ಷಕಗಳು.

ಬಂದಿವೆ. ಅಲ್ಲಿ ಎಲೆಕ್ಟ್ರಾನುಗಳಿಗೆ ಶಕ್ತಿ ಊಡಿ, ಆ ಶಕ್ತಿಶಾಲಿ ಎಲೆಕ್ಟ್ರಾನುಗಳನ್ನು ಬಳಸಿಕೊಂಡು ದ್ರವ್ಯದ ಬಗ್ಗೆ ಇನ್ನಷ್ಟು ಮಾಹಿತಿ ಸಂಗ್ರಹಿಸಲಾಗುತ್ತಿದೆ.

ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್ ಮತ್ತಿತರ ಕಣಗಳ ಮೂಲಭೂತ ಘಟಕಗಳಾವುವು? ಈ ಕಣಗಳು ಸೃಷ್ಟಿಯಾಗಿರುವುದಾದರೂ ಹೇಗೆ? ಕಣಗಳ ನಡುವಣ ಸಂಕೀರ್ಣ ಕ್ರಿಯೆಗಳನ್ನೆಲ್ಲ ವಿವರಿಸುವ ಏಕ ಸಿದ್ಧಾಂತವಿದೆಯೇ?— ಇವು ಇಂದಿನ ಭೌತವಿಜ್ಞಾನದ ಮುಂಚೂಣಿ ಸಮಸ್ಯೆಗಳು. ವಿಶ್ವದ ಹುಟ್ಟಿನ ರಹಸ್ಯ ಅಡಗಿರುವ ಈ ಪ್ರಶ್ನೆಗಳಿಗೆ ಉತ್ತರದ ಹುಡುಕಾಟದಲ್ಲಿ ಭೌತವಿಜ್ಞಾನಿಗಳು ನಿರತರಾಗಿದ್ದಾರೆ. ಆದರೆ ಉತ್ತರಿಸುವ ಥಾಮ್ಸನ್ ಯಾರು?



ನಾವು ಮಾಡುವುದೆಲ್ಲವೂ ಜೀಸಸ್‌ಗಾಗಿ, ಬಡವರ ಸೇವೆ ಮಾಡುವಾಗ ಅವರಲ್ಲಿ ಜೀಸಸ್‌ನನ್ನು ಕಾಣುತ್ತೇವೆ.

ನಾನು ಖಾಲಿ ತಂತಿ ಅಷ್ಟೆ; ಅದರಲ್ಲಿ ಹರಿಯುವ ಕರೆಂಟು ದೇವರದು.

ನಾನು ನನ್ನ ಪ್ರಾಣವನ್ನಾದರೂ ಬಿಟ್ಟೇನು, ನನ್ನ ನಂಬಿಕೆಯನ್ನು ಮಾತ್ರ ಬಿಡಲಾರೆ.

ಮದರ್ ತೆರೆಸಾ

ಭ್ರಷ್ಟಾಚಾರ ನಿರ್ಮೂಲನ ಸಾಧ್ಯವೆ?

ಬಿ. ಆರ್. ಪರಿಣೀತಾ
೫೬೧, ೪ನೇ ಮುಖ್ಯ ರಸ್ತೆ, 'ಎ' ಬ್ಲಾಕ್
೩ನೇ ಹಂತ, ರಾಜಾಜಿನಗರ
ಬೆಂಗಳೂರು-೫೬೦ ೦೧೦

ಭ್ರಷ್ಟಾಚಾರ ಇಂದು ಭಾಷಣ, ಲೇಖನ, ಚರ್ಚೆ, ಭಿತ್ತಿಚಿತ್ರ, ನಾಟಕ, ಟಿ.ವಿ. ಮುಂತಾದ ಸಂವಹನ ಮಾಧ್ಯಮಗಳಿಗೆ ವಿಪುಲ ಗ್ರಾಸ ಒದಗಿಸುವ ಕಾಮಧೇನು! ವ್ಯಕ್ತಿ ಮತ್ತು ಕುಟುಂಬ ನೆಲೆಯಲ್ಲಿ ಇದರ ಅರಿವು ಮೂಡಿ ಭ್ರಷ್ಟಾಚಾರ ವಿರೋಧೀ ದಿಟ್ಟ ನಿಲವು ಬೇರುಬಿಟ್ಟ ವಿನಾ ಎಲ್ಲ ಬಗೆಯ ಚಿಂತನೆಗಳೂ ಮತ್ತೆ ಭ್ರಷ್ಟಾಚಾರಕ್ಕೆ ಎರೆಯುವ ಇಂಧನ ಆಗುತ್ತವೆ: ಗೋಷ್ಠಿಗೆ ಅಥವಾ ಟಿವಿಗೆ ಹಣವೆಲ್ಲಿಂದ ಒದಗಿತು? ಆ ಕಂಪನಿ ತನ್ನ ಲಾಭ ಗಿಟ್ಟಿಸುವ ಬಗೆ ಏನು? ಇದೊಂದು ವಿಷವರ್ತುಲ. ಆರ್ಜವ, ನೈತಿಕ ಸ್ಥೈರ್ಯ, ಸರಳ ಜೀವನ, ಗಹನ ಚಿಂತನ, ಸ್ವಾರ್ಥರಾಹಿತ್ಯ ಮುಂತಾದ ಜೀವನ ಪೋಷಕ ಹಾಗೂ ಪರಿಸರ ಸಂರಕ್ಷಕ ಸದ್ಗುಣಗಳು ವ್ಯಕ್ತಿಯ ದೈನಂದಿನ ಜೀವನದ ಉಸಿರು, ಅಶನ ಮತ್ತು ವಸನವಾದ ಹೊರತು ಈ ರಕ್ತಬೀಜಾಸುರನ ದುಷ್ಟಸಂತಾನ ವೃದ್ಧಿಗೆ ಕೊನೆ ಇಲ್ಲ.

ಭಾರತ ಸ್ವಾತಂತ್ರ್ಯ ಪಡೆದು ಸುಮಾರು ಐದು ದಶಕಗಳು ಸಂದಿರುವ ಇಂದು, ಭಾರತೀಯರು ಪ್ರಗತಿ ಸಾಧಿಸಲು ಎಷ್ಟರ ಮಟ್ಟಿಗೆ ಶ್ರಮಿಸುತ್ತಿರುವರು ಎಂಬುದನ್ನು ಕುರಿತು ಚಿಂತನೆ ಮಾಡಬೇಕಾಗಿದೆ. ಭಾರತದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ಜೀವನದಲ್ಲಿ ಭ್ರಷ್ಟಾಚಾರ ವ್ಯಾಪಕವಾಗಿ ಹರಡಿದೆ. ಸ್ವಾತಂತ್ರ್ಯಪೂರ್ವಕಾಲದಲ್ಲಿ ಗಾಂಧೀಜಿ, ನೆಹರೂ, ತಿಲಕ್ ಹಾಗೂ ಸುಭಾಷ್‌ಚಂದ್ರ ಬೋಸ್ ಜೀವನದ ಮೌಲ್ಯಗಳನ್ನು ಉಳಿಸಿಕೊಳ್ಳಲು ಕೆಲವು ಧ್ಯೇಯಗಳಿಗಾಗಿ ಬದುಕಿದ್ದರು. ಅನೇಕ ದೇಶಪ್ರೇಮಿಗಳು ಹಾಗೂ ಸ್ವಾತಂತ್ರ್ಯ ಹೋರಾಟಗಾರರು ಭಾರತವನ್ನು ಬ್ರಿಟಿಷರ ದಬ್ಬಾಳಿಕೆಯಿಂದ ಮುಕ್ತಗೊಳಿಸಲು ಪ್ರಾಣತ್ಯಾಗ ಮಾಡಿದರು. ದಾದಾಬಾಯಿ ನವರೋಜಿಯವರು 'ಪಾವರ್ಟಿ ಅಂಡ್ ಅನ್‌ಬ್ರಿಟಿಷ್ ರೂಲ್ ಇನ್ ಇಂಡಿಯಾ' ಎಂಬ ಕೃತಿಯಲ್ಲಿ ಬ್ರಿಟಿಷರು ಭಾರತೀಯರನ್ನು ಶೋಷಣೆಗೆ ಗುರಿಪಡಿಸಿರುವುದೇ ಭಾರತದ ಬಡತನಕ್ಕೆ ಕಾರಣ ಎಂದು ವಾದಿಸಿದರು. ಆದರೆ ಸ್ವಾತಂತ್ರ್ಯೋತ್ತರ ಕಾಲದಲ್ಲಿ ಪ್ರಗತಿಯ ಗತಿಯನ್ನು ಕುರಿತು ಪುನರ್‌ವಿಮರ್ಶಿಸಬೇಕಾಗಿದೆ. ಭಾರತದಲ್ಲಿ ಆರ್ಥಿಕ ಅಭಿವೃದ್ಧಿ ಆಮೆಯ ಗತಿಯಲ್ಲಿ ಸಾಗುತ್ತಿದೆ. ಇಂದು ನಾವು ಯಾರನ್ನು ದೂಷಿಸಬಲ್ಲೆವು?

ಇಂದು ಭಾರತ ಹಿಂದುಳಿದಿರುವುದಕ್ಕೆ ಕಾರಣವೆಂದರೆ ಸಮಾಜದಲ್ಲಿ ಭ್ರಷ್ಟಾಚಾರ ಪ್ರಚಲಿತವಾಗಿ ಹರಡಿರುವುದು. ಭ್ರಷ್ಟಾಚಾರ ಸಮಾಜದಲ್ಲಿ ಮಾನ್ಯತೆ ಪಡೆದುಕೊಂಡ ಒಂದು ದುರಾಚಾರ. ರಾಜಕೀಯದಲ್ಲಿ ಭ್ರಷ್ಟಾಚಾರ ಆಳವಾಗಿ ಬೇರೂರಿರುವುದರಿಂದ, ಅಭಿವೃದ್ಧಿ ಕುಂಠಿತವಾಗಿದೆ. ಭಾರತದಲ್ಲಿ ಭ್ರಷ್ಟಾಚಾರ ಆಧಾರಿತ ರಾಜಕೀಯ ವ್ಯವಸ್ಥೆ ಬೆಳೆದುಬಂದಿದೆ. ಹೀಗಾಗಿ ಯಾವ ರಾಜಕಾರಣಿಯೇ ಆಗಲಿ ಯಾವ ಪಕ್ಷದವರೇ ಆಗಲಿ ಶುದ್ಧವಾಗಿದ್ದೇವೆ ಎಂದು ಹೇಳಿಕೊಳ್ಳುವ ಧೈರ್ಯ ಕಳೆದುಕೊಂಡಿದ್ದಾರೆ. ರಾಜಕಾರಣಿಗಳ ಉಳಿವು ಹಣಬಲವನ್ನು ಅವಲಂಬಿಸಿದೆ. ಹಣದ ಪ್ರಾಮುಖ್ಯ ಮತಗಳನ್ನು ಖರೀದಿಸುವುದರಿಂದ ಪ್ರಾರಂಭವಾಗಿ, ಮಂತ್ರಿಪದವಿಗಳನ್ನು ಪಡೆದುಕೊಳ್ಳುವುದರಿಂದ, ಅಧಿಕಾರದಲ್ಲಿ ಉಳಿಯುವವರೆಗೆ ಮುಂದುವರೆಯುತ್ತದೆ. ಚುನಾವಣೆಗಳಲ್ಲಿ ಬಳಸಲಾಗುವ ಕಪ್ಪುಹಣವನ್ನು ತಡೆಹಿಡಿಯಲು ಯಾವ ಸಂಸ್ಥೆಯೂ ಇಲ್ಲ. ರಾಜಕೀಯ ಪಕ್ಷಗಳಲ್ಲಿ ಸಂಗ್ರಹಿಸಲಾಗುವ ಹಣದ ಮೂಲವನ್ನು ತಿಳಿಯಲು ಯಾವ ಮಾರ್ಗವೂ ಇಲ್ಲ. ಭಾರತದ ರಾಜಕೀಯ ವ್ಯವಸ್ಥೆಯನ್ನು ಶುದ್ಧಪಡಿಸಲು ಪ್ರಾಮಾಣಿಕರಾದ, ಎದೆಗಾರಿಕೆ ಇರುವ ಕೆಲವರು ಮಾತ್ರ ತಮ್ಮ ಹೋರಾಟವನ್ನು ಮುಂದುವರೆಸಿದ್ದಾರೆ. ಅಂತಹವರ ಸಾಲಿಗೆ ಟಿ. ಎನ್. ಶೇಷನ್ ಮತ್ತು ಅಣ್ಣಾ ಹಜಾರೆ ಸೇರುತ್ತಾರೆ. ರಾಜಕಾರಣಿಗಳಲ್ಲಿ ಭ್ರಷ್ಟಾಚಾರ ತಡೆಹಿಡಿಯಲು ಮುಖ್ಯ ಚುನಾವಣಾಧಿಕಾರಿಯಾದ ಶೇಷನ್ ಯಾರ ಬೆಂಬಲವೂ ಇಲ್ಲದೆ ನಡೆಸಿದ ಹೋರಾಟ ಶ್ಲಾಘನೀಯವಾದುದು. ಒಮ್ಮೆಯಾದರೂ ಧ್ವನಿವರ್ಧಕಗಳ ಕಾಟವಿಲ್ಲದೆ ಮತ್ತು ಭರ್ಜರಿ ಔತಣಕೂಟಗಳಿಲ್ಲದ ಚುನಾವಣಾ ವಾತಾವರಣ ಕಾಣಲು ಸಾಧ್ಯವಾಯಿತು. ಆದರೆ ಹಿಂದಿನ ಚುನಾವಣೆಗಳಲ್ಲಿದ್ದ 'ಮನೋರಂಜನೆ'ಯನ್ನು (?) ಕಳೆದುಕೊಂಡು ಅನೇಕರಿಗೆ ಬೇಸರವಾಗಿದ್ದಿರಬಹುದು. ಚುನಾವಣೆಗಳು ಸಮೀಪಿಸುತ್ತಿರುವ ಸಮಯದಲ್ಲಿ ಮಾತ್ರ ರಾಜಕಾರಣಿಗಳು ಜನರಿಗೆ ಏನನ್ನಾದರೂ ನೀಡಬಲ್ಲರು. ಚುನಾವಣೆಯಲ್ಲಿ ಗೆದ್ದನಂತರ ಅವರ ಆಶ್ವಾಸನೆಗಳು ಕನಸಾಗಿಯೇ ಉಳಿಯುತ್ತವೆ ಎಂಬುದು ಜನಸಾಮಾನ್ಯರಿಗೆ ಹೊಸ ವಿಷಯವೇನಲ್ಲ. ಆದ್ದರಿಂದ ಜನರು ಲಂಚಗಳನ್ನು ಸ್ವೀಕರಿಸಿ, ತಮ್ಮ ಮತವನ್ನು ಮಾರಾಟ ಮಾಡಿಕೊಳ್ಳುತ್ತಿದ್ದಾರೆ. ಇಂತಹ ಮನೋಭಾವ ಹೊಂದಿರುವ ಜನರು ತಮ್ಮ ರಾಜಕಾರಣಿಗಳು ಪ್ರಾಮಾಣಿಕರಾಗಿರಬೇಕೆಂದು ಅಪೇಕ್ಷಿಸಲು ಅಥವಾ ಅವರನ್ನು ಪ್ರಶ್ನಿಸಲು ಹೇಗೆ ತಾನೆ ಸಾಧ್ಯ ?

ರಾಜಕೀಯವೆಂದರೆ ಭ್ರಷ್ಟಾಚಾರಕ್ಕೆ ಪರ್ಯಾಯಪದವೆಂದರೆ ತಪ್ಪಾಗಲಾರದು. ಸಕ್ಕರೆ ಹಗರಣವಾಗಲಿ, ಮೇವು ಹಗರಣವಾಗಲಿ ನಮಗೆ ತಿಳಿಸುವುದೇನೆಂದರೆ ರಾಜಕಾರಣಿಗಳು ತಮ್ಮ ಸ್ವಾರ್ಥಕ್ಕಾಗಿ ಅಧಿಕಾರವನ್ನು ಬಳಸಿಕೊಳ್ಳುತ್ತಿದ್ದಾರೆ. ಪ್ರತಿಯೊಬ್ಬ ರಾಜಕಾರಣಿಯ ಆಸ್ತಿಯನ್ನು ಬಹಿರಂಗಪಡಿಸುವ ಪತ್ರಿಕೆಗಳನ್ನು ಓದಿದಾಗ ಆಶ್ಚರ್ಯವಾಗುತ್ತದೆ. ಪತ್ರಿಕೆಗಳಲ್ಲಿ ಜಯಲಲಿತಾ ಸಂಪಾದಿಸಿದ್ದ ಆಸ್ತಿಯನ್ನು ಓದಿದಾಗ ದಂತಕಥೆ ಓದಿದ ಅನುಭವ ಉಂಟಾಗುತ್ತದೆ. ಭಾರತೀಯ ಪ್ರಜಾ

ಸತ್ತಾತ್ಮಕ ವ್ಯವಸ್ಥೆಯ ಸರ್ವೋಚ್ಚ ಪದವಿಯನ್ನಲಂಕರಿಸಿದ ಪಿ. ವಿ. ನರಸಿಂಹರಾವ್ ಭ್ರಷ್ಟಾಚಾರದ ಅಪರಾಧಕ್ಕಾಗಿ ವಿಚಾರಣೆ ಎದುರಿಸಬೇಕಾಯಿತು. ಹವಾಲಾ ಹಗರಣದಲ್ಲಿ ಅನೇಕ ರಾಜಕೀಯ ಧುರೀಣರ ಹೆಸರುಗಳನ್ನು ಪಟ್ಟಿಮಾಡಲಾಗಿದೆ. ರಾಜಕಾರಣಿಗಳ ಬಳಿ ತಮ್ಮ ಆದಾಯಕ್ಕೂ ಮೀರಿದ ಆಸ್ತಿ ಇರುವುದನ್ನು ಪ್ರಗತಿಪರ ಯೋಜನೆಗಳಿಗೆ ಬಳಸಿದರೆ, ಅನೇಕ ಜನರು ಬಡತನದ ರೇಖೆಯಿಂದ ಮೇಲೆ ಬರಬಹುದು.

ಬಡತನ ನಿರ್ಮೂಲನಕ್ಕೆಂದು ರೂಪಿಸಲಾಗಿರುವ ಕಾರ್ಯಕ್ರಮಗಳೆಲ್ಲವೂ ವಾಸ್ತವತೆಯಿಂದ ದೂರವಾಗಿವೆ ಎಂಬುದು ಸ್ಪಷ್ಟ. ಬಡತನ ನಿರ್ಮೂಲನಕ್ಕಾಗಿ ಕೋಟ್ಯಂತರ ರೂಪಾಯಿ ಹಣ ಮೀಸಲಾಗಿರಿಸಲಾಗುತ್ತಿದೆ, ಆದರೆ ಅವು ನಿಜವಾಗಿಯೂ ಬಡಜನರಿಗೆ ತಲುಪುವುದಿಲ್ಲ. ಅದಲ್ಲದೆ ಪಂಚಾಯತ್ ರಾಜ್ ವ್ಯವಸ್ಥೆಯ ಕುಸಿತದ ಹಿನ್ನೆಲೆಯಲ್ಲಿಯೂ ಇಂತಹ ಒಂದು ಕರುಣಾಜನಕ ಪ್ರಸಂಗವನ್ನೇ ನೋಡಬಹುದು. ಚುನಾಯಿತ ಸರಪಂಚನಿಂದ ಗ್ರಾಮಸೇವಕನವರೆಗೆ ಪ್ರತಿಯೊಬ್ಬರೂ ಆದಷ್ಟು ಬೇಗನೆ ಶ್ರೀಮಂತರಾಗಲು ಬಯಸುತ್ತಾರೆ. ಚುನಾವಣೆಯಲ್ಲಿ ಗೆಲ್ಲುವುದೆಂದರೆ, ವ್ಯಕ್ತಿಯ ಅದೃಷ್ಟದ ಬಾಗಿಲು ತೆರೆದಂತೆ. ನೀರಾವರಿ ಯೋಜನೆಗಳಿಂದ ಪ್ರಾರಂಭವಾಗಿ, ಉತ್ತಮ ಗುಣಮಟ್ಟದ ಬೀಜಗಳನ್ನು ಒದಗಿಸುವುದು, ಅಂಗನವಾಡಿಗಳನ್ನು ನಡೆಸುವುದು ಅಥವಾ ಸಾರ್ವಜನಿಕ ವಿತರಣೆಯವರೆಗೂ ಭ್ರಷ್ಟಾಚಾರ ತಾಂಡವವಾಡುತ್ತಿದೆ.

ಸ್ಥಿತ್ಯಂತರದಲ್ಲಿರುವ ಭಾರತೀಯ ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳು ಕುಸಿಯುತ್ತಿವೆ. ಉದ್ಯೋಗಗಳನ್ನು ಗಳಿಸುವುದು, ಪರವಾನಗಿ ಪಡೆಯುವುದು, ಶಾಲೆಗಳಿಗೆ ಮಕ್ಕಳನ್ನು ಸೇರಿಸುವುದು, ಜನನ ಅಥವಾ ಮರಣಪತ್ರ ಪಡೆದುಕೊಳ್ಳುವುದು ಎಲ್ಲವೂ ಲಂಚದ ಆಧಾರಿತವಾಗಿವೆ. ಜನಸಾಮಾನ್ಯರು ಹಾಗೂ ನಿಗದಿ ಸಂಬಳ ಪಡೆದುಕೊಳ್ಳುವ ಜನರು ತೀವ್ರವಾಗಿ ಬಳಲಬೇಕಾಗುತ್ತದೆ. ವ್ಯಾಪಾರಸ್ಥರು ಅನಿವಾರ್ಯವಾಗಿ ಯಾವುದಾದರೊಂದು ರಾಜಕೀಯ ಪಕ್ಷಕ್ಕೆ ಧನಸಹಾಯ ನೀಡಬೇಕಾಗುತ್ತದೆ. ಅವರ ಹಣೆಬರಹವನ್ನು ಅಧಿಕಾರ ಗಳಿಸುವ ಪಕ್ಷ ನಿರ್ಧರಿಸುತ್ತದೆ. ನೌಕರಶಾಹಿ ವರ್ಗದಲ್ಲಿ, ಉನ್ನತ ಅಧಿಕಾರಿಯೊಬ್ಬನಿಂದ ಸೇವಕನವರೆಗೆ, ಏರುತ್ತಿರುವ ಬೆಲೆಗಳಿಗನುಗುಣವಾಗಿ ತಮ್ಮ ಸಂಪಾದನೆಯನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿರುವರು. ಇಂತಹ ವಾತಾವರಣದಲ್ಲಿ ನೀತಿಗಳಿಗೆ ಅಥವಾ ಮೌಲ್ಯಗಳಿಗೆ ಯಾವ ಸ್ಥಾನವೂ ಇಲ್ಲ. ಜನಸಾಮಾನ್ಯರಲ್ಲಿ ವಾಣಿಜ್ಯ ಮನೋಭಾವ ಬೆಳೆಯಲು ಮುಖ್ಯ ಕಾರಣವೆಂದರೆ, ಬೇರೆ ಮಾರ್ಗವಿಲ್ಲದಿರುವುದು. ಅದಲ್ಲದೆ ಲೋಕಜ್ಞಾನವಿಲ್ಲದೆ, ಮೂರ್ಖರೆಂಬ ನಿಂದನೆಗೆ ಗುರಿಯಾಗಬೇಕೆಂಬ ಭಯ ಕಾಡುತ್ತದೆ. ಇಂತಹ ಪರಿಸರದಲ್ಲಿ ಜನಸಾಮಾನ್ಯರ ಬದುಕಿನಲ್ಲಿ ಹಣ ಮುಖ್ಯವಾದ ಪಾತ್ರವಹಿಸುತ್ತದೆ. ಮನುಷ್ಯನು ಆಹಾರಕ್ಕಾಗಿ ಮಾತ್ರ ಜೀವಿಸುವುದಿಲ್ಲ, ಆದರೆ ತನ್ನಲ್ಲಿರುವ ಸಂಸ್ಕಾರಕ್ಕೆ ತಕ್ಕಂತೆ ನಡೆಯುತ್ತಾನೆಂಬ ಗಾಂಧಿವಾದವನ್ನು ಸಂಪೂರ್ಣವಾಗಿ ಮರೆಯಲಾಗಿದೆ. ಲಕ್ಷಾಂತರ ಜನರು ಹಸಿವಿನಿಂದ ಬಳಲುತ್ತಿರುವಾಗ, ಶ್ರೀಮಂತರು ಇನ್ನೂ ಹೆಚ್ಚು

ಶ್ರೀಮಂತರಾಗಲು ಸರ್ವ ಪ್ರಯತ್ನ ಗಳನ್ನೂ ನಡೆಸುತ್ತಿದ್ದಾರೆ. ಸಮಾಜವಾದ ವೆಂಬ ಸಿದ್ಧಾಂತ ಸಾರರಹಿತ ಸಿದ್ಧಾಂತವಾಗಿ ಉಳಿದಿದೆ. ಜನರನ್ನು ನಂಬಿಸಲು 'ಸಮಾಜ ವಾದ' ಎಂಬ ಪದವನ್ನು ರಾಜಕಾರಣಿಗಳು ತಮ್ಮ ಅನುಕೂಲಕ್ಕಾಗಿ ಬಳಸುತ್ತಿದ್ದಾರೆ. ವಾಸ್ತವ ಬದುಕಿನಲ್ಲಿ, ರಾಜಕಾರಣಿಗಳೇ ಆಗಲಿ ಸಾಮಾನ್ಯ ಜನರೇ ಆಗಲಿ 'ಸಮಾಜ ವಾದ'ದ ತತ್ವದ ಮೇಲೆ ಆಧಾರಿತವಾದ ಸಮಾಜವನ್ನು ಸೃಷ್ಟಿಸಲು ಶ್ರಮಿಸುತ್ತಿಲ್ಲ. ಹೆಚ್ಚೆಂದರೆ ಸಮಾಜವಾದದ ಮೂರು ವೇಷ ದಲ್ಲಿ ಬಂಡವಾಳಶಾಹಿ ಸಾಮಾಜಿಕ ವ್ಯವಸ್ಥೆ ರೂಪುಗೊಂಡಿದೆ. ಕಾರ್ಮಿಕರಿಗೆ ನ್ಯಾಯ ಒದಗಿಸಬೇಕೆಂದು ಸಂಪೂರ್ಣ ಕ್ರಾಂತಿ ಯನ್ನು ಪ್ರೋತ್ಸಾಹಿಸಿದ ರಾಜಕೀಯ ಸಿದ್ಧಾಂತವೆಂದರೆ ಸಮತಾವಾದ. ಇಂದು ಸಮತಾವಾದವನ್ನು ತಮ್ಮ ರಾಜಕೀಯ ಸಿದ್ಧಾಂತವೆಂದು ಸ್ವೀಕರಿಸಿರುವ ಅನೇಕ ರಾಷ್ಟ್ರಗಳಲ್ಲೂ ಅನೇಕ ಆರ್ಥಿಕ ಸಮಸ್ಯೆಗಳು ಉದ್ಭವಿಸಿವೆ. ಹೀಗಾಗಿ ಅನೇಕ ರಾಷ್ಟ್ರಗಳು 'ರಾಮರಾಜ್ಯ'ದಂತಹ ಕಾಲ್ಪನಿಕ ಸಮಾಜ ವನ್ನು ಸ್ಥಾಪಿಸಲು, ತಮ್ಮ ರಾಜಕೀಯ ಸಿದ್ಧಾಂತಗಳನ್ನೇ ಬದಲಾಯಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ಆದರೆ ಮಾನವ ಸಮಸ್ಯೆ ಗಳೊಂದಿಗೇ ಜೀವಿಸಬೇಕು ಎಂಬುದು ಕಟುಸತ್ಯ. ಈ ಹಿನ್ನೆಲೆಯಲ್ಲಿ ಸಕಲ ಸಿದ್ಧಾಂತಗಳನ್ನು ಮೆಟ್ಟಿ ನಿಂತಿರುವುದು ಮಾನವನ ಸ್ವಾರ್ಥ ಮತ್ತು ದುರಾಸೆ ಎಂಬುದು ಸ್ಪಷ್ಟ.

ಇಂದಿನ ಬದುಕಿನಲ್ಲಿ, ಸಕಲ ಕ್ಷೇತ್ರ ಗಳಿಂದಲೂ ಭ್ರಷ್ಟಾಚಾರವನ್ನು ಹೋಗ ಲಾಡಿಸಬೇಕಾದುದು ಅತ್ಯವಶ್ಯವಾಗಿದೆ. ಈ ಕಾರ್ಯದಲ್ಲಿ ನ್ಯಾಯಾಂಗ ಖಂಡಿತವಾಗಿ ಪ್ರಮುಖ ಪಾತ್ರವಹಿಸಿದೆ. ಮುಖ್ಯ ನ್ಯಾಯಾಧೀಶರಾದ ಜೆ. ಎಸ್. ವರ್ಮಾ ನ್ಯಾಯಾಂಗದ ಮೂಲಕ ತಪ್ಪಿತಸ್ಥನಾದ ಎಂತಹ ಸರ್ವೋಚ್ಚ ಅಧಿಕಾರಿಯನ್ನಾದರೂ ಶಿಕ್ಷಿಸಬಹುದೆಂಬುದನ್ನು ಬೆಳಕಿಗೆ ತರಲು ಶ್ರಮಿಸುತ್ತಿದ್ದಾರೆ. ಸಾರ್ವಜನಿಕರ ಅಭಿಪ್ರಾಯದಿಂದಲೂ ಭ್ರಷ್ಟಾಚಾರವನ್ನು ತಡೆಹಿಡಿಯಲು ಸಾಧ್ಯ. ಸರ್ಕಾರದ ಹಣವನ್ನು ದುರುಪಯೋಗಪಡಿಸಿಕೊಂಡ ಹಾಗೂ ಲಂಚಗಳನ್ನು ಸ್ವೀಕರಿಸಿದವರ ಪಟ್ಟಿಯಲ್ಲಿ ಅನೇಕ ರಾಜಕಾರಣಿಗಳ ಹೆಸರು ಗಳಿವೆ. ಭ್ರಷ್ಟ ಅಧಿಕಾರಿಗಳಿಗೆ ಹಾಗೂ ಮಂತ್ರಿಗಳಿಗೆ ವಿಚಾರಣೆ ನಡೆಯುತ್ತಿದ್ದರೂ, ಶಿಕ್ಷೆಯಾಗುವುದೆ ? ಎಂಬುದೇ ಕಾಡುತ್ತಿರುವ ಪ್ರಶ್ನೆ. ಉನ್ನತ ಪದವಿಗಳಲ್ಲಿರುವ ಅಧಿಕಾರಿ ಗಳ ಸ್ಥಾನಮಾನ ಲೆಕ್ಕಿಸದೆ, ಶಿಕ್ಷೆ ವಿಧಿಸಿ ದಾಗ ಮಾತ್ರ ಭಾರತೀಯ ನ್ಯಾಯಾಂಗದ ಗೌರವ ಉಳಿಯುತ್ತದೆ. ಸಾಕಷ್ಟು ಸಾಕ್ಷ್ಯಾ ಧಾರವಿಲ್ಲವೆಂಬ ಕಾರಣದಿಂದ ಈಗಾಗಲೇ ಅನೇಕರನ್ನು ಬಿಡುಗಡೆ ಮಾಡಲಾಗುತ್ತಿದೆ.

ನೌಕರಶಾಹಿ ವರ್ಗದಲ್ಲಿ ಭ್ರಷ್ಟಾಚಾರ ತಡೆಹಿಡಿಯಲು ರಾಜ್ಯ, ಜಿಲ್ಲಾ ಹಾಗೂ ಗ್ರಾಮೀಣ ಮಟ್ಟಗಳಲ್ಲಿ ಲೋಕಪಾಲ್ ಅನ್ನು ಸ್ಥಾಪಿಸಬೇಕು. ಬಡತನ ನಿರ್ಮೂಲನ ಕ್ಕಾಗಿ ಕೈಗೊಳ್ಳುವ ಕಾರ್ಯಕ್ರಮಗಳು ಹಾಗೂ ಪಂಚಾಯತ್ ರಾಜ್ ಯಶಸ್ವಿ ಯಾಗಬೇಕಾದರೆ ಲೋಕಪಾಲ್ ಅನ್ನು ಕಾರ್ಯಾಂಗದ ಹಿಡಿತದಿಂದ ಸಂಪೂರ್ಣವಾಗಿ ಸ್ವತಂತ್ರಗೊಳಿಸಬೇಕು. ಎಲ್ಲರೂ ಒಗ್ಗೂಡಿ ಲಾಗಿ ಭ್ರಷ್ಟಾಚಾರವನ್ನು ಖಂಡಿಸುವ ವಾತಾವರಣವನ್ನು ಸೃಷ್ಟಿಸಲು ಸರ್ವ

ಜನರೂ ಶ್ರಮಿಸಬೇಕು. 'ಪ್ರಜಾನಾಂಚ ಹಿತೇ ಹಿತಂ' ಎಂಬ ಸಿದ್ಧಾಂತವನ್ನು ಹರಡುವಂತೆ ಮಾಡಿದರೆ ಮಾತ್ರ ಸಮಾಜಕಲ್ಯಾಣ ಸಾಧ್ಯವಾಗುತ್ತದೆ. ಹಣಬಲ ಶಿಶುವಿನ ಭವಿಷ್ಯವನ್ನು ನಿರ್ಧರಿಸುವುದೇ ಆದರೆ, ಅನೇಕ ದುರಾಚಾರಗಳು ಬೆಳೆಯುತ್ತವೆ. ಲೌಕಿಕ ಮನೋಭಾವದಿಂದ ಸ್ಪರ್ಧಿಸುತ್ತಿರುವ ಜನರು ಹೇಗೆ ತಾನೆ ವರದಕ್ಷಿಣೆಯನ್ನು ವಿರೋಧಿಸಲು ಸಾಧ್ಯ ಅಥವಾ ವಧುದಹನವನ್ನು ಖಂಡಿಸಲು ಸಾಧ್ಯ? ಇದರಿಂದಾಗಿ ದಿಢೀರನೆ ಶ್ರೀಮಂತರಾಗಬೇಕೆಂಬ ದುರಾಸೆಯಿಂದಾಗಿ ಕುಟುಂಬಜೀವನ ಅಸಹನೀಯವಾಗುತ್ತದೆ.

ಶಿಕ್ಷಣವನ್ನು ಪಡೆದುಕೊಳ್ಳುವುದು ಒಂದು ಕಷ್ಟವಾದರೆ, ಉದ್ಯೋಗ ಪಡೆಯುವುದು ಮತ್ತೊಂದು ಸಾಹಸ. ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರಗಳನ್ನು ಬೇರ್ಪಡಿಸಿರುವುದರಿಂದಾಗಿ, ಹಣ ಸಾಮಾಜಿಕ ಸ್ಥಾನಮಾನದ ಏಕೈಕ ನಿರ್ಧಾರಕವಾಗಿದೆ. ನೀತಿರಹಿತ ಹಣಸಂಪಾದನೆಯನ್ನು ಬದುಕಿಗೆ ಸಹಜವಾಗಿ ಅಳವಡಿಸಿಕೊಳ್ಳಲಾಗಿದೆ. ಇಂತಹ ವಾತಾವರಣದಲ್ಲಿ ಮಾನವೀಯ ಹೊರನೋಟ ಮಾಯವಾಗಿದೆ. ಪರಿಶ್ರಮ ಹಾಗೂ ಪ್ರಾಮಾಣಿಕತೆ ವ್ಯರ್ಥವೆನಿಸಿವೆ. ಇದರಿಂದಾಗಿ ಭಾರತದ ಭವಿಷ್ಯ ಕತ್ತಲೆಯಿಂದ ತುಂಬಿದೆ. ಪಾಶ್ಚಾತ್ಯರನ್ನು ಲೌಕಿಕವಾದಿಗಳೆಂದು ಬಣ್ಣಿಸುವ ಭಾರತೀಯರು ಯಾವ ವಿಧದಲ್ಲಿ ಉತ್ತಮರಾಗಿದ್ದೇವೆ? ಪ್ರಾಮಾಣಿಕತೆಯ ಮನೋಭಾವವನ್ನು ಪುನಃ ಬೆಳೆಸಲು ಮಾನಸಿಕ ಪರಿವರ್ತನೆ ಅವಶ್ಯವಾದುದು ಮತ್ತು ಭ್ರಷ್ಟಾಚಾರ ನಿರ್ಮೂಲನವನ್ನು ಕುರಿತು ಜನರಲ್ಲಿ ಜಾಗೃತಿ ಉಂಟುಮಾಡುವುದರಿಂದ ನವಭಾರತ ನಿರ್ಮಿಸಲು ಸಾಧ್ಯ. ಶಿಕ್ಷಣದಿಂದ ಜನರ ವಿವೇಚನಾಶಕ್ತಿ ಬೆಳೆಯಲು ಸಾಧ್ಯವಾಗುತ್ತದೆ. ಅದಲ್ಲದೆ, ಭ್ರಷ್ಟಾಚಾರ ನಿರ್ಮೂಲನವಾಗಲಿ ಅಥವಾ ವರದಕ್ಷಿಣೆಯ ವಿರುದ್ಧವಾಗಲಿ ದಿಟ್ಟ ನಿಲುವನ್ನು ಬೆಳೆಸಿಕೊಳ್ಳಲು ಶಿಕ್ಷಣ ಸಹಾಯಕರವಾಗುತ್ತದೆ, ಇಲ್ಲದಿದ್ದರೆ ಶ್ರೀಮಂತರ ಹಾಗೂ ಬಡವರ ನಡುವಿನ ಅಂತರ ಬೆಳೆಯುತ್ತಲೇ ಹೋಗುತ್ತದೆ. ಈ ಭ್ರಷ್ಟಪರಿಸರದಲ್ಲಿ ಯುವಪೀಳಿಗೆ ನಿರಾಶವಾದಿ ಹೊರನೋಟ ಬೆಳೆಸಿಕೊಳ್ಳುವುದರಲ್ಲಿ ಯಾವ ಸಂಶಯವೂ ಇಲ್ಲ.

ಇಂದು ಅನೇಕ ಜನರು ಬ್ರಿಟಿಷರ ಕಾಲವೇ ಉತ್ತಮವಾಗಿತ್ತೆಂದು ಹೇಳುವುದನ್ನು ಕೇಳುತ್ತೇವೆ. ಇದನ್ನು 'ತಬರನ ಕಥೆ'ಯಲ್ಲಿ (ರಾಷ್ಟ್ರಪ್ರಶಸ್ತಿ ಗಳಿಸಿದ ಚಿತ್ರ) ಸುಂದರವಾಗಿ ಚಿತ್ರಿಸಲಾಗಿದೆ. ಪಿಂಚಣಿಗಾಗಿ ಅಲೆದಾಡಬೇಕಾದ ನಿವೃತ್ತ ಸರ್ಕಾರಿ ನೌಕರನ ಪರದಾಟ ಕರುಣಾಜನಕ. ಇಂತಹ ವಿಷಯಗಳನ್ನು ಕುರಿತು ಜನರಲ್ಲಿ ಜಾಗೃತಿ ಮೂಡಿಸಲು ಸಿನಿಮಾ ಹಾಗೂ ಇನ್ನಿತರ ಸಂಪರ್ಕ ಮಾಧ್ಯಮಗಳನ್ನು ಬಳಸಬೇಕು. ಎಲ್ಲಿಯವರೆಗೆ ಭ್ರಷ್ಟಾಚಾರವನ್ನು ಸಮಾಜದಲ್ಲಿ ಪೋಷಿಸುತ್ತೇವೆಯೋ, ಅಲ್ಲಿಯವರೆಗೆ ಅದನ್ನು ಹೋಗಲಾಡಿಸಲು ಸಾಧ್ಯವಿಲ್ಲ ಮತ್ತು ಭಾರತವು ಮಹತ್ವಪೂರ್ಣವಾದ ರೀತಿಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಿಲ್ಲ.

ಪ್ರತಿಭೆ ಆಕಸ್ಮಿಕವೋ? ಆನುವಂಶಿಕವೋ?

ಡಾ|| ಎನ್. ಎಸ್. ಲೀಲಾ
೧೦೫, ವೆಸ್ಟ್‌ಪಾರ್ಕ್ ಅಪಾರ್ಟ್‌ಮೆಂಟ್ಸ್
೧೪-ಎ, ಅಡ್ಡ ಬೀದಿ, ಮಲ್ಲೇಶ್ವರಂ
ಬೆಂಗಳೂರು-೫೬೦ ೦೦೩

ತಮ್ಮ ಮಕ್ಕಳು ಬುದ್ಧಿವಂತರೂ ಆರೋಗ್ಯವಂತರೂ ಆಗಬೇಕು ಎಂದು ತಂದೆ ತಾಯಿಯರು ಬಯಸುವುದು ಸಹಜ. ಈ ದಿಶೆಯಲ್ಲಿ ನಮ್ಮೆಲ್ಲರ ಜನನಿಯಾಗಿರುವ ನಿಸರ್ಗಕ್ಕೆ ತನ್ನದೇ ಯೋಜನೆ ಮತ್ತು ನಿರ್ವಹಣೆ ಇವೆ. ಇವು ಏನೆಂದು ವೈಜ್ಞಾನಿಕವಾಗಿ ಅರಿತು ತದನಂತರ ಮಕ್ಕಳಿಗೆ ಯೋಗ್ಯ ಪರಿಸರ, ಸ್ವಂತ ಆಚರಣೆಯಿಂದ ಉನ್ನತ ಸಂಸ್ಕಾರ ಮತ್ತು ಪ್ರೀತಿ–ನೀತಿಯುಕ್ತವಾದ ಜೀವನ ಧ್ಯೇಯಗಳ ಸಾಧನೆಗೆ ಪ್ರಾಮಾಣಿಕ ಪ್ರಯತ್ನವೆಸಗಲು ಪ್ರೇರಣೆ ಒದಗಿಸುವುದು ಮಾತಾಪಿತೃಗಳ ಆದ್ಯ ಕರ್ತವ್ಯ.

'ಅಪ್ರತಿಮ' 'ಪ್ರತಿಭಾವಂತ' 'ಅಸಾಧಾರಣ' 'ಜೀನಿಯಸ್', 'ಸಾಧಾರಣ' 'ಮಂದಮತಿ', 'ಅವಿವೇಕಿ', 'ಮೂರ್ಖ' 'ಗುಗ್ಗು'—ಹೀಗೆ ಹತ್ತು ಹಲವಾರು ರೀತಿ ನಮ್ಮ ನಿತ್ಯ ಜೀವನದಲ್ಲಿ ಭೇಟಿಯಾಗುವ ಅಥವಾ ತಿಳಿದವರನ್ನು ಎಂತಹ ಅಳತೆಗೋಲಿಲ್ಲದೇ ನಿಶ್ಚಯಿಸುವ ಕೆಟ್ಟ ಸಂಪ್ರದಾಯ ಎಲ್ಲಾ ಸಮಾಜಗಳಲ್ಲೂ ಬೆಳೆದು ಬಂದಿದೆ. ವಿದ್ಯಾಭ್ಯಾಸಕ್ಕೂ ಮತ್ತು ಬುದ್ಧಿವಂತಿಕೆಗೂ ನಂಟು ಜೋಡಿಸುವುದೂ ಉಂಟು. ವಿದ್ಯೆ ಮತ್ತು ಬುದ್ಧಿಯನ್ನು ಆಧಾರವಾಗಿಟ್ಟುಕೊಂಡು ಮನುಷ್ಯರನ್ನು ಅಳೆಯುವುದು ಕೆಲವು ವೇಳೆ ಸಮಂಜಸವಾಗದಿರಬಹುದು. ಏಕೆಂದರೆ ಕೆಲವರು ಕಲಿತು ಚುರುಕು ಬುದ್ಧಿಯವರಾದ ಕಾರಣ ಉನ್ನತ ಹುದ್ದೆಗಳನ್ನು ಅಲಂಕರಿಸುತ್ತಾರೆ. ಮತ್ತೆ ಕೆಲವರು ಶಿಕ್ಷಣಕ್ಕೆ ಯತ್ನಿಸಿದರೂ ಮಂದ ಬುದ್ಧಿಯವರಾಗಿ ಮೂರ್ಖತೆ ತೋರುತ್ತಾರೆ. ಆದ್ದರಿಂದ ವಿದ್ಯೆ, ಬುದ್ಧಿ ಪೀಳಿಗೆಯಿಂದ ಪೀಳಿಗೆಗೆ ಹರಿದು ಬರುವ ಕೊಡುಗೆಯಾಗುವುದು ಎಲ್ಲಾ ಸಂದರ್ಭಗಳಲ್ಲೂ ಸಾಧ್ಯವಿಲ್ಲ. ಅಂತೆಯೇ,

"ಮನುಜರಲ್ಲಿ ಸೂಕ್ಷ್ಮಮತಿ; ಮಂದಮತಿ
ಗಳುಂಟು,
ಯಾರಿಗೂ ಪೀಳಿಗೆಯಿಂದ ಪೀಳಿಗೆಗೆ ದೊರೆತಿಲ್ಲ
ಗಂಟು"

ಎನ್ನುತ್ತಾರೆ, ಸಮಾಜ ಸುಧಾರಕ ಮಹಾತ್ಮ ಫುಲೆ.

ಪಟ್ಟಣಗಳಲ್ಲಿ ವಿದ್ಯಾಭ್ಯಾಸ ಮಾಡಿದ ವಿದ್ಯಾರ್ಥಿಯ ಪರಿಸರ ಗ್ರಾಮೀಣ ವಿದ್ಯಾರ್ಥಿಯ ಪರಿಸರಕ್ಕಿಂತ ಭಿನ್ನವಾದದ್ದು. ಹಾಗೆಯೇ ತಾಂತ್ರಿಕವಾಗಿ

ಮುಂದುವರಿದ ಪಾಶ್ಚಾತ್ಯ ದೇಶಗಳಲ್ಲಿ ವಿಷಯ ನಿರೂಪಣೆ ನಮ್ಮಲ್ಲಿ ಕೊಡುವ ಶಿಕ್ಷಣಕ್ಕಿಂತ ಭಿನ್ನ. ಇದನ್ನು ಅಳತೆಗೋಲಾಗಿಸಿ ಪಾಶ್ಚಾತ್ಯ ದೇಶದಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿ ನಮ್ಮ ಪಟ್ಟಣದ ವಿದ್ಯಾರ್ಥಿಗಿಂತ, ಅಂತೆಯೇ ನಮ್ಮ ಪಟ್ಟಣದ ವಿದ್ಯಾರ್ಥಿ ಗ್ರಾಮೀಣ ವಿದ್ಯಾರ್ಥಿಗಿಂತ ಉತ್ತಮ ಎಂದು ಪರಿಗಣಿಸುವುದು ಮೂರ್ಖತನ. 'ಬೆಳೆಯುವ ಚಿಗುರು ಮೊಳಕೆಯಲ್ಲೇ' ಎನ್ನುವುದೂ 'ಒನಕೆ ಚಿಗುರಿದಂತೆ' ಎಂದು ಪರಿಹಾಸ್ಯ ಮಾಡುವುದೂ ವೈಜ್ಞಾನಿಕವಾಗಿ ಪರಿಗಣಿಸಲಾಗದು.

ಈ ಮೇಲಿನ ಹೇಳಿಕೆಗಳಿಗೆ ಉದಾಹರಣೆಗಳನ್ನು ನೀಡುತ್ತಾ ಹೋದಾಗ ಪ್ರತಿಭಾವಂತ ಹೇಗೆ, ಯಾವ ಪರಿಸರದಲ್ಲೇ ಪ್ರಕಾಶಕ್ಕೆ ಬರಬಹುದೆಂಬುದನ್ನು ಚಾರಿತ್ರಿಕ ಹಿನ್ನೆಲೆಯಲ್ಲಿ ಕಾಣಬಹುದು. ನಮ್ಮ ಪೌರಾಣಿಕ ಕಥೆಗಳಲ್ಲೂ ಮಕ್ಕಳಿಲ್ಲದ ತಂದೆ ತಾಯಿಗಳಿಗೆ ಭಗವಂತ ಪ್ರತ್ಯಕ್ಷನಾಗಿ ವರ ನೀಡುವಾಗ ಕೇಳುವ ಪ್ರಶ್ನೆ 'ಅತಿ–ಚತುರನಾದ, ವಂಶಕ್ಕೇ ಮೆರಗು ನೀಡುವ ಅಲ್ಪಾಯುಷಿಯೋ ಇಲ್ಲ ದೀರ್ಘಾಯು-ವಾದ ಕುಪುತ್ರನೋ?, ಅದಕ್ಕೆ ತಂದೆ ತಾಯಿಗಳು ಬೇಡುವುದು ಮೊದಲ ಆಯ್ಕೆಯೇ. ಎಂದರೆ ಎಲ್ಲರೂ ಬಯಸುವುದು ಉತ್ತಮವಾದದ್ದನ್ನೇ. ಹಾಗೆಂದು ಎಲ್ಲರೂ ನೊಬೆಲ್ ಪ್ರಶಸ್ತಿ ವಿಜೇತರಾಗಲು ಸಾಧ್ಯವೇ? ಇಂದಿನ 'ಡಾಲಿ' ಯುಗದಲ್ಲಿ ಇಂತಹ ಪ್ರಯತ್ನ ಸಾಧ್ಯವಾಗಬಲ್ಲದ್ದಾದರೂ ಪ್ರಕೃತಿಯ ನಿಯಮವಾದ ವೈವಿಧ್ಯಕ್ಕೆ ಅಡ್ಡಿ ಬಂದಂತಾಗುತ್ತದೆ. ತಿಳುವಳಿಕೆ, ಜ್ಞಾಪಕಶಕ್ತಿ, ಪ್ರತಿಭೆ ಮುಂತಾದ ಪ್ರತಿಯೊಂದು ನಿತ್ಯ ಜೀವನದ ಚಟುವಟಿಕೆಗಳಿಗೂ ನಾವು ತಂದೆ ತಾಯಿಗಳಿಂದ ಪಡೆದ ಜೀನು (ಆನುವಂಶೀಯ ಗುಣ)ಗಳೇ ಕಾರಣ. ಈ ಜೀನುಗಳು ಯಾವ ಪರಿಸರದಲ್ಲಿ ಹೇಗೆ ತಮ್ಮನ್ನು ಪ್ರಕಾಶಗೊಳಿಸಿಕೊಳ್ಳುತ್ತವೆ ಎಂಬುದು ಆಕಸ್ಮಿಕವೂ ಹೌದು, ಆನುವಂಶಿಕವೂ ಹೌದು. ಆದರೆ ಅದು ಅನಿವಾರ್ಯವಾಗಬೇಕೆಂದೇನೂ ಅಲ್ಲ. ಆಕಸ್ಮಿಕ ಪರಿಸರ ಮತ್ತು ಆನುವಂಶೀಯ ಗುಣಗಳು ಪ್ರತಿಭೆ ಎಂಬ ನಾಣ್ಯದ ಎರಡು ಮುಖಗಳಿದ್ದಂತೆ.

ಕಲಿಯುವಿಕೆ ನಮ್ಮ ಜ್ಞಾನಭಂಡಾರವನ್ನು ಹೆಚ್ಚಿಸಿಕೊಳ್ಳುವ ಮಾಧ್ಯಮವಾದರೆ, ಜ್ಞಾಪಕಶಕ್ತಿ ಪಡೆದ ಜ್ಞಾನ ಹೆಚ್ಚು ಕಾಲ ನಮ್ಮಲ್ಲಿರಿಸಿಕೊಳ್ಳುವ ಸಾಧನ. ಇವೆರಡೂ ವ್ಯಕ್ತಿ ವಿಕಾಸದ ಕೋಡುಗಳಿದ್ದಂತೆ.

ಕೈಯಲ್ಲಿಯ ಐದು ಬೆರಳುಗಳು ಹೇಗೆ ಒಂದೇ ಸಮನಿರಲು ಸಾಧ್ಯವಿಲ್ಲವೋ ಹಾಗೆಯೇ ಕುಟುಂಬದ ಸದಸ್ಯರೆಲ್ಲರೂ ಒಂದೇ ತರಹವಿರಲು ಸಾಧ್ಯವಿಲ್ಲ. ಪ್ರತಿ ವ್ಯಕ್ತಿಯೂ ತನ್ನ ಜೀನುಗಳ ಸಂಯೋಜನೆಯಿಂದ ತನ್ನದೇ ಆದ ವ್ಯಕ್ತಿತ್ವ ಪಡೆದಿರುತ್ತಾನೆ. ಒಂದು ಕುಟುಂಬದ ಅತಿ ಸಾಧಾರಣ ತಂದೆ–ತಾಯಿಯರಿಗೆ ಉಜ್ವಲ ಭವಿಷ್ಯದ ಸುಪುತ್ರ ಜನಿಸುವುದು ಎಷ್ಟು ಆಕಸ್ಮಿಕವೋ ಹಾಗೆಯೇ ಪಂಡಿತ ಪುತ್ರ ಜನಿಸುವುದೂ ಸಮಂಜಸ. ಈ ಹಿನ್ನೆಲೆಯಲ್ಲಿ ಒಂದೇ ಕುಟುಂಬದ ಸದಸ್ಯರು ನೊಬೆಲ್ ಪಾರಿತೋಷಕ ಗಿಟ್ಟಿಸಿರುವುದು ಹಾಗೂ ಪರಂಪರಾನುಗತವಾಗಿ ಕೆಲವು ಕುಟುಂಬಗಳಲ್ಲಿ ಸಂಗೀತ, ಸಾಹಿತ್ಯ, ವಿಜ್ಞಾನಗಳಲ್ಲಿ ಪರಿಣತಿ ಪಡೆದಿರುವುದನ್ನು ಪರಿಗಣಿಸಿದಾಗ, ಜೀನುಗಳ ಮಹತ್ವದ ಅರಿವಾಗಬಹುದು.

೧) ತಂದೆ, ತಾಯಿ, ಅಳಿಯ ಮತ್ತು ಮಗಳು—ನಾಲ್ವರೂ ನೊಬೆಲ್ ಪ್ರಶಸ್ತಿ ಪಡೆದ ಕುಟುಂಬ.

ತಂದೆ—ಪೀರಿ ಕ್ಯೂರಿ —೧೯೦೩ ಭೌತಶಾಸ್ತ್ರ
ತಾಯಿ—ಮೇಡಮ್ ಕ್ಯೂರಿ —೧೯೧೧ ರಸಾಯನಶಾಸ್ತ್ರ
ಮಗಳು—ಐರೀಸ್ ಜ್ಯೂಲಿಯಟ್ ಕ್ಯೂರಿ —೧೯೩೫ ರಸಾಯನಶಾಸ್ತ್ರ
ಅಳಿಯ—ಫೆಡರಿಕ್ ಜ್ಯೂ. ಕ್ಯೂರಿ —೧೯೩೫ ರಸಾಯನಶಾಸ್ತ್ರ

೨) ತಂದೆ ಮತ್ತು ಮಗ—ಇಬ್ಬರೂ ನೊಬೆಲ್ ಪ್ರಶಸ್ತಿ ಪಡೆದದಾಖಲೆ.

ಅ) ವಿಲಿಯಂ ಬ್ರಾಗ್ ೧೯೧೫
ಲಾರೆನ್ಸ್ ಬ್ರಾಗ್ „ } ಭೌತಶಾಸ್ತ್ರ

ಆ) ಜೋಸೆಫ್ ಜಾನ್ ಥಾಮ್ಸನ್ ೧೯೦೬
ಜಾರ್ಜ್ ಪಾಗೆಟ್ ೧೯೩೭ } ಭೌತಶಾಸ್ತ್ರ

ಇ) ನೀಲ್ಸ್ ಬೋರ್ ೧೯೨೨
ಅಗೆ ನೀಲ್ಸ್ ಬೋರ್ ೧೯೭೫ } ಭೌತಶಾಸ್ತ್ರ

ಈ) ಎಚ್ ಫಾನ್ ಯುಲರ್ ಚೆಲ್ಫಿನ್ ೧೯೨೯ ರಸಾಯನಶಾಸ್ತ್ರ
ಉಲ್ಫ ಫಾನ್ ಯುಲರ್ ೧೯೭೦ ಅಂಗಕ್ರಿಯಾ ಹಾಗೂ ವೈದ್ಯ ಶಾಸ್ತ್ರ

ಉ) ಕಾರ್ಲ್ ಮನ್ನೆ ಸೀಜ್ ಬಾನ್ ೧೯೨೪
ಕೈ ಸೀಜ್ ಬಾನ್ ೧೯೮೧ } ಭೌತಶಾಸ್ತ್ರ

೩) ಸಹೋದರರು

ಅ) ಜಾನ್ ಟಿನ್ ಬರ್ಜೆನ್ ೧೯೬೯ ಅರ್ಥಶಾಸ್ತ್ರ
ನಿಕೋಲಸ್ ಟಿನ್‌ಬರ್ಜೆನ್ ೧೯೭೩ ಅಂಗಕ್ರಿಯಾ ಹಾಗೂ ವೈದ್ಯಶಾಸ್ತ್ರ

೪) ಚಿಕ್ಕಪ್ಪ ಮತ್ತು ಸೋದರಳಿಯ.

ಸಿ. ವಿ. ರಾಮನ್ ೧೯೩೦
ಎಸ್. ಚಂದ್ರಶೇಖರ್ ೧೯೮೩ } ಭೌತಶಾಸ್ತ್ರ

೫) ಭಾವ—ಮೈದುನ.

ಚಾರ್ಲ್ಸ್ ಹಾರ್ಡ್ ಟೋನೆಸ್ ೧೯೬೪
ಆರ್ಥರ್ ಷಾಲೋ ೧೯೮೧ } ಭೌತಶಾಸ್ತ್ರ

ಪ್ರತಿಭೆ ಹುಟ್ಟಿನಿಂದಲೋ? ಅಥವಾ ಪರಿಸರದಿಂದಲೋ? ಎಂಬ ವಿವಾದ ೨೦ನೇ ಶತಮಾನದ ಆದಿಯಿಂದಲೂ ಬಿಡಿಸಲಾಗದ ಪ್ರಶ್ನೆಯಾಗಿಯೇ ಉಳಿದಿದೆ. ಎರಡಕ್ಕೂ ಸಾಕ್ಷ್ಯಾಧಾರಗಳಿರುವ ಉದಾಹರಣೆಗಳನ್ನು ನೀಡಬಹುದು. ಜೀನು ಮತ್ತು ಪರಿಸರವೆರಡೂ ಹೊಂದಾಣಿಕೆಯಾದಾಗ ಸುಪ್ತವಾಗಿದ್ದ ಪ್ರತಿಭೆ ಹೊರಹೊಮ್ಮಬಹುದು. ಕೆಲವು ವೇಳೆ ಜೀನಿನ ಮಹತ್ವದಿಂದ ತಾನೇ ಪರಿಸರ ಸೃಷ್ಟಿಸಿಕೊಳ್ಳಬಲ್ಲದು. ಪರಿಸರವಿದ್ದರೂ ಜೀನಿನ ಕೊರತೆಯಿಂದ ಪ್ರತಿಭೆಗೆ ಅವಕಾಶವಿಲ್ಲದಿರಬಹುದು. ಪ್ರತಿಭೆಯ ಪ್ರಕಟಣೆಗೆ ಕಾಲ, ದೇಶ, ಶಿಕ್ಷಣ, ಮೇಲು, ಕೀಳು, ಯಾವುದೂ ಅಡ್ಡಿಬರಲಾರದು.

ಬಾಲ ಪ್ರೌಢಿಮೆಗೆ ಹೆಸರಾದ ವ್ಯಕ್ತಿ ಜೊಹಾನ್ ವುಲ್ಫ್‌ಗಾಂಗ್ ಫಾನ್ ಗೋಥೆ. ಈತ ತನ್ನ ಎಂಟನೇ ವಯಸ್ಸಿಗೇ ನಾಟಕಗಳನ್ನು ಬರೆಯುತ್ತಿದ್ದನಂತೆ. ತನ್ನ ೨೦ರ ಹರಯದಲ್ಲಿ ಜರ್ಮನಿಯ ಪ್ರಮುಖ ಬರಹಗಾರ ನೆನೆಸಿಕೊಂಡ. ಜಾನ್ ಸ್ಟುಅರ್ಟ್ ಮಿಲ್ ಮೂರು ವರ್ಷದವನಿದ್ದಾಗಲೇ ಗ್ರೀಸ್ ಭಾಷೆ ಕಲಿತ, ಎಂಟು ವರ್ಷದವನಿದ್ದಾಗ ಲ್ಯಾಟಿನ್ ಕಲಿತ, ಆತನ ತಂದೆ ಅವನಿಗೆ ರೇಖಾಗಣಿತ ಮತ್ತು ಬೀಜಗಣಿತವನ್ನು ಎಳೆಯ ವಯಸ್ಸಿನಲ್ಲೇ ಕಲಿಸಿದ. ಹನ್ನೊಂದನೆಯ ವಯಸ್ಸಿಗೆ ಕಲನಶಾಸ್ತ್ರ (ಕ್ಯಾಲಕ್ಯುಲಸ್) ಕಲಿತಿದ್ದ. ರಾಜಕೀಯ ತತ್ವಜ್ಞಾನಿ ಎಂದು ಜಗತ್ಪ್ರಸಿದ್ಧನಾದ.

ಚಾರ್ಲ್ಸ್ ಡಾರ್ವಿನ್, ಥಾಮಸ್ ಆಲ್ವ ಎಡಿಸನ್, ಆಲ್ಬರ್ಟ್ ಐನ್‌ಸ್ಟೈನ್‌ರು ತಮ್ಮ ಎಳೆವಯಸ್ಸಿನಲ್ಲಿ ಯಾವುದೇ ಪ್ರೌಢಿಮೆ ತೋರಿಸಲಿಲ್ಲ. ತಂದೆ ತಾಯಿಗಳಿಗೂ, ಉಪಾಧ್ಯಾಯರಿಗೂ ದೊಡ್ಡ ತಲೆನೋವಾಗಿದ್ದ ಇವರು ಆಯ್ದುಕೊಂಡ ತಮ್ಮ ಕ್ಷೇತ್ರದಲ್ಲಿ ಮಹತ್ತಾದ ಸಾಧನೆ ತೋರಿದರು, ಐನ್‌ಸ್ಟೈನ್‌ನನ್ನು ಆತನ ತರಗತಿಯಲ್ಲಿ 'ದಡ್ಡ, ಸೋಮಾರಿ, ಕೆಲಸಕ್ಕೆ ಬಾರದವ' ಎಂದೇ ಉಪಾಧ್ಯಾಯರು ಪರಿಗಣಿಸಿದ್ದರು. ಅಂದರೆ ಪ್ರತಿಭೆ ಹುಟ್ಟಿನಿಂದಲೂ ತೋರಬಹುದು. ಇಲ್ಲ ಅದು ಜೀವಿತದ ಯಾವುದೇ ಮಜಲಿನಲ್ಲಿಯೂ ಮಿಂಚಬಲ್ಲುದು.

ಇಂದು ನಮ್ಮ ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಮತ್ತು ಪರಿಸರದ ಒತ್ತಡ ಅನಾರೋಗ್ಯಕರ ಜೀವನದ ಹಾದಿಗೆ ಎಡೆಮಾಡಿಕೊಟ್ಟಿದೆ. ತಂದೆ ತಾಯಿಗಳ ಒತ್ತಾಯದಿಂದಲೋ, ಸರ್ಕಾರದ ನೀತಿ ನಿಯಮಗಳಿಗೋ, ತಮ್ಮ ಇಚ್ಛೆಯ ವಿಷಯ ಆಯ್ದುಕೊಳ್ಳದಂತಾಗಿ ವಿಧಿಯಿಲ್ಲದೇ ಸಿಕ್ಕಿದ್ದನ್ನೇ ದಕ್ಕಿಸಿಕೊಳ್ಳುವ ಮನೋಭಾವ ಬೆಳೆಸಿಕೊಂಡಿದ್ದಾರೆ. ಭವಿಷ್ಯತ್ತಿಗಾಗಿ ದಾರಿಮಾಡಿಕೊಳ್ಳುವ ಸಲುವಾಗಿ ಇಷ್ಟವಿರಲಿ, ಇಲ್ಲದಿರಲಿ, ನೀತಿಯಿಂದಲೋ, ಅನೀತಿಯಿಂದಲೋ ಡಿಗ್ರಿ ಎಂಬ ಗುರಿ ಸಾಧಿಸುತ್ತಾರೆ. ಹೀಗಾಗಿ ಹಣ ಮತ್ತು ಬೆಂಬಲ ಇವೆರಡೇ ಮುಖ್ಯವಾಗಿರುವ ಈ ಜಗತ್ತಿನಲ್ಲಿ ಪ್ರಕೃತಿದತ್ತವಾದ ಪ್ರತಿಭೆಗೆ ಸಂಚಕಾರವಾಗಿರುವುದು ಶೋಚನೀಯ. ನಿಜವಾದ ಪ್ರತಿಭೆಯನ್ನು ಗುರುತಿಸುವ ದಿಕ್ಕಿನಲ್ಲಿ ವ್ಯಾಪಾರಿ ಮನೋಭಾವವೇ ಪ್ರಧಾನವಾಗಿ ಪ್ರತಿಭೆ ಸತ್ತಿದೆ ಇಲ್ಲವೆ ದೇಶಬಿಟ್ಟು ಪಲಾಯನ ಸೂತ್ರ ಹಿಡಿದಿದೆ. ಪ್ರತಿಭಾವಂತರನ್ನು ಗುರುತಿಸುವಾಗ ಹೆಚ್ಚಿನವರು ಅತಿ ಸಾಧಾರಣ ಕೌಟುಂಬಿಕ ಹಿನ್ನೆಲೆಯಿಂದಲೇ ಬಂದಿರುವ ಅಂಶವನ್ನೂ ಗಮನಿಸಬಹುದು.

ಕ್ರ. ಸಂ.	ಪ್ರತಿಭಾವಂತ	ತಂದೆಯ ಉದ್ಯೋಗ
೧.	ಚಾರ್ಲೋಟಿ ಬ್ರಾಂಟಿ (ಕಥೆಗಾರ್ತಿ,—'ವುದರಿಂಗ್ ಹೈಟ್ಸ್' ಕರ್ತೃ)	ನೇಯ್ಗೆಯವ ಮತ್ತು ಪಾದ್ರಿ
೨.	ಹಂಫ್ರಿ ಡೇವಿ (ಗಣಿ ದೀಪದ ಅನ್ವೇಷಕ, ರಸಾಯನ ಶಾಸ್ತ್ರಜ್ಞ)	ಮರಗೆಲಸದವ
೩.	ಗೆಲಿಲಿಯೋ ಗೆಲಿಲಿ	ವ್ಯಾಪಾರಿ ಮತ್ತು ಸಂಗೀತಗಾರ
೪.	ಬೆಂಜಾಮಿನ್ ಫ್ರಾಂಕ್ಲಿನ್ (ವಿಜ್ಞಾನಿ, ವಿದ್ಯುಚ್ಛಕ್ತಿ ಮತ್ತು ಮಿಂಚಿನ ಸಾಮ್ಯತೆ ಕಂಡು ಹಿಡಿದವ)	ಮೊಂಬತ್ತಿ ಹೊಸೆಯುವವ
೫.	ಜೋಸೆಫ್ ಪ್ರೀಸ್ಟ್ಲಿ (ಆಮ್ಲಜನಕದ ಜನಕ)	ನೇಯ್ಗೆಯವ
೬.	ಲಿಯೋನಾರ್ಡೋ ಡಾ ವಿಂಚಿ (ಚಿತ್ರಕಾರ, ಅನ್ವೇಷಕ)	ನೋಟರಿ, ವ್ಯಾಪಾರಿ
೭.	ಚಾರ್ಲ್ಸ್ ಡಾರ್ವಿನ್ (ವಿಕಾಸವಾದದ ಪಿತಾಮಹ)	ವೈದ್ಯ
೮.	ಐಸಾಕ್ ನ್ಯೂಟನ್ (ಗುರುತ್ವಾಕರ್ಷಣ ತತ್ವ ಬೋಧಕ)	ರೈತ
೯.	ಅಬ್ರಹಾಂ ಲಿಂಕನ್ (ಅಮೆರಿಕಾದ ಅಧ್ಯಕ್ಷ)	ಮರಗೆಲಸದವ
೧೦.	ಮೈಕೇಲ್ ಫಾರಡೆ (ವಿದ್ಯುತ್ ವಿಭಜನ ನಿಯಮ)	ಕಮ್ಮಾರ
೧೧.	ಯೋಹನ್ ಕೆಪ್ಲರ್ (ಖಗೋಳ ವಿಜ್ಞಾನಿ)	ಸೈನಿಕ
೧೨.	ಕಾರ್ಲ್ ವಿಲ್‌ಹೆಲ್ಮ್ ಫ್ರೇಡರಿಚ್ ಗೌಸ್ (ಗಣಿತಜ್ಞ)	ಕೂಲಿ

೧೩.	ಗ್ರಿಗೋರ್ ಮೆಂಡಲ್ (ತಳಿಶಾಸ್ತ್ರ ಪಿತಾಮಹ)	ರೈತ
೧೪.	ಮೇರಿ ಕ್ಯೂರಿ (ರೇಡಿಯಂ–ರೇಡಿಯೋ ಆಕ್ಟಿವಿಟಿ)	ಶಾಲಾ ಮಾಸ್ತರು
೧೫.	ಥಾಮಸ್ ಆಲ್ವಾ ಎಡಿಸನ್) (ವಿದ್ಯುದೀಪ, ಗ್ರಾಮಫೋನ್ ತಯಾರಿಕ)	ಪ್ರವಾಸಿ ಗೃಹ ನಡೆಸುವಾತ
೧೬.	ಥಾಮಸ್ ಹಾರ್ಡಿ (ಕಾದಂಬರಿಕಾರ)	ಕಲ್ಲುಕುಟಿಕ
೧೭.	ರಾಮಾನುಜನ್ (ಗಣಿತಜ್ಞ)	ಬಟ್ಟೆ ಅಂಗಡಿ ಗುಮಾಸ್ತ
೧೮.	ಸಿ. ವಿ. ರಾಮನ್	ಶಾಲಾ ಉಪಾಧ್ಯಾಯರು, ಅನಂತರ ಕಾಲೇಜು ಅಧ್ಯಾಪಕ
೧೯.	ಬಾಬಾ ಸಾಹೇಬ್ ಅಂಬೇಡ್ಕರ್	ಮಿಲಿಟರಿ
೨೦.	ಲೀಲಾವತಿ (ಗಣಿತಜ್ಞೆ)	ಗಣಿತ ಸಂಕೇತ ಪದ್ಧತಿ ಪರಿಚಯಿಸಿದವ

ಹೀಗೆ ಪ್ರತಿಭೆ ಮತ್ತು ಇತರ ಅನೇಕ ಗುಣ ವಿಶೇಷಗಳು ಒಂದೇ ಜೀನನ್ನು ಅವಲಂಬಿಸಿದೆ. ಅನೇಕ ಜೀನುಗಳ ಪರಿಣಾಮಗಳಿಂದ ಅಭಿವ್ಯಕ್ತಿಯು ಸ್ತರಗಳು ಭಿನ್ನವಾಗುತ್ತವೆ.


ಮೇಲಿನ ಉದಾಹರಣೆಯಲ್ಲಿ ಬುದ್ಧಿಶಕ್ತಿಯು ಒಟ್ಟು ಜೀನುಗಳು ೪ ಜೋಡಿಗಳೆಂದು ಪರಿಗಣಿಸಿದರೆ. ಆ ಜೋಡಿಗಳು ಪರ್ಯಾಯವಾಗಿ ಯಾವುದೇ ರೀತಿಯಲ್ಲಿ ಸಂಯೋಗಗೊಳ್ಳುವ ಸಂಭವವುಂಟು. ಹೀಗಾಗಿ ತಂದೆ ತಾಯಿಗಳಿಂದ ಮಕ್ಕಳಿಗೆ ಯಾವ ಜೋಡಿಯ ಜೀನುಗಳು ವರ್ಗಾಯಿಸುವುದೋ ಅದರಂತೆ ಗುಣಾವಗುಣ ವಿಶೇಷಗಳು ವ್ಯಕ್ತಿಯಿಂದ ವ್ಯಕ್ತಿಗೆ ವ್ಯತ್ಯಾಸವಾಗುತ್ತವೆ. ಪ್ರತಿಭೆಯ ಜೀನುಗಳೇ ಇಲ್ಲದೆ ಎಲ್ಲಾ ೮ (೪ ಜೋಡಿ) ಜೀನುಗಳೂ ಸಾಧಾರಣವದ್ದೇ ಆಗಿರುವ ತಂದೆ ತಾಯಿಗಳಿಗೆ ಪ್ರತಿಭಾನ್ವಿತ ಮಗು ಜನಿಸುವುದು ಸಾಧ್ಯವಿಲ್ಲ. (ಹಾಗೇನಾದರೂ ಆಗಬೇಕಾದಲ್ಲಿ ವಿಕೃತಿಯ ಮೂಲಕ ಮಾತ್ರ ಸಾಧ್ಯ). ಸಾಧಾರಣ ಮತ್ತು ಅಪೂರ್ವ ಜೀನುಗಳೆರಡೂ ಇರುವ ಕುಟುಂಬದಲ್ಲಿ ವೈವಿಧ್ಯಮಯ ಸಂಯೋಜನೆಗಳಿಗೆ ಅವಕಾಶವಿರುವುದರಿಂದ ಹುಟ್ಟುವ ಮಕ್ಕಳೂ ಭಿನ್ನವಾದ ಬುದ್ಧಿಶಕ್ತಿಯುಳ್ಳವರಾಗಲು ಸಾಧ್ಯ

ಹೀಗೆ ಸೃಜನಶೀಲತೆಗೆ ಸಂದರ್ಭಶಿಶುವಾಗಿ ಜನಿಸಿದ ವ್ಯಕ್ತಿಗಳು ಆಗೊಮ್ಮೆ, ಈಗೊಮ್ಮೆ ಲೋಕದಲ್ಲಿ ಬೆಳಗುತ್ತಾರೆ. ಆತ ಪವಾಡಪುರುಷನಾಗದೇ ತನ್ನಲ್ಲಿ ಸುಪ್ತ

ವಾಗಿರುವ ವಂಶಾವಳಿಯನ್ನು ಯುಕ್ತವಾಗಿ ಬಳಸಿಕೊಳ್ಳುವ ವ್ಯಕ್ತಿ. ಸ್ವಂತಿಕೆಯಿಂದ ಲೋಕಕಲ್ಯಾಣಕ್ಕಾಗಿ ದುಡಿದ ಕೆಲವೇ ವ್ಯಕ್ತಿಗಳಿಂದ ಕೆಲವು ಆವಿಷ್ಕಾರಗಳಾಗಿದ್ದರೂ ಅದನ್ನು ಯೋಗ್ಯ ರೀತಿಯಲ್ಲಿ ಬಳಸಿಕೊಳ್ಳುವ ಜನತೆ ಅವಶ್ಯಕ. ಪ್ರೊ॥ ಜಿ. ಟಿ. ನಾರಾಯಣರಾವ್ ತಮ್ಮ ಕೃತಿ 'ರಾಮಾನುಜನ್ ಬಾಳಿದರಿಲ್ಲಿ' ಎಂಬ ಪುಸ್ತಕದಲ್ಲಿ ಅರಿಕೆ ಮಾಡಿಕೊಳ್ಳುವಾಗ ಬೈಬಲ್‌ನ ಸುಪರಿಚಿತ ಸೂಕ್ತಿಯನ್ನು ಕವಿ ಅಲೆಗ್ಸಾಂಡರ್ ಪೋಪ್, ಗುರುತ್ವಾಕರ್ಷಣ ತತ್ವವನ್ನು ವಿವರಿಸಿದ ಸರ್ ಐಸಾಕ್ ನ್ಯೂಟನ್‌ನ ಪ್ರತಿಭೆ ವಿವರಿಸಲು ಹೀಗನ್ನುತ್ತಾನೆ ಎಂದಿದ್ದಾರೆ,

> ನಿಸರ್ಗನಿಯಮಗಳನಂತ ಕಾಲದ
> ಅಖಂಡ ನಿದ್ರೆಯೊಳರಗಿರಲು
> ನ್ಯೂಟನ್ ಬರಲೆಂದನ್ ಭಗವಂತನ್
> ಅಗೋ! ಬೆಳ್ಳಂಬೆಳಗು ಎಲ್ಲೆಲ್ಲೂ

ಎನ್ನುತ್ತಾರೆ.



ಓ ದೇವರೇ ನನ್ನ ಮುಕ್ತ ಆಯ್ಕೆಯ ಕಾರಣದಿಂದಾಗಿ ಮತ್ತು ನಿನ್ನ ಪ್ರೀತಿಯ ಸಲುವಾಗಿ ನಾನು ಇಲ್ಲಿಯೇ ಇದ್ದು ನಿನ್ನ ನಿರ್ಧಾರ ಏನನ್ನು ಅಪೇಕ್ಷಿಸುತ್ತದೆಯೊ ಅದನ್ನು ಮಾಡುತ್ತೇನೆ, ನಾನು ಹಿಂತಿರುಗುವುದಿಲ್ಲ. ನನ್ನ ಜನಾಂಗ ಬಡವರಿಂದ ತುಂಬಿದೆ. ಅವರ ರಕ್ಷಣೆಯೇ ನನ್ನ ರಕ್ಷಣೆ. ಅವರ ಆರೋಗ್ಯವೇ ನನ್ನ ಆರೋಗ್ಯ. ಅವರ ಮನೆಯೇ ನನ್ನ ಮನೆ. ಅವರು ಇರುವಂತೆ ನಾನಿರುವೆ. ಅವರ ಭಾಷೆಯಲ್ಲಿ ಅವರೊಂದಿಗೆ ಮಾತನಾಡುವೆ.

—ಮದರ್ ತೆರೆಸಾ

ಅಮರ ವಟವೃಕ್ಷ

(ಏಷ್ಯಾ ಜನಜೀವನ ಮತ್ತು ಸಂಸ್ಕೃತಿಯ ಸಾಕ್ಷಿ)

ಟಿ. ವಿ. ಅನ್ನಪೂರ್ಣಮ್ಮ
ಎಂ.ಐ.ಜಿ. ನಂ. ೫, 'ಶ್ರೀಕರ'
ಹುಡ್ಕೊ ಮೊದಲ ಹಂತ, ಉದಯರವಿ ರಸ್ತೆ
ಕುವೆಂಪುನಗರ, ಮೈಸೂರು-೫೭೦ ೦೨೩.

ಸುಮಾರು ೨೩ ವರ್ಷಗಳ ಹಿಂದೆ ಕಾಂಬೋಡಿಯಾದ ಪ್ರಾಚೀನ ವಟ ಮಂದಿರವನ್ನು ನೋಡಿ ನಾನು ನನ್ನ ಗೈಡನ್ನು, ಸಾಲುಗಳ ಮಧ್ಯೆ ನಿಂತಿರುವ ವಿಶಾಲಕಾಯ ವಟ ವೃಕ್ಷದ ವಯಸ್ಸನ್ನು ಕೇಳಿದೆ. ಆತ ಈ ರೀತಿ ಉತ್ತರಕೊಟ್ಟ, "ಈ ಮಂದಿರ ಕಟ್ಟಿದಾಗಿನಿಂದ ಇದೆ" ಈತನ ಮಾತು ನಿಜ ಇರಲಾರದೆಂದು ನಾನು ಯೋಚಿಸಿದೆ. ಖ್ಮೆರ್ ರಾಜ್ಯ ಒಂಭತ್ತನೆ ಶತಮಾನದ ಅನಂತರವೇ ಆಗ್ನೇಯ ಏಷ್ಯಾದ ಮುಖ್ಯ ಭಾಗದ ಅತ್ಯಂತ ಬಲಿಷ್ಠ ಹಾಗೂ ಸಾಂಸ್ಕೃತಿಕವಾಗಿ ಮುಂದುವರಿದ ರಾಜ್ಯವಾಗಿತ್ತು. ಅದಾದ ಸುಮಾರು ನಾಲ್ಕು ನೂರು ವರ್ಷಗಳ ನಂತರ ಅಂದರೆ ಹನ್ನೆರಡನೇ ಶತಮಾನದಲ್ಲಿ ವಟ ಮಂದಿರ ಕಟ್ಟಲ್ಪಟ್ಟಿತ್ತು.

ಎದುರಿಗೆ ಕೊಂಬೆಯಿಂದ ಭೂಮಿಯ ವರೆಗೆ ತಲುಪಿದ್ದ ಆ ಬೀಳಲುಗಳನ್ನು ನೋಡಿದೆ. "ಇವು ಎಂಟು ನೂರು ವರ್ಷಗಳಷ್ಟು ಹಳೆಯವಂತೂ ಆಗಿರಲಾರವು" ಎಂದು ಹೇಳಿದೆ. ಗೈಡು ತನ್ನ ಭುಜಗಳನ್ನು ಕುಣಿಸಿ ಕೇಳಿದ "ಆಲದ ಮರ ಎಷ್ಟು ದಿನಗಳವರೆಗೆ ಬದುಕಿರಬಹುದು? ಈ ಮರ ಆ ಮಂದಿರದಷ್ಟು ಪ್ರಾಚೀನವೆನಿಸುವುದೇ ಇಲ್ಲವೇ?"

ಆತನ ಹೇಳಿಕೆ ಸರಿಯಾಗಿತ್ತು. ವಯಸ್ಸಾದಂತೆಲ್ಲ ಈ ಬೀಳಲುಗಳಲ್ಲಿ ಗಂಟುಗಳು ಆಗಿದ್ದವು ಹಾಗೂ ಇವು ಸೆಟೆದು ನಿಂತಿದ್ದವು. ಚರಿತ್ರ ಪೂರ್ವಕಾಲದ ಅವು ಮಂದಿರದ ನುಣುಪಾದ ಮತ್ತು ಕೆತ್ತಲ್ಪಟ್ಟ ಶಿಲಾಖಂಡಗಳನ್ನು ಹಿಡಿಕೈನಂತೆ ಬಲವಾಗಿ ಹಿಡಿದುಕೊಂಡಿದ್ದವು. ಇವುಗಳ ಒತ್ತಡದಿಂದ ಶಿಲೆಗಳ ದೊಡ್ಡ ದೊಡ್ಡ ಭಾಗಗಳು ತುಂಡು ತುಂಡಾಗಿ ಹರಡಿ ಹೋಗಿದ್ದವು. ಈ ಬೇರುಗಳು ಖ್ಮೆರ ವಂಶದ ಈ ನ್ಯಾಸವನ್ನು ನಾಶ ಮಾಡಲೇಬೇಕೆಂದು ನಿಶ್ಚಯಿಸಿವೆಯೇನೋ ಎನ್ನಿಸುತ್ತಿತ್ತು.

ಆಧಾರ: ೧೯೮೭ನೇ ಆಗಸ್ಟ್‌ನ 'ಸರ್ವೋತ್ತಮ' ಹಿಂದಿ ಮಾಸ ಪತ್ರಿಕೆಯಲ್ಲಿ ಪ್ರಕಟವಾದ ಪೀಟರ್ ಸ್ಟೀವೆನ್ಸ್ ರವರ "ಅಮರ ವಟವೃಕ್ಷ" ಎಂಬ ಲೇಖನ.

ದಕ್ಷಿಣ ಏಷ್ಯಾದ ಎಲ್ಲ ಮರಗಳಲ್ಲೂ ಆಲದ ಮರ ಅದ್ವಿತೀಯವಾದದ್ದು. ಅಂತರ ಕೇವಲ ಇದರ ಬೆಳವಣಿಗೆಯಲ್ಲಿ ಮಾತ್ರವೇ ಅಲ್ಲ. ಪ್ರಜ್ವಲಿಸುವ ಸೂರ್ಯನ ತಾಪವನ್ನು ಸಹಿಸಿಕೊಂಡು ಸಾಕಷ್ಟು ವಿಶಾಲವಾದ ಜಾಗದಲ್ಲಿ ನೆರಳನ್ನು ಪಸರಿಸುವುದರಲ್ಲೂ ಇದೆ. ಸಾವಿರಾರು ವರ್ಷಗಳಿಂದ ಮಾನವನೊಡನೆ ಇಟ್ಟುಕೊಂಡಿರುವ ನಿಕಟ ಸಂಬಂಧದಿಂದಾಗಿಯೇ ಇದು ಕುಳಿತು ಹರಟೆ ಹಡೆಯುವ ಜಾಗವಾಗಿಯೂ, ಪೂಜಾಸ್ಥಾನವಾಗಿಯೂ, ವ್ಯಾಪಾರದ ಕೊಡುಕೊಳ್ಳುವಿಕೆಯ ಕೇಂದ್ರವಾಗಿಯೂ ಇದೆ.

ತನ್ನ ಅಸಂಬದ್ಧ ಬೆಳವಣಿಗೆಯಿಂದ ಪರೋಪಜೀವಿ ಬಳ್ಳಿ, 'ಅಮರಬೇಲ್'ನಂತೆ 'ಕುತ್ತಿಗೆ ಹಿಸುಕುವ ಅಂಜೂರ' ಎಂಬ ಹೆಸರಿನಿಂದ ಪ್ರಸಿದ್ಧವಾಗಿರುವ ಆಲದ ಮರ ಒಂದು ಎತ್ತರವಾದ ವೃಕ್ಷ-ಒಂದು ವಾಯುವಿಳ ವೃಕ್ಷ. ಯಾವುದೋ ಮರದ ಬಿಲದಲ್ಲಿ ಬೆಳೆಯುವುದು ಹಾಗೂ ಗಾಳಿಯ ತೇವ ಮತ್ತು ಪೋಷಕ ತತ್ವಗಳ ಆಸರೆಯಿಂದಲೇ ಜೀವಂತವಾಗಿರುವುದು ಇದರ ಸರ್ವೇಸಾಮಾನ್ಯವಾದ ವಿಷಯ. ಈ ಬಿಲಗಳಲ್ಲಿ ಶೇಖರಿಸಲ್ಪಟ್ಟ ಮಣ್ಣಿನ ಮೇಲೆ ಪಕ್ಷಿಗಳು, ಬಾವಲಿ ಅಥವಾ ಕೋತಿಗಳು ಇದರ ಬೀಜಗಳನ್ನು ತಮ್ಮ ಹಿಕ್ಕೆಗಳ ಮೂಲಕ ಅಥವಾ ಹಾಗೆಯೇ ತಲಪಿಸಿ ಬಿಡುತ್ತವೆ. ಇದರ ಗಿಡ ದೊಡ್ಡದಾಗ ತೊಡಗಿದಾಗ ಇದರ ಬೇರುಗಳು, ತಾನು ಬೆಳೆದಿರುವ ಮರಗಳ ಕಾಂಡದೊಳಗಿನವರೆಗೆ ನುಗ್ಗತೊಡಗುತ್ತವೆ. ಈ ಬೇರುಗಳು ಭೂಮಿಯವರೆಗೆ ತಲುಪಿ, ಆ ಮರದ ಕಾಂಡದ ಬೆಳವಣಿಗೆಯನ್ನು ತಡೆದುಬಿಡುತ್ತವೆ. ಹಾಗೂ ಅದರ ಪ್ರಾಣವನ್ನೇ ಹೀರಿಬಿಡುತ್ತವೆ. ಆಲದಲ್ಲಿ ಎರಡು ಎಲ್ಲಕ್ಕಿಂತ ಪ್ರಸಿದ್ಧ ಬೇಧಗಳಿವೆ. ಉಷ್ಣ ಪ್ರದೇಶದಲ್ಲಿ ಬೆಳೆಯುವ ವಿಶ್ವದಲ್ಲೇ ಅತ್ಯಂತ ವಿಶಾಲವಾದ ಭಾರತೀಯ ವೃಕ್ಷ. ಇನ್ನೊಂದು ಅವಶ್ಯಕತೆಗಿಂತಲೂ ಸಣ್ಣದಾಗಿರುವ ಜಾತಿಯ ಮರ. ಇದರ ಕೊಂಬೆಗಳಲ್ಲಿ ಬೀಳಲುಗಳೂ ಕಡಿಮೆಯಾಗಿರುತ್ತವೆ. ಆಲದ ಬೀಜದಿಂದ ವಿಕಸಿತವಾಗುವ ಒಂದು ಕಾಲ್ಪನಿಕ ಭಾರತೀಯ ಸಂಘದ ಪುನಾರಚನೆ ಮಾಡೋಣ. ನಮ್ಮ ಈ ಆಲದ ಪೂರ್ವಜ ಆಲದ ಮರ ಅರ್ಧ ಇಂಚು ವ್ಯಾಸವುಳ್ಳ ಹಣ್ಣುಗಳನ್ನು ಕೊಟ್ಟಿತ್ತು. ಈ ಹಣ್ಣಿನ ಒಳಗೇ ಸ್ತ್ರೀ ಮತ್ತು ಪುರುಷ ಪುಷ್ಪವಿದೆ. ಇದರ ಜೊತೆಗೆ ಪರಾಗ ಕತೃಗಳಾದ ಸಣ್ಣ ಸಣ್ಣ ಕೀಟಗಳೂ ಇವೆ. ವಸಂತ ಋತುವಿನಲ್ಲಿ (ಫೆಬ್ರುವರಿ ಮತ್ತು ಮಾರ್ಚಿ ತಿಂಗಳ ಮಧ್ಯೆ) ಈ ಹಣ್ಣುಗಳು ಪಕ್ವವಾಗಿ ಕೆಂಪಾದುವು. ಇವುಗಳನ್ನು ಪಕ್ಷಿಗಳು ತಿಂದುವು. ಅವುಗಳ ಪಾಚನ ಕ್ರಿಯೆಯ ಮೂಲಕ ಈ ಬೀಜಗಳು ಅವುಗಳ ಹಿಕ್ಕೆಗಳ ಜೊತೆಗೆ ಯಾವುದಾದರೂ ಆಶ್ರಯ ಕೊಟ್ಟಿರುವ ವೃಕ್ಷದ ಕೊಂಬೆಗಳ ಮಧ್ಯದ ಪೊಟರೆಗಳಲ್ಲಿ ಬಿದ್ದುವು.

ಉಷ್ಣವಲಯದ ವಾತಾವರಣದ ಕಾರಣ ಬಹಳ ಶೀಘ್ರವಾಗಿ ಈ ಬೀಜಗಳಲ್ಲಿ ಮೊಳಕೆಗಳು ಬಂದುವು. ಹಾಗೇ ತನ್ನ ತೆಳ್ಳಗಿನ ಹಗ್ಗದಂತಿರುವ ಬೇರುಗಳನ್ನು ವೃಕ್ಷದ ಕಾಂಡದೊಳಕ್ಕೆ ನುಗ್ಗಿಸಲು ಪ್ರಾರಂಭಿಸಿ

ದುವು. ಭೂಮಿಯವರೆಗೆ ಹೋದ ಬೇರುಗಳು ಅಲ್ಲಿನ ಮಣ್ಣಿನಲ್ಲಿ ಗಟ್ಟಿಯಾಗಿ ನಿಲ್ಲಲಾರಂಭಿಸುತ್ತವೆ. ಈ ಬೇರುಗಳು ಕ್ರಮೇಣ ಪುಷ್ಟಿಯಾಗುತ್ತವೆ, ಗಟ್ಟಿಯಾಗುತ್ತವೆ. ಇದರ ಜೊತೆಗೆ ಇತರ ಬೇರುಗಳೂ ಕೆಳಭಾಗಕ್ಕೆ ಬರಲಾರಂಭಿಸುತ್ತವೆ. ನಂತರ ಒಂದು ಪಾಶವಿಕ ಬಲೆಯಂತೆ ಮಾಡಿ ಆಧಾರ ವೃಕ್ಷದ ಕಾಂಡವನ್ನು ನಾಲ್ಕೂ ಕಡೆಗಳಿಂದ ಬಲವಾಗಿ ಹಿಡಿದು ಬಿಡುತ್ತವೆ. ಆಲದ ಮರದ ಈ ಹಿಡಿತದಲ್ಲಿ ಸಿಕ್ಕಿಕೊಂಡ ವೃಕ್ಷ ಬಹಳ ಬೇಗ ಸತ್ತು ಹೋಗುತ್ತದೆ.

ವರ್ಷಗಳು ಕಳೆದುವು. ಆಲದ ಮರ ಇಪ್ಪತ್ತು ಅಡಿಯಷ್ಟು ಎತ್ತರವಾಗಿದೆ. ಸುತ್ತಲೂ ಹರಡಿರುವ ಇದರ ಸಣ್ಣ ಸಣ್ಣ ಕೊಂಬೆಗಳು ಸುಮಾರು ೮೦ ಚದರ ಅಡಿಯಷ್ಟು ಜಾಗವನ್ನು ಆಕ್ರಮಿಸಿಕೊಳ್ಳುತ್ತವೆ. ಇದರ ಛತ್ರಿಯಂಥ ನೆರಳು ತನ್ನ ಬುಡದಲ್ಲಿರುವ ಭೂಮಿಯ ತೇವವನ್ನು ಸೂರ್ಯನ ತಾಪದಿಂದ ರಕ್ಷಿಸುತ್ತದೆ ಹಾಗೂ ತನ್ನ ಮಂದ ಮಾರುತದಿಂದ ಇದಕ್ಕೆ ಹೆಚ್ಚಿನ ತೇವವನ್ನು ಕೊಡುತ್ತದೆ.

ಈ ಆಲದ ಮರದ ಹತ್ತಿರದಿಂದಲೇ ಧೂಳು ತುಂಬಿದ ಒಂದು ಕಾಲುದಾರಿ ಹೋಗುತ್ತದೆ. ಇದು ಉತ್ತರ ಮತ್ತು ದಕ್ಷಿಣದ ಪಟ್ಟಣಗಳಲ್ಲಿ ಸಂಪರ್ಕವೇರ್ಪಡಿಸುತ್ತದೆ. ಒಂದು ದಿನ ಒಬ್ಬ ಸನ್ಯಾಸಿ ಇಲ್ಲಿ ಬಂದು ತನ್ನ ಲಾಠಿಯನ್ನು, ಮರದಿಂದ ನೇತಾಡುತ್ತಿರುವ ಬಿಳಲಿಗೆ ಒರಗಿಸಿ ಇಡುತ್ತಾನೆ ಮತ್ತು ಪಲ್ಪಿ ಹೊಡೆದು ಅಲ್ಲಿ ಕುಳಿತುಕೊಳ್ಳುತ್ತಾನೆ. ಆಲದ ಸದಾಕಾಲ ಮಧುರವಾಗಿರುವ ಹರಿದ್ವರ್ಣದ ಎಲೆಗಳ ತಂಪು ನೆರಳಿನಲ್ಲಿ ಅವರು ಆಶ್ರಯ ಪಡೆಯುತ್ತಾರೆ. ಮರದ ಬೇರುಗಳ ಮಧ್ಯದಲ್ಲಿ ಕುಳಿತು ಅವರು ತಪಸ್ಸು ಮಾಡಲಾರಂಭಿಸುತ್ತಾರೆ. ಅಲ್ಲಿ ಒಂದು ವೇದಿಕೆ ಸ್ಥಾಪಿಸಿ ಅದನ್ನು ರಕ್ಷಿಸಲಾರಂಭಿಸುತ್ತಾರೆ. ಈ ಹೊಸ ಆಶ್ರಮದ ಸುತ್ತಲೂ ಇರುವ ಬೇರುಗಳು ಹಾಗೂ ಬಿಳಲುಗಳಿಗೆ ಅವರು ಕೆಂಪು ಬಟ್ಟೆಗಳನ್ನು ಕಟ್ಟುತ್ತಾರೆ.

ಆ ಕಡೆಯಿಂದ ಹೋಗುವ ದಾರಿಹೋಕರೂ ಹಗಲಿನ ತಾಪದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಅಲ್ಲೇ ಬರುತ್ತಾರೆ. ನೆರಳಿನಲ್ಲಿ ಕುಳಿತು ವಿಶ್ರಾಂತಿ ಪಡೆಯುತ್ತಾರೆ ಮತ್ತು ಪ್ರಯಾಣ ಸುಖಮಯವಾಗಲೆಂದು ಪ್ರಾರ್ಥಿಸುತ್ತಾರೆ. ಉತ್ತರದಿಂದ ಬಂದ ವ್ಯಾಪಾರಿಗಳು ಇಲ್ಲೇ ತಂಗುತ್ತಾರೆ. ಸಮೀಪವಿರುವ ಬಿಳಲುಗಳಿಗೆ ತಮ್ಮ ಹಿತ್ತಾಳೆ ಪಾತ್ರೆಗಳನ್ನು ನೇತುಹಾಕುತ್ತಾರೆ. ದಕ್ಷಿಣದಿಂದ ಬರುವ ಯಾತ್ರಾರ್ಥಿಗಳು, ಉತ್ತರ ಭಾಗದ ಸುದ್ದಿ ಸಮಾಚಾರಗಳನ್ನು ಕೇಳಲು ಹಾಗೂ ಈ ವ್ಯಾಪಾರಿಗಳೊಡನೆ ವ್ಯವಹಾರ ಮಾಡಲು ಅಲ್ಲೇ ತಂಗುತ್ತಾರೆ.

ಯಾತ್ರಾರ್ಥಿಗಳು ಬಂದು ಸೇರಿದ್ದರಿಂದ, ಆಹಾರ ಸಾಮಗ್ರಿಗಳನ್ನು ಮಾರುವವರೂ ಸಹ ಇಲ್ಲಿ ಬಂದು ಸೇರಿದರು. ಅವರು ಆಲದ ಮರದ ಪ್ರಾಕೃತಿಕವಾಗಿ ನಿರ್ಮಿಸಿರುವ ತೋರಣದ ಕೆಳಗೆ ತಮ್ಮ ನೆಲೆಯನ್ನು ನಿರ್ಮಿಸಿಕೊಂಡರು. ಕೆಲವೇ ದಿನಗಳಲ್ಲಿ ಆಲದ ಮರದ ಕೆಳಗೆ ಒಂದು ಚಿಕ್ಕ

ಸಮುದಾಯವೇ ಬಂದು ಸೇರಿತ್ತು. ಹತ್ತಿರದಲ್ಲೇ ಒಂದು ಭಾವಿಯನ್ನು ತೋಡಲಾಯಿತು. ಆಲದ ಕೊಗಟೆಯಂತಿರುವ ತೆಳ್ಳನೆಯ ಬೇರುಗಳು ಹಗ್ಗ ಹೊಸೆಯುವ ಕೆಲಸಕ್ಕೂ, ಮೇಲಿಂದ ನೇತಾಡುವ ದಪ್ಪ ಬಿಳಲುಗಳು ಒಂದು ಸಣ್ಣ ಗುಡಾರದ ಕಂಬ ಮತ್ತು ಎತ್ತಿನ ಗಾಡಿಯ ನೊಗವನ್ನು ಮಾಡಲು ಉಪಯೋಗಕ್ಕೆ ಬರಲಾರಂಭಿಸಿತು. ಈ ಕಡೆಯಿಂದ ಹೋಗುವ ಪ್ರಯಾಣಿಕರು ಇವುಗಳನ್ನು ಕೊಳ್ಳುತ್ತಿದ್ದರು.

ಮಣ್ಣಿನ ಮನೆಗಳನ್ನು ಕಟ್ಟಲಾರಂಭಿಸಲಾಯಿತು. ಸುತ್ತಲೂ ಒಂದು ಚಿಕ್ಕ ಪಟ್ಟಣವೇ ಸೃಷ್ಟಿಯಾದಂತಾಯಿತು. ಸಂತೋಷ, ಉಲ್ಲಾಸಗಳಿಂದ ಕೂಡಿ ವ್ಯಾಪಾರ ನಡೆಯುತ್ತಿದ್ದ, ಮಧ್ಯದಲ್ಲಿ, ನಿಂತ ಆಲದಮರದ ಪ್ರದೇಶ ಒಂದು ವ್ಯಾಪಾರದ ಚೌಕವೇ ಆಯಿತು. ಪೀಳಿಗೆಯ ನಂತರ ಪೀಳಿಗೆಗಳು ಬಂದುವು. ವಟವೃಕ್ಷದ ನೆರಳಿನಲ್ಲಿ ಪದೇ ಪದೇ ಪೂಜಾಸ್ಥಳದ ಸ್ಥಾಪನೆಯಾಯಿತು. ಅವುಗಳ ವಿಷಯವಾಗಿ ಕಟ್ಟುಕಥೆಗಳು ಪ್ರಚಲಿತವಾದುವು. ಪಟ್ಟಣದ ಹಿರಿಯರೂ ವೃದ್ಧರೂ ತಮ್ಮ ಪೂರ್ವಿಕರಂತೆಯೇ ಸಂಜೆಹೊತ್ತಿನಲ್ಲಿ ಈ ಮರದ ಕೆಳಗೆ ಕುಳಿತು ಸಭೆಗಳನ್ನು ಮಾಡಲಾರಂಭಿಸಿದರು.

ಸುಪ್ರಸಿದ್ಧ ಸಿಕಂದರ ನೊಡನೆ, ಆತನ ಅಂತಿಮ ಪ್ರಮುಖ ವಿಜಯಯಾತ್ರೆಯ ಸಮಯ, ಕ್ರಿ.ಪೂ. ೩೨೭ರಲ್ಲಿ ಭಾರತಕ್ಕೆ ಬಂದಿದ್ದ ಫಾರಸೀ ದೇಶದ ಆ ಹುಡುಗ ಇಂತಹ ಒಂದು ವಟವೃಕ್ಷದ ವರ್ಣನೆಮಾಡಿದ್ದಾನೆ. ಸಿಕಂದರನ ಸೇನೆಯಲ್ಲಿದ್ದ ಸೈನಿಕರೂ, ಸೈನಿಕರಲ್ಲಿದವರೂ ಸೇರಿ ಒಂದು ಲಕ್ಷ ಇಪ್ಪತ್ತುಸಾವಿರಕ್ಕಿಂತ ಹೆಚ್ಚು ಜನರು ಅಟಕ್‌ನ ಹತ್ತಿರ ಸಿಂಧೂನದಿಯನ್ನು ದಾಟಿದರು. ಭಾರತದ ತಾಪದಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಸೈನ್ಯದ ಒಂದು ಪೂರ್ಣ ದಂಡು ಸುಖವಾಗಿ ಆಶ್ರಯ ಪಡೆಯಬಹುದಾಗಿದ್ದ ನೆರಳನ್ನು ಹೊಂದಿದ್ದ ಆ ವಿಶಾಲಕಾಯ ವೃಕ್ಷದ ಬಗೆಗೆ, ಫಾರಸಿ ದೇಶದ ಆ ಹುಡುಗ ಹೇಳಿದ್ದಾನೆ. ಎರಡು ಸಾವಿರ ಅಡಿ ವ್ಯಾಸಹೊಂದಿರುವ ಹಾಗೂ ಇಪ್ಪತ್ತುಸಾವಿರ ಜನಕ್ಕೆ ಆಶ್ರಯಕೊಡಬಲ್ಲ, ಭಾರತದ ಒಂದು ವಿಶಾಲ ವಟವೃಕ್ಷದ ಪ್ರಾಮಾಣಿಕ ಉಲ್ಲೇಖ ಸಿಗುತ್ತದೆ.

ಆಲದ, ಆಂಗ್ಲಭಾಷೆಯ ಹೆಸರು 'ಬನಾಯನ್'. ಒಂದು ವಟವೃಕ್ಷಕ್ಕೂ ಭಾರತದ ವ್ಯಾಪಾರಿಕ ಜಾತಿಯಾದ 'ಬನಿಯಾ' ಅಥವಾ 'ವಣಿಕ' ಎಂಬುವರ ಸಂಬಂಧದ ಆಧಾರದ ಮೇಲೆ, ಇಂಗ್ಲಿಷರು ಈ ವಟವೃಕ್ಷಕ್ಕೆ ಈ ಹೆಸರನ್ನು ಕೊಟ್ಟರು. ಫಾರಸಿಯ ಕೊಲ್ಲಿಯ ಇಂದಿನ ಅಬ್ಬಾಸ್ ಬಂದರ್ ಎಂದು ಪ್ರಸಿದ್ಧವಾಗಿರುವ ಗೋಂಬ್ರೂನ್ ಪಟ್ಟಣದ ಸಮೀಪ ವ್ಯಾಪಾರಿಗಳು ಒಂದು ವಿಶಿಷ್ಟವಾದ ವೃಕ್ಷದ ಸಮೀಪ ತಮ್ಮ ಪೂಜಾಸ್ಥಾನವನ್ನಾಗಿ ಮಾಡಿದ್ದರು. ಹಿಂದೂಗಳು ಈ ವಿಶೇಷ ಪೂಜೆಯನ್ನು ಮಾಡುತ್ತಾರೆ. ಸೃಷ್ಟಿಕರ್ತ ಬ್ರಹ್ಮನೇ ವಟವೃಕ್ಷ ರೂಪವನ್ನು ಧರಿಸಬೇಕಾಯಿತೆಂಬ ನಂಬಿಕೆ ಅವರಲ್ಲಿದೆ ಇಂದೂ ಸಹ ಬನಿಯಾಗಳು ಈ ವೃಕ್ಷದ ಕೆಳಗೆ ಸೇರುತ್ತಾರೆ.

ಜೈನಾದ ಆಲ ಒಂದು ವಿಷಯದಲ್ಲಿ ಅದೃಷ್ಟಶಾಲಿ. ಮನೆಯ ತೊಲೆ ಮುಂತಾದು

ವುಗಳಿಗೆ ಉಪಯೋಗಿಸುವಷ್ಟು ಇದರ ಮರ ಗಟ್ಟಿಯಾಗಿಲ್ಲ. ಇದರಲ್ಲಿ ರಸ ಬಹಳ ಹೆಚ್ಚಾಗಿರುವುದರಿಂದ, ಇದರಿಂದ ಕಿಟಕಿ ಬಾಗಿಲುಗಳನ್ನು ಸಹ ಮಾಡಲಾಗುವುದಿಲ್ಲ. ಇದರ ಮರ ಬಹಳ ತೂಕವಾಗಿರುವುದರಿಂದ ದೋಣಿಯನ್ನು ಮಾಡುವ ಕೆಲಸಕ್ಕೂ ಇದು ಬರುವುದಿಲ್ಲ. ಇದರ ಬೇರುಗಳು ಕೆಲವು ಔಷಧಗಳನ್ನು ಮಾಡಲು ಉಪಯೋಗಕ್ಕೆ ಬರುತ್ತವೆ ಇದನ್ನು ಬಿಟ್ಟರೆ ಇದಕ್ಕೆ ಬೇರೆಯಾವ ಮಹತ್ವವೂ ಇರಲಿಲ್ಲ. ಆದುದರಿಂದ ತಾವೋವಾದಿ ತತ್ವಶಾಸ್ತ್ರದಲ್ಲಿ ಇದನ್ನು 'ನಿರುಪಯೋಗಿಯ ಉಪಯೋಗಗಳು' ಎಂಬುದಕ್ಕೆ ಉದಾಹರಣೆಯಾಗಿ ಸರಿಯಾಗಿಯೇ ಪ್ರಸ್ತುತಪಡಿಸಲಾಗುತ್ತದೆ.

ಆದರೆ ವ್ಯವಹಾರ ಕುಶಲರಾದ ಚೀನೀಯರು ಆಲದಮರವನ್ನು ತಮ್ಮ ದೇವಿ ದೇವತೆಗಳ ನೈಸರ್ಗಿಕ ಸ್ಥಾನವನ್ನಾಗಿ ಮಾಡಿದರು. ಗುವಾಂಗರ್‌ಝಾವೂ ಎಂಬಲ್ಲಿ ಒಂದು ಸುಪ್ರಸಿದ್ಧ ತೀರ್ಥಸ್ಥಾನದ ಹೆಸರು "ಆರು ಆಲಗಳ ಮಂದಿರ", ಅಲ್ಲಿ ಇಲ್ಲಿಯವರೆಗೂ ಮರಗಳ ಕೆಳಗೆ ಜನಪ್ರಿಯವಾದ ದೇವಿ ದೇವತೆಗಳ ವಿಗ್ರಹಗಳನ್ನು ಇಡಲಾಗುತ್ತದೆ. ಈ ಪರಂಪರೆ ನಾಲ್ಕು ಸಾವಿರ ವರ್ಷಗಳಿಗಿಂತ ಹೆಚ್ಚು ಕಾಲದಿಂದ ನಡೆದು ಬರುತ್ತಿದೆ.

ದಕ್ಷಿಣ ಚೈನಾದಲ್ಲಿ ಹಳ್ಳಿಯ ವೃಕ್ಷ ಅಥವಾ ಜಿಲ್ಲೆಗಳ ಸರಹದ್ದಿನಲ್ಲಿ ಆಲದ ಮರಗಳನ್ನು ನೆಡಲಾಗುತ್ತದೆ. ವಾಸ್ತವವಾಗಿ ಈ ಇಲಾಖೆಯಲ್ಲಿ ಆಲದಮರಗಳ ಸಂಖ್ಯೆ ಎಷ್ಟೊಂದಿದೆಯೆಂದರೆ ಫುಝಾವೂ ಎಂಬ ನಗರವನ್ನು ವಟನಗರವೆಂದೇ ಹೇಳಲಾಗುತ್ತದೆ. ಬೇಸಿಗೆಯಲ್ಲಿ ಛತ್ರಿಯಂತಿರುವ ಇದರ ಕೊಂಬೆಗಳು ಸೂರ್ಯನ ತಾಪದಿಂದ ರಕ್ಷಿಸುತ್ತವೆ, ಛಳಿಗಾಲದಲ್ಲಿ ಹಿಮಯುಕ್ತ ಗಾಳಿಯಿಂದ ರಕ್ಷಿಸುತ್ತವೆ. ಈ ಶತಮಾನದ ಆರಂಭದಲ್ಲಿ, ಪ್ರಸಿದ್ಧ ಚೀನೀ ಕಲಾವಿದ ಫೇಂಗ್ ಝುಕಾಯೀ, ಆಲದ ಮರಗಳ ಕೆಳಗೆ ಹರಟೆ ಹೊಡೆಯುತ್ತಿರುವ ಗ್ರಾಮೀಣರ ಅನೇಕ ಚಿತ್ರಗಳನ್ನು ಬರೆದಿದ್ದ.

ಥೈಲೆಂಡಿನಲ್ಲಿ ಆಲದಮರವನ್ನು ಬಹಳ ಶ್ರದ್ಧೆಯಿಂದ, ವಿಶಾಲ ವೃಕ್ಷಗಳಲ್ಲಿ ವಾಸ ಮಾಡುವ ಮಂಗಳಕರ ವನದೇವತೆಯ ಹೆಸರಿನಲ್ಲಿ "ಥೆಪ್ಪರಕ" ಎಂದು ಕರೆಯುತ್ತಾರೆ. ಪ್ರಾಚೀನ ಕಾಲದಲ್ಲಿ—ಪ್ರಾಯಶಃ ಇಂದು ಸಹ ವನದೇವತೆಯ ಅನುಮತಿಯನ್ನು ಪಡೆಯದೆ ಆಲದಂತಹ ಮರಗಳನ್ನು ಕಡಿಯುವುದಿಲ್ಲ. ಮೊದಲು ಕೊಡಲಿಯನ್ನು ಮರಕ್ಕೆ ಒರಗಿಸಿ ಇಡಲಾಗುತ್ತದೆ. ನಂತರ ಬತ್ತಿ ಮತ್ತು ಮೋಂಬತ್ತಿಯನ್ನು ಉರಿಸಲಾಗುತ್ತದೆ. ಕೊಡಲಿ ಎರಡು ದಿನಗಳವರೆಗೂ ತನ್ನ ಜಾಗದಿಂದ ಸ್ವಲ್ಪವೂ ಅಲುಗಾಡದೆ ಮೊದಲಿನ ಹಾಗೇ ಇದ್ದರೆ, ಮರಕಡಿಯುವ ವಿಷಯದಲ್ಲಿ ವನದೇವತೆಗೆ ಯಾವ ಆಕ್ಷೇಪವೂ ಇಲ್ಲವೆಂದು ತಿಳಿಯಲಾಗುತ್ತದೆ. ಕೊಡಲಿ ಕೆಳಗೆ ಬಿದ್ದಿದ್ದರೆ ಮರಕ್ಕೆ ಯಾವ ರೀತಿಯ ಹಾನಿಯನ್ನು ಊಂಟುಮಾಡುವುದಿಲ್ಲ.

ಹಾಂಗ್‌ಕಾಂಗ್‌ನಲ್ಲಿ ಸರ್ಕಾರ, ಹಳೆ ಸೈನ್ಯಾವಾಸ (ವಿಕ್ಟೋರಿಯಾ ಬ್ಯೆರಕ್)

ಕ್ಷೇತ್ರವನ್ನು ಅಭಿವೃದ್ಧಿಪಡಿಸುವುದಕ್ಕಾಗಿ ಅದನ್ನು ಮಾರಾಟಮಾಡಿತು. ಮಾರಟಕ್ಕೆ ಮೊದಲು, ಅಲ್ಲಿರುವ ಆಲದ ಮರಗಳನ್ನು ಕಡಿಯಕೂಡದೆಂದು ಸೂಚಿಸಿತ್ತು. ಈ ಭೂಮಿಯನ್ನು ಮಾರಿದ್ದರಿಂದ ಒಂದು ಅರಬ್ ಹಾಂಗ್‌ಕಾಂಗ್ ಡಾಲರಿನಷ್ಟು ದಾಖಲೆಮಾಡುವಂತಹ ಆದಾಯಬಂದಿತು. ಹೀಗಿರುವಾಗ ಸಾಕಷ್ಟು ವಿಶಾಲಕ್ಷೇತ್ರದಲ್ಲಿ ದೂರದೂರದವರೆಗೆ ತನ್ನ ಬೇರುಗಳನ್ನು ಹರಡಿನಿಂತಿರುವ ಈ ವಿಶಾಲವಟವೃಕ್ಷ ಬಹುಶಃ ಈ ಪ್ರಪಂಚದ ಅತ್ಯಂತ ಹೆಚ್ಚು ಬೆಲೆಬಾಳುವ ಮರ ಇರಬಹುದು.

ಅಂಗಕೋರ ವಟದಲ್ಲಿ ಆಲದಮರದೊಡನೆ ನನ್ನ ಪ್ರಥಮ ಪರಿಚಯವಾದ ನಂತರ, ಅನ್ಯ ವಟವೃಕ್ಷಗಳ ಸೌಂದರ್ಯ ಹಾಗೂ ಉಪಯೋಗಗಳ ಬಗ್ಗೆ ಆಶ್ಚರ್ಯ ಚಕಿತನಾಗಿರುವೆ. ಕಲ್ಕತ್ತಾದ ಮಧ್ಯಭಾಗದಲ್ಲಿ ಸಾವಿರಾರು ಬಣ್ಣಬಣ್ಣದ ಅಲಂಕಾರ ಪಟ್ಟಿಗಳ ತೋರಣದಿಂದ ಅಂದಗೊಳಿಸಿರುವ ಆ ಜೀವಂತ ಯಾತ್ರಾಸ್ಥಳವಾಗಲೀ, ಥೈಲೆಂಡ್‌ನ ಮಂದಿರದ ಪ್ರಾಂಗಣದಲ್ಲಿ ಕೇಸರಿಬಣ್ಣದ ಬಟ್ಟೆಗಳಿಂದ ಅಲಂಕರಿಸಲ್ಪಟ್ಟ ಕಾಂಡದ ಪ್ರಾಚೀನ ವೃಕ್ಷವಾಗಲೀ ಅಥವಾ ಶ್ರೀಲಂಕಾದಲ್ಲಿ ನನ್ನ ತೋಟದ ಆ ಪ್ರಿಯವಾದ ವೃದ್ಧ ಆಲವಾಗಲೀ—ಎಲ್ಲವೂ ನನ್ನ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ.

ಇತ್ತೀಚೆಗೆ, ಹಾಂಗ್‌ಕಾಂಗ್‌ನಲ್ಲಿ ಇನ್ನೊಂದು ಆಲದಮರವನ್ನು ನೋಡಿಬಂದೆ. ಹೈಸ್ಟ್ರೀಟ್ ಮತ್ತು ಈಸ್ಟರ್ನ್ ಸ್ಟ್ರೀಟ್‌ನ ಇಲಾಖೆಯಲ್ಲಿ ಸುತ್ತಾಡಲು ಅತ್ಯುತ್ತಮ ಸಮಯವದಾಗಿತ್ತು. ಅತ್ಯಂತ ಆಧುನಿಕವಾದ ಸೆಂಟ್ರಲ್‌ಜಿಲ್ಲೆಯ ಸ್ಟೀಲ್ ಮತ್ತು ಗಾಜಿನ ವ್ಯಾಪಾರ ನಡೆಯುವ, ಮಂದಿರದಿಂದ ಕೇವಲ ಐದುನಿಮಿಷದ ಪ್ರಯಾಣದಷ್ಟು ದೂರವಿರುವ ಈ ಇಲಾಖೆಯಲ್ಲಿ ಇಂದೂ ಸಹ ಪುರಾತನ ರೀತಿ ಮತ್ತು ಪದ್ಧತಿಗಳು ಇವೆ.

ನಾನು ಸೀದ ಕಡಿದಾದ ಮೆಟ್ಟಲಿರುವ ಬೆಟ್ಟದ ಮೇಲೆ ಹತ್ತಿ ಹೋದೆ. ಇಕ್ಕಟ್ಟಾದ ರಸ್ತೆಯ ಒಂದುಕಡೆ ಇದ್ದ ಒಂದು ಚಿಕ್ಕ ಪಾರ್ಕಿನ ಸುತ್ತಲೂ ಹದಿನೈದು ಅಡಿ ಎತ್ತರದ ಕಲ್ಲಿನ ಗೋಡೆಯಿತ್ತು. ಆಲದ ಮರಗಳು ಆ ಗೋಡೆಗಿಂತ ಮೇಲಿನವರೆಗೂ ಹರಡಿತ್ತು. ಅವುಗಳ ಕೊಂಬೆಗಳಿಂದ ಹೊರಟು ಒಂದಕ್ಕೊಂದು ಸಿಕ್ಕಿಕೊಂಡು ಗೋಜಲಾಗಿದ್ದ ಬೇರುಗಳ ಬಲೆ ರಸ್ತೆಯ ಕಡೆ ಕಲ್ಲುಬಂಡೆಯ ಮೇಲೆ ಬಲೆಯಂತೆ ಹರಡಿತ್ತು.

ನಾನು ತುದಿಯವರೆಗೆ ಹೋದೆ. ನಕ್ಷತ್ರಗಳ ಬಲೆಯ ಮಧ್ಯೆ ಆಲದ ವಿಶಾಲಕಾಂಡ, ಹತ್ತಿರದ ಸಿಮೆಂಟಿನ ಕಟ್ಟಡಕ್ಕೆ ಒರಗಿ ನಿಂತಂತೆ ಕಾಣುತ್ತಿತ್ತು. ಕೆಳಗೆ ಭೂಮಿಯನ್ನು ಮುಟ್ಟಿರುವ ತಂತಿಯಬೇಲಿ ಹಾಕಲಾಗಿತ್ತು ಚೀನಿ ಲಿಪಿಯಲ್ಲಿ ಬರೆದಿರುವ ಮರದ ಆರು ಕೆಂಪು ಹಲಗೆಗಳು ಮತ್ತು ಗಾಜಿನ ಮೇಲೆ ಚಿತ್ರಿಸಿರುವ ದೇವರ ಚಿತ್ರಗಳನ್ನು ಅದಕ್ಕೆನೇ ತೂಗಾಕಲಾಗಿತ್ತು. ಕೆಳಗೆ ಭೂಭಾಗದಲ್ಲಿ ಮಣ್ಣಿನ ಕೆಲ ಬಟ್ಟಲುಗಳು ಇಡಲ್ಪಟ್ಟಿದ್ದುವು ಅವುಗಳಲ್ಲಿ ಅಗರಬತ್ತಿಯು ಬೂದಿತುಂಬಿತ್ತು ಇನ್ನೂ ಸ್ವಲ್ಪ ಸ್ವಲ್ಪ ಬೆಂಕಿಯೂ ಇತ್ತು.

ಗೋಡೆಯ ಕಡೆ ಹಿಂತಿರುಗಿದಾಗ, ಆಲದ ಮರದಿಂದ ನೇತಾಡುತ್ತಿರುವ ಬಿಳಲುಗಳ ಅರ್ಥವನ್ನು ನಾನು ತಿಳಿದುಕೊಂಡಿದ್ದೇನೆನಿಸಿತು. ಆಕಾಶದೆಡೆಗೆ ಮೇಲೆ ಹೋಗಿರುವ ಕೊಂಬೆಗಳ ಜೋಲಿಕೆಯಲ್ಲಿ ಇದು ಜೀವನದ ಅತ್ಯಂತ ಯಥಾರ್ಥ ಅಭಿವ್ಯಕ್ತಿಯೆನಿಸಿತು. ಪರಸ್ಪರ ಗೋಜಲಾಗಿರುವ ಈ ಬೇರುಗಳು ಕೆಳಗೆ ತಲುಪಿದಾಗ ಸಿಕ್ಕಿದ್ದನ್ನು ಬಿಗಿಯಾಗಿ ಹಿಡಿದುಕೊಂಡು ಬಿಡುತ್ತವೆ, ಇದು ವಾಸ್ತವವಾಗಿ ಸುರಕ್ಷಿತ ಪೃಥ್ವಿಯೊಡನೆ ಸೇರುವಿಕೆ ಹಾಗೂ ಸ್ಥಿರತೆಯ ಮನಃಪೂರ್ವಕ ಒತ್ತಾಯತಾನೇ. ಆಲವನ್ನು 'ಅಮರ ವೃಕ್ಷ'ವೆಂದು ಏಕೆ ಕರೆಯುತ್ತಾರೆಂಬುದನ್ನು ಈಗ ನಾನು ಅರಿತುಕೊಳ್ಳಲಾರಂಭಿಸಿದೆ.

ನಾನು ಗೋಡೆಯ ಹತ್ತಿರ ಸಿಂತೆ. ಹೀಗೇ ಅತ್ತಿತ್ತ ತೂಗಾಡುತ್ತಿರುವ ಬಿಳಲನ್ನು ಒಂದು ಬಿರುಕಿನಲ್ಲಿ ತುರುಕಿದೆ. ಹತ್ತಿರದಲ್ಲೇ ಹೋಗುತ್ತಿದ್ದ ಒಬ್ಬ ಚೀನೀ ಪ್ರೌಢ ಮಹಿಳೆ ನನ್ನ ಕಡೆ ನೋಡಿ ಮುಗುಳ್ನಕ್ಕಳು.



ಸರ್ವಧರ್ಮ ಸಮಭಾವ

"ಪರಸ್ಪರರ ಧರ್ಮಗಳನ್ನು ಹಳಿಯುವುದು, ಹೊಣೆಯಿಲ್ಲದೆ ದೂಷಿಸುವುದು, ಅಸತ್ಯವನ್ನೇ ನುಡಿಯುವುದು, ಮುಗ್ಧ ಜನರನ್ನು ಕೊಲ್ಲುವುದು, ಮಂದಿರ ಮಸೀದಿ ಚರ್ಚುಗಳನ್ನು ನಾಶಮಾಡುವುದು—ಇವೆಲ್ಲವೂ ಅಧರ್ಮದ ಪರಾಕಾಷ್ಠೆ-ನಾಸ್ತಿಕತೆಯ ಸಂಕೇತ."

"ತನ್ನ ಧರ್ಮದ ನಿಜವಾದ ಅರಿವನ್ನು ಪಡೆದು ಪರರ ಧರ್ಮಗಳನ್ನು ತನ್ನದರಂತೆಯೇ ಗೌರವಿಸುವುದು ಧಾರ್ಮಿಕ ಸಂಸ್ಕೃತಿ."

(ಯಂಗ್ ಇಂಡಿಯಾ ೧೯೨೭)

ಪುಸ್ತಕ ಪರಿಚಯ

ಈ ಕೆಳಕಂಡ ಪುಸ್ತಕಗಳ ಪ್ರಕಾಶಕರು: ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೇಟ್ ಲಿ., ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು.

ಕೃಷಿಕರ ಸಂಗಾತಿ—ಲೇಖಕರು: ಪಿ. ಶಿವರಾಮರೈ; ಪುಟಗಳು: ೭೨; ಬೆಲೆ: ೨೦ ರೂ.

"ಕೃಷಿಕರ ಸಂಗಾತಿ" ಪುಸ್ತಕದ ಕೊನೆಯಲ್ಲಿ ಕೊಟ್ಟಿರುವ ಕೃಷಿಗಾದೆಗಳ ಸಂಗ್ರಹದಿಂದ ತೆಗೆದುಕೊಂಡ ಈ ಗಾದೆಯನ್ನು ಗಮನಿಸಬಹುದು—"ಅಂಗೈ ಹಾಗೆ ಹೊಲ ಮಾಡಿದರೆ ಮುಂಗೈ ತುಂಬಾ ತುಪ್ಪ". ನಮ್ಮ ಪೂರ್ವಜರು ಕೃಷಿಗೆ ಕೊಟ್ಟಿರುವ ಮಹತ್ವ ಇದರಿಂದ ವ್ಯಕ್ತವಾಗುತ್ತದೆ. ಅವರ ಅನುಭವ ಸಾಂದ್ರತೆಯ ತೀವ್ರತೆಯನ್ನು ಇಲ್ಲಿ ಕಾಣಬಹುದು. ಇಂದಿಗೂ ನಮ್ಮ ಬದುಕಿನಲ್ಲಿ ಕೃಷಿಯ ಪ್ರಾಮುಖ್ಯತೆಯನ್ನು ಕಡೆಗಣಿಸಲಾಗದು.

ಕಾಲಾನುಕಾಲದ ಬದಲಾವಣೆಯಲ್ಲಿ ಕೃಷಿ ಕ್ಷೇತ್ರವೂ ಹೊರತಾಗಿಲ್ಲ. ಅಂದಿನ ದಿನಗಳಲ್ಲಿ ಸಮರ್ಥಕೃಷಿಯ ಬೆನ್ನೆಲುಬಾಗಿದ್ದ ಅವಿಭಕ್ತ ಕುಟುಂಬಗಳು ಇಂದು ಇಲ್ಲವಾಗಿವೆ. ಇಂದಿನ ವಿಭಕ್ತ ಕುಟುಂಬಗಳಲ್ಲಿ ಕೃಷಿ ಸ್ವಾವಲಂಬನೆ ಸಾಧ್ಯವಿಲ್ಲವಾಗಿದೆ. ಕೃಷಿಭೂಮಿಗಳು ವಿಭಜನೆಯಾಗಿ, ಅನೇಕ ಸಮಸ್ಯೆಗಳೂ ರೈತರನ್ನು ಕಾಡುತ್ತಿವೆ. ಸಾವಯುವ ಗೊಬ್ಬರಗಳ ಜಾಗದಲ್ಲಿ ರಾಸಾಯನಿಕ ಗೊಬ್ಬರಗಳು ಅವತರಿಸಿವೆ. ಬೀಜ, ಬಿತ್ತನೆ, ಉಳುಮೆ, ಕೂಲಿ ಇತ್ಯಾದಿ–ಸಮಸ್ಯೆಗಳು ರೈತನನ್ನು ಕಾಡುತ್ತಿವೆ. ಅನಿವಾರ್ಯವಾಗಿ ಇಂದಿನ ರೈತ ಕೃಷಿಕ್ಷೇತ್ರದ ಬದಲಾವಣೆಗಳಿಗೆ ಹೊಂದಿಕೊಳ್ಳಬೇಕಾಗಿದೆ.

ಇಂದು ಕೃಷಿ ಕ್ಷೇತ್ರವು ವೈಜ್ಞಾನಿಕ ಪರಿಧಿಯೊಳಗೆ ಅಭಿವೃದ್ಧಿಯನ್ನು ಹೊಂದುತ್ತಿದ್ದು, ಅನೇಕ ತಾಂತ್ರಿಕತೆಗಳು ರೈತನಿಗೆ ಲಭ್ಯವಾಗುತ್ತಿವೆ. ಸಾಗುವಳಿ, ಬಿತ್ತನೆ. ಗೊಬ್ಬರ, ರಾಸಾಯನಿಕ ಗೊಬ್ಬರಗಳು ಮತ್ತು ಕ್ರಿಮಿನಾಶಕಗಳು, ಕೊಯ್ಲು ಇತ್ಯಾದಿ—ವಿಷಯಗಳ ತಾಂತ್ರಿಕ ಅರಿವು ಅವಶ್ಯಕವೆನಿಸಿವೆ. ಪ್ರಜ್ಞಾವಂತ ರೈತನನ್ನು ರೂಪಿಸುವುದರಲ್ಲಿ ಸರ್ಕಾರದ ಪಾತ್ರವೂ ಅಷ್ಟೇ ಅವಶ್ಯಕವಾಗಿದೆ.

ಕೃಷಿ ಪ್ರಕಟಣೆಗಳು ರೈತನಿಗೆ ಕೃಷಿ ಜ್ಞಾನವನ್ನು ಒದಗಿಸುವಲ್ಲಿ ಸಮರ್ಥ ಮಾಧ್ಯಮವಾಗಬಲ್ಲವು. ಕೃಷಿ ತಾಂತ್ರಿಕತೆಯ ಅನೇಕ ಪ್ರಕಟಣೆಗಳು ಇಂದು ಲಭ್ಯವಾಗುತ್ತಿವೆ. ಇವುಗಳಲ್ಲಿ "ಕೃಷಿಕರ ಸಂಗಾತಿ" ಪುಸ್ತಕವೂ ಒಂದು. "ಕೃಷಿ ಮಾಹಿತಿಗಳ ಆಧಾರವಾಗಿ ಈ ಪುಸ್ತಕವನ್ನು

ಕೃಷಿಕರು ಎಂದಿಗೂ ಉಪಯೋಗಿಸ ಬಹುದು. ಕೃಷಿ ಕ್ಷೇತ್ರದ ಎಲ್ಲಾ ಕಾರ್ಯ ಕರ್ತರಿಗೂ ಇದರ ಉಪಯೋಗವಾಗ ಬಹುದು ಮತ್ತು ಕೃಷಿಗೆ ಸಂಬಂಧಪಟ್ಟ ಮಾಹಿತಿಗಳನ್ನು ಪೂರೈಸುವ ಒಂದು ಕೈಪಿಡಿಯಾಗಿ ಕೃಷಿಕರ ಸಂಗಾತಿ ಸಹಾಯಕ ವಾಗಬಹುದು" ಎಂಬ ಲೇಖಕರ ಅಭಿಪ್ರಾಯದಿಂದ ಈ ಪುಸ್ತಕದ ಮಹತ್ವ ವನ್ನು ತಿಳಿಯಬಹುದು.

'ಕೃಷಿಕರ ಸಂಗಾತಿ' ಪ್ರಮುಖವಾಗಿ ಒಂದು ಕೋಷ್ಟಕ ಕೈಪಿಡಿ. ಕೃಷಿನಿಶ್ಚಿತ ಗಳು, ಪ್ರಾಮುಖ ಪರಿವರ್ತನೆಗಳು, ಉದ್ದಳತೆ, ಚದರಳತೆ, ಘನ ಅಳತೆ, ದ್ರವ ಅಳತೆ, ತೂಕ, ಬೀಜ, ಪೋಷಕಾಂಶಗಳು, ಇತರೆ ವಿಷಯಗಳು ಮತ್ತು ಕೃಷಿಗೆ ಸಂಬಂಧಿಸಿದ ಗಾದೆಗಳು — ಹೀಗೆ ೧೧ ಅಧ್ಯಾಯಗಳ ಹರವು ಈ ಪುಸ್ತಕದಲ್ಲಿದೆ.

ಎಕರೆಯಿಂದ ಹೆಕ್ಟೇರಿಗೆ, ಹೆಕ್ಟೇರಿನಿಂದ ಎಕರೆಗೆ ಪರಿವರ್ತನೆಗಳು ಜಮೀನಿನ ವಿಸ್ತೀರ್ಣ ತಿಳುವಳಿಕೆಯನ್ನು ಕೊಡುವಲ್ಲಿ ರೈತರಿಗೆ ಸಹಾಯಕವಾಗಿದೆ. ಕೀಟನಾಶಕ ಗಳನ್ನು ತಯಾರಿಸುವ ವಿಧಾನ, ಕೀಟ ನಾಶಕಗಳನ್ನು ಬೆರೆಸಿದಾಗ ದೊರೆಯುವ ಶೇಕಡಾಂಶ, ವಿವಿಧ ಪ್ರಮಾಣದ ಸಿಂಪರಣಾ ದ್ರಾವಣವು ಆವರಿಸುವ ಪ್ರದೇಶ, ಕೀಟ ನಾಶಕಗಳನ್ನು ಧೂಳಿಸುವಾಗ ಆವರಿಸುವ ಪ್ರದೇಶ ಇತ್ಯಾದಿ ಕೀಟನಾಶಕಗಳ ಮಹತ್ವ ವನ್ನು ಗಮನಿಸಬಹುದು.

ಕೃಷಿಯಲ್ಲಿ ಪ್ರಮುಖ ಪಾತ್ರವಹಿಸುವ ಸಸ್ಯಸಂರಕ್ಷಣಾ ಉಪಕರಣಗಳು ಮತ್ತು ಕೆಲವು ಸಾಮಾನ್ಯ ಕೀಟನಾಶಕಗಳ ಬೆಲೆ ಗಳನ್ನು ರೈತರ ತಿಳುವಳಿಕೆಗಾಗಿ ಕೊಡ ಲಾಗಿದೆ. ತರಕಾರಿ, ಸಂಬಾರ ತೋಟದ ಮತ್ತು ಹಣ್ಣಿನ ಬೆಳೆಗಳನ್ನು ಬೆಳೆಯಲು ಬೇಕಾಗುವ ಬೀಜ ಅಥವಾ ಸಸ್ಯಗಳ ಪ್ರಮಾಣ, (ಒಂದು ಎಕರೆಗೆ) ಈ ಬೆಳೆಗಳಿಗೆ ಬೇಕಾಗುವ ಪೋಷಕಾಂಶಗಳ ಪ್ರಮಾಣದ ವಿವರಗಳ ಅತ್ಯುಪಯುಕ್ತ ಮಾಹಿತಿ ಈ ಪುಸ್ತಕದಲ್ಲಿವೆ.

ಕೃಷಿ ಮಾಹಿತಿಗಳ ಜೊತೆಗೆ ಇನ್ನಿತರ ಸಾಮಾನ್ಯ ವಿಷಯಗಳ ಪರಿಶಿಷ್ಟಗಳೂ ಪುಸ್ತಕದ ಮೌಲ್ಯಕ್ಕೆ ಸಹಾಯಕವಾಗಿವೆ. ಮಕ್ಕಳ ಮತ್ತು ವಯಸ್ಕರ ದಿನವೊಂದರ ಸಮತೋಲನ ಆಹಾರ ವಿವರ ಮತ್ತು ದಿನನಿತ್ಯದ ಪೋಷಕಾಂಶಗಳ ಆವಶ್ಯಕತೆ ಗಳು ಕೆಲವು ಪ್ರಾಣಿಗಳ ಸಾಮಾನ್ಯ ಗರ್ಭ ಧಾರಣೆಯ ಅವಧಿ, ರೂಪಾಯಿ ಮೌಲ್ಯ ದಲ್ಲಿ ಪ್ರಪಂಚದ ನಾಣ್ಯಗಳ ಅರಿವು ಹಾಗೂ ಕೃಷಿಗೆ ಸಂಬಂಧಿಸಿದ ಗಾದೆಗಳು—ಇವುಗಳು ಸೂಕ್ತ ಅಡಕಗಳಾಗಿವೆ.

ನಮ್ಮ ಮನೆ—ಲೇಖಕರು: ಬಿ. ಕೆ. ತಿರುಮಲಮ್ಮ; ಪುಟಗಳು: ೨೦; ಬೆಲೆ: ೧೮ ರೂ.ಗಳು.

'ಮನೆ' ಎಂಬುದು ನಮ್ಮಲ್ಲಿ ಭಾವನಾತ್ಮಕವಾಗಿ ಬೆರೆತ ಒಂದು ಸಂಪನ್ನ ಶಬ್ದ. ಪ್ರತಿಯೊಂದು ಜೀವ-ಜಂತುಗಳಿಗೂ ಆಶ್ರಯ ಅತ್ಯವಶ್ಯಕವಾಗಿ ಬೇಕು. ಈ ವ್ಯಾಪ್ತಿಯಲ್ಲಿ ಅವುಗಳ ವಿಕಸನ ಸಾಧ್ಯ. ಆದ್ದರಿಂದ 'ಮನೆ' ಒಂದು ಮೂಲಭೂತ ಅವಶ್ಯವೆನಿಸುತ್ತದೆ. ಪ್ರತಿಯೊಂದು ಜೀವಿಯು ಹುಟ್ಟಿನೊಂದಿಗೇ ಮನೆ ತನ್ನ ಅವಿನಾಭಾವ ಸಂಬಂಧವನ್ನು ಪಡೆದುಕೊಂಡಿರುತ್ತದೆ. ಆದ್ದರಿಂದ ಮನೆ ಎಂಬುದು ಸುಖ, ಶಾಂತಿ,

ನೆಮ್ಮದಿ, ಪ್ರೀತಿ ಮತ್ತು ಪ್ರೇಮಗಳ ತಾಣ.

ಇಂತಹ ಅಪೂರ್ವ ಶಬ್ದ 'ಮನೆ'ಯ ಬಗ್ಗೆ ತಿಳಿಸಿಕೊಡುವ ಶ್ರೀಮತಿ ಬಿ. ಕೆ. ತಿರುಮಲಮ್ಮ ಅವರ ಕೃತಿ 'ನಮ್ಮ ಮನೆ' ಈ ಪುಸ್ತಕದಲ್ಲಿ ಮಕ್ಕಳಿಗೆ ಚಿರಪರಿಚಿತವಾದ ಬೇರೆ ಬೇರೆ ಪ್ರಾಣಿಗಳ ಮನೆಗಳ ಸ್ವರೂಪವನ್ನು ವಿವರಿಸಲಾಗಿದೆ. ಗೆದ್ದಲು ಹುಳು, ಜೇನುಹುಳು, ಬಸವನ ಹುಳು, ಹಾವು, ಹಕ್ಕಿ, ಮೊಲ, ಅಳಿಲು, ಮುಳ್ಳು ಹಂದಿ, ಸಿಂಹ, ಕೋಳಿ, ಕುರಿ, ನಾಯಿ, ಹಸು, ಕುದುರೆ, ಗಿಳಿ ಮತ್ತು ಮನುಷ್ಯ ಇವುಗಳ ಸಚಿತ್ರ ಮನೆಯ ವಿವರಣೆಯನ್ನು ನೀಡಲಾಗಿದೆ. ವಾಕ್ಯಗಳು ಚಿಕ್ಕದಾಗಿದ್ದು, ಸುಲಭಗ್ರಾಹ್ಯವಾಗಿವೆ. ಆದ್ದರಿಂದ ಓದು, ಕಾಗುಣಿತ ಮತ್ತು ಮನನ 'ವೃದ್ಧಿಸಲು ಸಹಾಯಕವಾಗಿವೆ. ಪ್ರತಿಯೊಂದು ಪಾಠದಲ್ಲಿಯೂ ಇರುವ ರೇಖಾ ಚಿತ್ರಗಳಿಗೆ ಬಣ್ಣ ತುಂಬುವಂತೆ ಸೂಚಿಸಿರುವುದು ಸಮಂಜಸವಾಗಿದೆ. ಬಣ್ಣ ತುಂಬುವ ಕೆಲಸದಿಂದ ಮಕ್ಕಳಿಗೆ ಆನಂದ ಸಿಕ್ಕುತ್ತದೆ.

ಇಲ್ಲಿ ಪಂಜರವನ್ನು 'ಗಿಳಿಯ ಮನೆ' ಎಂಬರ್ಥದಲ್ಲಿ ರೇಖಿಸಿರುವುದು ಸೂಕ್ತವೆನಿಸಲಾರದು. ಗಿಳಿಯ ಸಕಲ ಸ್ವಾತಂತ್ರ್ಯಗಳ ಹರಣಗೈದು, ತನ್ನೊಳಗೆ ಬಂದಿಯನ್ನಾಗಿಸಿಕೊಂಡ ಪಂಜರ 'ಮನೆ' ಎಂಬರ್ಥಕ್ಕೆ ಅಪವಾದವಾಗಿದೆ.

ಎಲ್ಲಾ ಪ್ರಾಣಿಗಳನ್ನೂ ತನ್ನ ಅಂಕೆಯಲ್ಲಿಟ್ಟುಕೊಳ್ಳುವ ಸಮರ್ಥ ಬುದ್ಧಿವಂತ ಪ್ರಾಣಿ ಮನುಷ್ಯನ ವಿವರಣೆಯನ್ನು ಕೊನೆಯಲ್ಲಿ ನೀಡಲಾಗಿದೆ. ಒಂದು ಸಂಕುಲಕ್ಕೆ ಸೇರಿದ ಪ್ರಾಣಿಗಳ 'ಮನೆಗಳ ಸ್ವರೂಪ ಒಂದೇ ತೆರನಾಗಿರುತ್ತದೆ. ಆದರೆ ಮಾನವನ ಮನೆಗಳು ಮಾತ್ರ ವೈವಿಧ್ಯತೆಯಿಂದ ಕೂಡಿರುತ್ತವೆ. ಗುಡಿಸಲು, ಹಟ್ಟಿ, ಮನೆ, ಬಂಗಲೆ ಮತ್ತು ಅರಮನೆ ಇವೇ ಮೊದಲಾದ ಮನುಷ್ಯರ ಮನೆಗಳು ಅಂತಸ್ತುಗಳ (ವರ್ಗ) ಸೂಚಕವೆನಿಸುತ್ತವೆ.

ಗುಜ್ಜಾರ್ ಅವರ ಒಳಪುಟಗಳಲ್ಲಿರುವ ೧೭ ರೇಖಾ ಚಿತ್ರಗಳೊಂದಿಗೆ ಪುಸ್ತಕದ ಹೊರಮೈ ವರ್ಣಚಿತ್ರಗಳು ಆಕರ್ಷಕವಾಗಿವೆ. ದಪ್ಪದಪ್ಪ ಅಕ್ಷರಗಳ ಮುದ್ರಣ ಅಂದವಾಗಿದ್ದು, ಮಕ್ಕಳು ಸುಲಭವಾಗಿ ಓದಲು ಅನುಕೂಲವೆನಿಸಿದೆ.

ಕಂದಾ ಓದುವೆಯಾ ?—ಭಾಗ-೧ ; ಲೇಖಕರು: ಬಿ. ಕೆ. ತಿರುಮಲಮ್ಮ ; ಪುಟಗಳು: ೩೪ ; ಬೆಲೆ: ೧೮ ರೂ.ಗಳು.

ಮಕ್ಕಳ ಮನೋಸ್ಥಿತಿ, ಕಲಿಕೆ, ಓದು-ಬರಹ ಇತ್ಯಾದಿ-ಮಕ್ಕಳ ಅಂತರಂಗದ ಭಾವನೆಗಳನ್ನು ಅರ್ಥಮಾಡಿಕೊಂಡು, ಪಠ್ಯವನ್ನು ರೂಪಿಸಿ, ತಮ್ಮ ವಿದ್ಯಾಸಂಸ್ಥೆಯಲ್ಲಿಯೇ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸಿ ಯಶಸ್ವಿಯಾದ ಶ್ರೀಮತಿ ತಿರುಮಲಮ್ಮನವರು ಬರೆದ ಕಂದಾ ಓದುವೆಯಾ? ಭಾಗ-೧ ಗಮನಾರ್ಹವಾದುದು.

ಅವರು ಮಕ್ಕಳ ಕಲಿಯುವ ಆಸಕ್ತಿಗೆ ಪೂರಕವಾಗಿ ಈ ಪುಸ್ತಕವನ್ನು ರಚಿಸಿದ್ದಾರೆ. ಇದರಲ್ಲಿರುವ ಚಿಕ್ಕ ಚಿಕ್ಕ ವಾಕ್ಯಗಳು ಸರಳವಾದ ಪದಗಳಿಂದ ಕೂಡಿ, ಮಕ್ಕಳ ಅನುಭವದ ಹಿಡಿತಕ್ಕೆ ಸಿಕ್ಕುತ್ತವೆ. ಮಕ್ಕಳ ಕಲಿಕೆಯ ದೃಷ್ಟಿಯಿಂದ ಆಯ್ಕೆ ಮಾಡಿಕೊಂಡಿರುವ ವಿಷಯ ವಸ್ತುಗಳು

ಮಕ್ಕಳ ಆಸಕ್ತಿಗೆ ಪೂರಕವಾಗಿವೆ. ದಿನನಿತ್ಯ ಬಳಕೆಯಲ್ಲಿರುವ ಈ ಪದಗಳ ಸ್ವರೂಪವನ್ನು ಅರ್ಥೈಸಿರುವ ರೀತಿ, ಸರಳ.

ರಸ್ತೆಯಲ್ಲಿ ನಡೆಯುವಾಗ ಅನುಸರಿಸಬೇಕಾದ ನಿಯಮಗಳು, ರಸ್ತೆ ಬದಿಯಲ್ಲಿ ಮಾರುವ ಪಾನೀಯಗಳ ಅಪಾಯ, ಹೊರಾಂಗಣ ಮತ್ತು ಒಳಾಂಗಣ ಆಟಗಳು ವಾಹನಗಳ ಪರಿಚಯ, ಬಾಳೆಯ ಪ್ರಯೋಜನಗಳು ಇತ್ಯಾದಿ-ಅರಿವನ್ನುಂಟು ಮಾಡುವ ವಿಷಯಗಳು ಪರಿಣಾಮಕಾರಿಯಾಗಿ ನಿರೂಪಿತವಾಗಿವೆ.

ಪುಸ್ತಕದಲ್ಲಿ ೧೯ ಅಧ್ಯಾಯಗಳಿದ್ದು, 'ರೈಲು' ಪದವೊಂದನ್ನು ಬಿಟ್ಟು ಒತ್ತಕ್ಷರಗಳಿಲ್ಲದ ಸರಳ ಪದಗಳು ಮಕ್ಕಳ ಪ್ರಾಥಮಿಕ ಕಲಿಕೆಗೆ ಸಹಾಯಕವಾಗಿವೆ. ಇದಕ್ಕೆ ಪೂರಕವಾಗಿ ಒಳಪುಟಗಳಲ್ಲಿರುವ ರೇಖಾಚಿತ್ರಗಳು ವಿಷಯ ನಿರೂಪಣೆಗೆ ಪೂರಕವಾಗಿದ್ದು, ಮಕ್ಕಳ ಮನಸ್ಸಿಗೆ ಉಲ್ಲಾಸವನ್ನು ನೀಡುತ್ತವೆ. ಗುಜ್ಜಾರ್ ಅವರ ರಕ್ಷಾಪುಟದ ವರ್ಣಚಿತ್ರಗಳು ಆಕರ್ಷಿತವಾಗಿವೆ.

"೧೯೮೯"ರಲ್ಲಿ ನಮ್ಮ ಮಲ್ಲೇಶ್ವರಂ ಶಿಶುವಿಹಾರದ ಮಕ್ಕಳಿಗಾಗಿ ಕಂದಾ ಓದುವೆಯಾ? ಭಾಗ-೧ನಲ್ಲಿ ಇರುವ ಪಾಠಗಳು ಅನುಭವಕ್ಕೆ, ಸಿಕ್ಕುವುದರಿಂದ ಅವರು ಓದಿದಾಗ ಚೆನ್ನಾಗಿ ಅರ್ಥಮಾಡಿಕೊಂಡರಲ್ಲದೆ, ತಾವೇ ಸ್ವತಃ ಕೆಲವು ವಾಕ್ಯಗಳನ್ನು ರಚಿಸಲು ಪ್ರಯತ್ನಿಸಿದರು. ಇದರಿಂದ ಮಕ್ಕಳ ಕಲಿಕೆಯಲ್ಲಿ ಆಸಕ್ತಿ ತಳೆಯಲು ಸಹಾಯಕವಾಯಿತು ಎಂದಿರುವ ಶ್ರೀಮತಿ ತಿರುಮಲಮ್ಮ ಅವರ ಮಾತುಗಳನ್ನು ಈ ಪುಸ್ತಕ ಪುಷ್ಟೀಕರಿಸುತ್ತದೆ.

ಕಂದಾ ಓದುವೆಯಾ?—ಭಾಗ-೨; ಲೇಖಕರು: ಬಿ. ಕೆ. ತಿರುಮಲಮ್ಮ; ಪುಟಗಳು: ೨೮; ಬೆಲೆ: ೧೮ ರೂ.ಗಳು.

ಅಕ್ಷರಾಭ್ಯಾಸ, ಕಾಗುಣಿತ ಮತ್ತು ಸರಳ ಪದಗಳನ್ನು ಕಲಿತ ಮಗು, ಒತ್ತಕ್ಷರಗಳ ಸ್ವರೂಪಗಳನ್ನು ಅರ್ಥ ಮಾಡಿಕೊಂಡು ಕಲಿಯಲು ಸಹಾಯವಾಗುವ ಪುಸ್ತಕವೇ ಕಂದಾ ಓದುವೆಯಾ? ಭಾಗ-೨.

ಈ ಪುಸ್ತಕದಲ್ಲಿ ಕ, ಗ, ಚ, ಜ, ಟ, ಡ, ಣ, ತ, ದ, ನ, ಪ, ಬ, ಮ, ಯ, ರ, ಲ, ವ, ಷ, ಸ, ಳ—ಈ ೨೦ ಅಕ್ಷರಗಳ ಪ್ರತಿಯೊಂದಕ್ಕೂ ಕನಿಷ್ಠ ೧೦ ವಿವಿಧ ಒತ್ತಕ್ಷರಗಳುಳ್ಳ ಪದಗಳನ್ನು, ಒತ್ತಕ್ಷರಗಳ ಸ್ಪಷ್ಟನೆಗಾಗಿ ಕೊಡಲಾಗಿದೆ. ಈ ಮೂಲಕ ಒತ್ತಕ್ಷರಗಳ ಸ್ವರೂಪವನ್ನು ಸರಳವಾಗಿ ಅರ್ಥೈಸುವ ತಂತ್ರವನ್ನು, ಲೇಖಕರು ಒಳಸಿಕೊಂಡಿದ್ದಾರೆ. ಪುಟಗಳ ಸಂಖ್ಯೆಯಿಂದ ಪುಸ್ತಕ ಕಿರಿದಾದರೂ, ವಿಷಯಗಳ ಹರವು ವಿಸ್ತಾರವಾಗಿದೆ. ಮಕ್ಕಳದಿನ, ಅಡುಗೆ ಮನೆ ತಿಂಡಿಗಳು, ರೈತ, ಸುಗ್ಗಿಯ ಕಾಲ, ದೋಣಿ ಇತ್ಯಾದಿ. ೨೦ಕ್ಕೂ ಹೆಚ್ಚು ವಿಷಯಗಳ ಪ್ರಾಥಮಿಕ ಅರಿವು ಇಲ್ಲಿದೆ. ನಮ್ಮ ಸಂಸ್ಕೃತಿಯ ಭಾಗವಾದ ರಾಮಾಯಣ ಮತ್ತು ಮಹಾಭಾರತಗಳಲ್ಲಿ, ಒಳಿತು-ಕೆಡುಕುಗಳ ಸಂಘರ್ಷವನ್ನು ಸಮರ್ಥವಾಗಿ ಚಿತ್ರಿಸಿದ್ದಾರೆ. ನಮ್ಮ ಮೌಲ್ಯಗಳಿಗೆ ಮಹತ್ವವನ್ನು ಕೊಡುವ ಅನಿವಾರ್ಯತೆಯ ಕಳಕಳಿಯನ್ನು ಇಲ್ಲಿ ಕಾಣಬಹುದು.

ಕೆಲವು ಕಡೆ ವಿಷಯಕ್ಕನುಗುಣವಾದ ಬಂಧವಿರದಿದ್ದರೂ, ಮಕ್ಕಳ ಕಲಿಕೆಗೆ

ಸಹಕಾರಿಯಾಗಿದೆ. ಕಿರಿದರಲ್ಲಿ ಹಿರಿಯದನ್ನು ತುಂಬುವ ಲೇಖಕರ ಯತ್ನ ಸ್ತುತ್ಯವಾದುದು. ಪುಸ್ತಕದ ಹೂರಣವನ್ನು ಪ್ರತಿಬಿಂಬಿಸುವ ಗುಜ್ಜಾರ್ ಅವರ ರಕ್ಷಾಪುಟದ ವರ್ಣ ಚಿತ್ರಗಳು ಮತ್ತು ಒಳಪುಟಗಳಲ್ಲಿ ಇರುವ ೨೩ ರೇಖಾ ಚಿತ್ರಗಳು ವಿಷಯ ಸ್ಪಷ್ಟನೆಗೆ ಸಹಕಾರಿಯಾಗಿವೆ.

ಅಮಾಸನ ಪಾಠಗಳು—ಲೇಖಕರು: ಡಾ|| ಆರ್ಕೆ. ಮಣಿಪಾಲ; ಪುಟಗಳು: ೭೭; ಬೆಲೆ: ೨೮ ರೂ.ಗಳು.

'ಅಮಾಸನ ಪಾಠಗಳು'. ಈ ಪುಸ್ತಕದಲ್ಲಿ ೧೨ ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಕನ್ನಡ ಅಕ್ಷರ ಮಾಲೆಯಲ್ಲಿನ ಅಃ, ಙ ಮತ್ತು ಞ ಈ ಮೂರು ಅಕ್ಷರಗಳ ಹೊರತಾಗಿ ಉಳಿದ ಅಕ್ಷರಗಳ ಸ್ವರೂಪವನ್ನು ಮಾಡಿಕೊಡುವ ಪ್ರಯತ್ನ ಇಲ್ಲಿದೆ. ಆಯಾ ಅಕ್ಷರಗಳ ಮುಂದೆ, ಆ ಅಕ್ಷರಗಳ ಪ್ರಾಧಾನ್ಯತೆಯನ್ನು ಸೂಚಿಸುವ ನುಡಿಗಟ್ಟುಗಳನ್ನು ಕೊಡಲಾಗಿದೆ. ಜನಶಕ್ತಿಯ ಮುಂದೆ ಅಣುಶಕ್ತಿ ಎಲ್ಲಿ? ಇಂತಹ ಜೀವನಾನುಭವದ ಸಾಂಧ್ರತೆ ಉಳ್ಳ, ಕೆಲವು ನುಡಿಗಟ್ಟುಗಳು ಚೆನ್ನಾಗಿವೆ.

'ಅಮಾಸನ ಪಾಠಗಳು' ಪುಸ್ತಕ ಇಂದಿನ ಸಮಾಜದ ಕೆಲವು ಕಟು ವಾಸ್ತವಗಳನ್ನು ದರ್ಶಿಸುತ್ತಲೇ, ಅಮಾಸನ ಮೂಲಕ ಅವುಗಳ ಮೇಲೆ ಕ್ಷಕಿರಣಗಳನ್ನು ಹಾಯಿಸಲಾಗಿದೆ. ತಪ್ಪೆಂದು ತಿಳಿದೂ, ಅವುಗಳನ್ನೇ ಮೌಲ್ಯಗಳು ಎಂದು ಒಪ್ಪಿಕೊಂಡಿರುವ ನಮ್ಮ ಮನಸ್ಸುಗಳು ಪುನರ್ ವಿಮರ್ಶೆಗೆ ಒಳಗಾಗುತ್ತವೆ.

'ಅಮಾಸನ ಸವಾರಿ ಸಂತೆಗೆ ಹೋದುದು' ಪಾಠದಲ್ಲಿ ತರಕಾರಿಗಳ ತಾರತಮ್ಯದ ಬೆಲೆಗಳು ಮಾರುಕಟ್ಟೆಯ ವ್ಯವಸ್ಥೆ, ರೈತ-ದಲ್ಲಾಳಿ-ವ್ಯಾಪಾರಿ ಈ ಹಿನ್ನೆಲೆಯಲ್ಲಿ ಆರ್ಥಿಕ, ಸಾಮಾಜಿಕ ಸ್ವಾವಲಂಬನೆ ಮತ್ತು ಆರೋಗ್ಯ ಪ್ರಜ್ಞೆಯ ಕೊರತೆಯನ್ನು ಬಿಂಬಿಸಲಾಗಿದೆ.

ತಾಯಿಯ ಜೊತೆಯಲ್ಲಿ ದೇವಸ್ಥಾನಕ್ಕೆ ಹೋದ ಅಮಾಸನಿಗೆ ಅಲ್ಲಿಯ ರೀತಿ-ನೀತಿಗಳು ವಿಚಿತ್ರವಾಗಿ ಕಾಣುತ್ತವೆ. ಹರಕೆ, ದೇವರ ವರ, ಭಿಕ್ಷುಕರು, ಕಾಣಿಕೆ ಮತ್ತು ಪೂಜಾರಿ ಇವುಗಳ ಬಗ್ಗೆ ನೀಡಿದ ಅಮ್ಮನ ವಿವರಣೆ, ಪ್ರಗತಿಶೀಲ ಅಮಾಸನಿಗೆ ಅರ್ಥಹೀನವಾಗಿ ಕಾಣಿಸುತ್ತವೆ. ಬಡವರನ್ನು ಹಿಂಸಿಸಿ ಸತ್ವಪರೀಕ್ಷೆ ಮಾಡಿ; ಲೋಕಕ್ಕೆ ತೋರಿಸುವ ಬದಲು ಇಡೀ ಲೋಕವನ್ನೇ ಪ್ರಮಾಣೀಕರಿಸುವ ಪ್ರಯತ್ನವನ್ನು ದೇವರೇಕೆ ಮಾಡಬಾರದು ಎಂದು ಪ್ರಶ್ನಿಸುತ್ತಾನೆ. ಸಮಾಜ ಒಪ್ಪಿಕೊಂಡ ರೀತಿ-ನೀತಿಗಳನ್ನು ವಿಚಾರದ ಒರೆಗಲ್ಲಿಗೆ ಹಚ್ಚುತ್ತಾನೆ.

ಅಮಾಸ ಹೋದ ಕಡೆಯಲ್ಲೆಲ್ಲಾ ಅವನಲ್ಲಿ ವಿಚಾರಶೀಲ ಪ್ರಶ್ನೆಗಳು ಗರಿಗೆದರುತ್ತವೆ. ಪಡಿತರ ಸಮಸ್ಯೆ, ನಾವೆಲ್ಲಾ ಒಂದು ಎನ್ನುವವರ ಅಂತರಂಗದರ್ಶನ, ಹರಿಕಥೆ, ದೇವರ ಸೃಷ್ಟಿ, ಜನಪದ ಕಲೆ, ಆಸ್ಪತ್ರೆ, ಜಗತ್ತು, 'ಮತದಾನ' ಇವೇ ಮುಂತಾದ ವ್ಯವಸ್ಥೆಗಳ ವಾಸ್ತವ ದರ್ಶನದ ಪ್ರಯತ್ನ ಇಲ್ಲಿದೆ. ಅಮಾಸ ಒಬ್ಬ ಧೀರ ನಿಷ್ಠುರ, ವಿಚಾರಶೀಲ ವಿದ್ಯಾರ್ಥಿ. ನಂಬಿಕೆಗಳ ಮತ್ತು ವಾಸ್ತವಗಳನ್ನು ವಿಚಾರ ಮಾಡಿದಲ್ಲದೆ ಒಪ್ಪಿಕೊಳ್ಳುವುದಿಲ್ಲ. ಅವನು ಗುರುಗಳ

ವಿಚಾರಗಳನ್ನೂ ಪ್ರಶ್ನಿಸುವ ಧೈರ್ಯವನ್ನು ತೋರುತ್ತಾನೆ. ಸಮಸ್ಯೆಗಳ ಕಟುವಾಸ್ತವಗಳನ್ನು ಲೋಕಕ್ಕೆ ದರ್ಶಿಸುವ ಅವನ ಪ್ರಜ್ಞಾವಂತ ಮತ್ತು ಪ್ರಾಮಾಣಿಕ ಪ್ರಯತ್ನದ ತುಡಿತವನ್ನು ಗಮನಿಸಬಹುದು.

ವಾಸ್ತವ ಸಂಗತಿಗಳ ವಿಚಾರಶೀಲ ವಿಡಂಬನೆಗಾಗಿ ವಿದ್ಯಾರ್ಥಿ ಸಮೂಹದ ಪ್ರತಿನಿಧಿ ಅಮಾಸನನ್ನು ಬಳಸಿಕೊಂಡಿರುವುದು ಅತ್ಯಂತ ಸೂಕ್ತವಾಗಿದೆ. ಈ ದೃಷ್ಟಿಯಲ್ಲಿ ಲೇಖಕರ ತಂತ್ರ ಗಮನಾರ್ಹವಾದುದು. ಪಾಠಗಳು ಸಂಭಾಷಣಾ ರೂಪದಲ್ಲಿರುವುದರಿಂದಲೂ ಸುಲಭಗ್ರಾಹ್ಯವಾಗಿದೆ.

ಪುಸ್ತಕದ ಒಳಪುಟಗಳಲ್ಲಿರುವ ೧೨ ರೇಖಾ ಚಿತ್ರಗಳು ವಿಷಯಗಳಿಗೆ ಪೂರಕವಾಗಿ ಶಾಲಾಮಕ್ಕಳ ವರ್ಣ ಚಿತ್ರಗಳಿರುವ ರಕ್ಷಾ ಪುಟಗಳು ಆಕರ್ಷಕವಾಗಿವೆ.

ರಂಗಧಾಮಯ್ಯ

ಬಿ. ೯೪
ಸಿಎಫ್‌ಟಿಆರ್‌ಐ ಕಾಲೋನಿ
ಮೈಸೂರು-೧೩



ತಾವಾಗಲಿ ತಮ್ಮ ಚಾರಿಟಿಯ ಸೋದರ ಸೋದರಿಯರೇ ಆಗಲಿ ಸಮಾಜ ಸೇವಾಕರ್ತರಲ್ಲ. ನಾವು ದೇವವಾಣಿಯನ್ನು ಎಲ್ಲೆಡೆ ಹರಡುವವರು.

"ದೀನರ ನೋವುಂಡವರ ಸೇವೆಯೇ ಜೀಸಸ್‌ನ ಸೇವೆ"

—ಮದರ್ ತೆರೆಸಾ

ಜಿ. ಟಿ. ನಾರಾಯಣರಾವ್ ಅವರ

'ನಕ್ಷತ್ರ ವೀಕ್ಷಣೆ'

ಎರಡನೆಯ ಮುದ್ರಣದಲ್ಲಿ ಸಮಿತಿಯಿಂದ ಪ್ರಕಟವಾಗಿ ಮಾರಾಟಕ್ಕಿದೆ. ೧೨೦ ಪುಟಗಳ ಆಫ್‌ಸೆಟ್ ಮುದ್ರಣದ ಅಂದವಾದ ಈ ಕೃತಿಯ ಬೆಲೆ ಕೇವಲ ೨೦-೦೦ ರೂ.ಗಳು ಮಾತ್ರ. ಅಂಚೆ ಮೂಲಕ ಬೇಕಾದಲ್ಲಿ ಒಂದು ಪ್ರತಿಗೆ ೧೫-೦೦ ರೂ. ಪ್ರತ್ಯೇಕ.

"ನೀಲಿಯಾಕಾಶದಲ್ಲಿ ರಾತ್ರಿ ಹೊತ್ತು ಮಿನುಗುತ್ತ ವಿಸ್ಮಯಗೊಳಿಸುವ ನಕ್ಷತ್ರಗಳ ಬಗ್ಗೆ ನಮಗೆಷ್ಟು ಗೊತ್ತು? ಹೊಳೆವ ಪ್ರತಿಯೊಂದು ನಕ್ಷತ್ರದ ಹಿಂದೆ ದೊಡ್ಡ ಇತಿಹಾಸವಿದೆ ಎಂದು ಬಲ್ಲವರು ಎಷ್ಟು ಜನ? ಎಣಿಕೆಗೆ ನಿಲುಕದ ಬೆಳಕಿನ ಹುಡಿಗಳ ಬಗ್ಗೆ ಆಸಕ್ತಿ ವಹಿಸಿ ಅರಸುತ್ತಾ ಹೊರಟ ಜನರಿಗೆ ಮಾಹಿತಿ ದೊರೆಯುವುದು ಅಷ್ಟು ಸುಲಭದ ಮಾತಲ್ಲ. ಕನ್ನಡ ಸಾಹಿತ್ಯದಲ್ಲಂತೂ ವೈಜ್ಞಾನಿಕ ದೃಷ್ಟಿಯಿಂದ ನಕ್ಷತ್ರಗಳ ವಿವರ ದೊರೆಯುವುದು ದುರ್ಲಭ. ಈ ಕೊರತೆ ನಿವಾರಿಸುವಲ್ಲಿ ಶ್ರೀ ಜಿ. ಟಿ. ನಾರಾಯಣರಾಯರ "ನಕ್ಷತ್ರ ವೀಕ್ಷಣೆ" ಮಹತ್ವದ ಕೃತಿ.

ನಾರಾಯಣರಾಯರ ಬರವಣಿಗೆ ಶೈಲಿ ಓದುಗರಿಗೆ ಇದೊಂದು ಶಾಸ್ತ್ರ ಗ್ರಂಥ ಎಂದು ಅನಿಸುವುದೇ ಇಲ್ಲ. ಈ ಕೃತಿ ಓದುತ್ತ ಹೋದಂತೆ ರಮ್ಯ ಕಥಾನಕ ಓದಿದ ಅನುಭವ ಆಗುವುದು ಸಹಜ. ಚಿತ್ರ, ಸಂಖ್ಯೆ, ರೂಪಕ, ಕತೆ, ವಿವರಣೆ, ಪದ್ಯ ಹೀಗೆ ಹಲವು ಅಂಶಗಳಿಂದ ಓದುಗನಿಗೆ ತಾನರಿಯದ ಜಗತ್ತಿನ ಬಗ್ಗೆ ಕುತೂಹಲ ಕೆರಳಿಸುವಲ್ಲಿ ಈ ಕೃತಿ ಯಶಸ್ವಿಯಾಗುತ್ತದೆ. ಎರಡನೆಯ ಮುದ್ರಣ ಕಂಡಿರುವುದೇ "ನಕ್ಷತ್ರ ವೀಕ್ಷಣೆ"ಯ ಜನಪ್ರಿಯತೆಗೆ ಹಿಡಿದ ಕೈಗನ್ನಡಿ."

(೩-೮-೯೭ರ 'ಸುಧಾ' ವಾರಪತ್ರಿಕೆಯ "ಪುಸ್ತಕ ಪ್ರೀತಿ" ಅಂಕಣದಿಂದ)

ಪ್ರತಿಗಳಿಗಾಗಿ ಸಂಪರ್ಕಿಸಿ :

ಪ್ರಧಾನ ಸಂಪಾದಕ
ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ
ಮಾನಸಗಂಗೋತ್ರಿ, ಮೈಸೂರು-೫೭೦೦೦೬

Reg. No. KRNN.29 / WPP 6

LICENCE No. 21
LICENCED TO POST WITH PAYMENT

'ಕುವೆಂಪು' ಅವರ
"ಜನಪ್ರಿಯ ವಾಲ್ಮೀಕಿ ರಾಮಾಯಣ"



ಒಂಬತ್ತನೆಯ ಮುದ್ರಣದಲ್ಲಿ ಸಮಿತಿ ಪ್ರಕಟಿಸಿರುವ ಜನಪ್ರಿಯ ಕೃತಿ.

ಸರಳ ಗದ್ಯದ ಅಂದವಾದ ಮುದ್ರಣದಲ್ಲಿ ೪೨೬ ಪುಟಗಳ ಸಮಗ್ರ ರಾಮಾಯಣ ಕೇವಲ ೫೪ ರೂ.ಗಳಿಗೆ ದೊರೆಯುತ್ತದೆ. (ಅಂಚೆ ವೆಚ್ಚ ೧ ಪ್ರತಿಗೆ ೨೦ ರೂ. ಪ್ರತ್ಯೇಕ.)

ಹೆಚ್ಚಿನ ವಿವರಗಳಿಗೆ: ಪ್ರಧಾನ ಸಂಪಾದಕ

ಪ್ರಕಟಣ ಶಾಖೆ, ಕರ್ನಾಟಕ ರಾಜ್ಯ ವಯಸ್ಕರ ಶಿಕ್ಷಣ ಸಮಿತಿ
ನಂ. ೫/೧, ವಿನೋಬಾ ರಸ್ತೆ, ಮಾನಸಗಂಗೋತ್ರಿ, ಮೈಸೂರು

Edited by Chandrashekhararadhya, Printed by Papanna
Printed & Published by Karnataka State Adult Education Council,
5/1, Vinoba Road, Manasa Gangothri, Mysore-570 006.

Phone: 512485